ಹಬ್ಬದ ಉಡುಗೊರೆ
ಮತ್ತು
ಇತರ ಪ್ರಸಾರ ನಾಟಕಗಳು

ಯಾ ರಾಜಶೇಖರ್

O33,1N62,1
M4R

ಪ್ರಕಾಶಕರು :
ಸಿರಿ ಪ್ರಕಾಶನ
33, 3ನೇ ಬ್ಲಾಕ್, ಜಯನಗರ, ಬೆಂಗಳೂರು - 560 011

033,2N62,1 7151
M4R
Rajashekhar, Jaya.
tobhada udugore
mattu: ithana,
praanata

O33,2N62,1
M4R

7151

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

❁❁❁❁❁

Please return this volume on or before the date last stamped
Overdue volume will be charged 1/- per day.

33,2N62,1 7151
M4R
jashekhar, Jaya.
bhada udugore
mattu: ithana,
[illegible] praanata

ಬ

ಮತ್ತು
ತರ ಪ್ರಸಾರ ನಾಟಕಗಳು

ಜಯಾ ರಾಜಶೇಖರ್

ಪ್ರಕಾಶಕರು :

ಸಿರಿ ಪ್ರಕಾಶನ

33, 3ನೇ ಬ್ಲಾಕು, ಜಯನಗರ, ಬೆಂಗಳೂರು - 560 011

HABBADA UDUGORE MATHU ITHARA PRASARA NATAKAGALU— A Collection of Radio Plays, written by Smt. Jaya Rajasekhar, M.A., published by Siri Prakashana 33, III Block, Jayanagar, Bangalore - 560010
Pages 72+XII. Price Rs. 6/-.

033,2N62,1
M4R

© ಲೇಖಕಿಯರವು

ಬೆಲೆ : ಅರು ರೂಪಾಯಿಗಳು

JAGADGURU VISHWARADH
NA SIMHASAN JNANAMAND
LIBRARY
angamawadi Math, Varanas
No. 7151

ಮುದ್ರಕರು :
ಲೋಟಸ್ ಪ್ರಿಂಟರ್ಸ್
ರಾಜಾಜಿನಗರ, ಬೆಂಗಳೂರು–10

ಮುನ್ನುಡಿ

ಕೇವಲ ಶ್ರವಣಮಾಧ್ಯಮವನ್ನೇ ತನ್ನ ಪ್ರಣಾಳಿಕೆಯಾಗುಳ್ಳ ಪ್ರಸಾರ ನಾಟಕಕ್ಕೆ ಅದರದೇ ಆದ ಕೆಲವು ಮಿತಿಗಳೂ ಇವೆ, ವೈಶಿಷ್ಟ್ಯಗಳೂ ಇವೆ. ರೇಡಿಯೋ ಒಂದನ್ನುಳಿದು ಉಳಿದ ಕ್ಷೇತ್ರದಲ್ಲಿ ಅದರ ಕೈ ಸಾಗುವುದಿಲ್ಲ; ಇದು ಅದರ ಮಿತಿ: ಶ್ರವಣ ಮಾತ್ರದಿಂದಲೇ, ಶ್ರೋತೃಗಳಿಗೆ ಪಂಚೇಂದ್ರಿಯ ಸೌಖ್ಯವನ್ನು ಉದ್ಭಾವಿಪ ನಿರ್ಮಲ ಮೂರ್ತಿ ಎನಿಸಿದ್ದು ಅದರ ವೈಶಿಷ್ಟ್ಯ. ಇದು ದೃಶ್ಯ ಮಾಧ್ಯಮಗಳಾದ ರಂಗನಾಟಕ, ಅಪೆರಾ, ಟೆಲಿವಿಷನ್, ಪ್ರದರ್ಶನಗಳು ಇವುಗಳಿಂದ ಭಿನ್ನವಾದದ್ದು. ಯಾವುದೇ ರಂಗಸಜ್ಜಿಕೆಯಾಗಲಿ, ಪಾತ್ರಗಳ ಪ್ರತ್ಯಕ್ಷ ದರ್ಶನ ಅಥವಾ ಅದರ ಆಂಗಿಕ ಅಭಿನಯವಾಗಲಿ ಬೆಳಕು–ಕತ್ತಲೆಗಳ ಜಾಲವಾಗಲಿ ಯಾವುದೂ ಕಣ್ಣೆದುರಿನಲ್ಲಿಲ್ಲ; ಸಕಲಕ್ಕೂ ಕಿವಿಯೊಂದೇ ಪ್ರಾಮಾಣ್ಯ. ಇಂತಪ ಅಮೂರ್ತ ಅಪ್ರತ್ಯಕ್ಷ ಅಥವಾ ಪರೋಕ್ಷ ಕ್ರಿಯಾಶೀಲ ಕಲೆಗೆ ಶಬ್ದದ್ರವ್ಯ ಪೂರ್ಣಸಹಕಾರಿ. ಸಾಂದರ್ಭಿಕವಾಗಿ ಅದರೊಡನೆ ಶಬ್ದ ಸಂಯೋಜನೆ ಅಥವಾ ನಾದದ ಮೋದ ಬೆರೆತರೆ ಮಾತ್ರ ಪ್ರಸಾರ ನಾಟಕ ತನ್ನ ಜೀವಂತಿಕೆಯನ್ನು ಉಳಿಸಿಕೊಳ್ಳ ಬಲ್ಲುದು. ಹೇಳಿ ಕೇಳಿ ನಾಟಕ ಒಂದು ಸಂಕೀರ್ಣ ಕಲೆ (Collective Art) ಅದರದ್ದಾದ ಪ್ರಸಾರ ನಾಟಕವಂತೂ ವಿಶೇಷವಾಗಿ ಅನನ್ಯ ಪರತಂತ್ರವಾದ ಕಲೆ.

ಇತ್ತೀಚೆಗೆ ಇದರ ಅನಾನ್ಯೀಕರಣವಾಗುತ್ತಿರುವುದು, ತುಂಬಾ ಶೋಚನೀಯ ಸಂಗತಿ. ಅದಕ್ಕೆ ಕಾರಣ ಇಲ್ಲದೆ ಇಲ್ಲ. 'ಆವಿಷ್ಕಾರಕ್ಕೆ ಆವಶ್ಯಕತೆಯೇ ಮಾತೃಗರ್ಭ' ಎಂಬ ನಾಣ್ಣುಡಿ ಪ್ರಸಾರ ನಾಟಕ ಸಂದರ್ಭದಲ್ಲೂ ಅಪ್ಪಟ ಸತ್ಯ. ಪ್ರಸಾರ ನಾಟಕದ ಕ್ಷೇತ್ರ ತುಂಬಾ ಸೀಮಿತವಾದುದು. ಅದಕ್ಕೆ ರೇಡಿಯೊ ಒಂದೇ ಸಂವಹನ ಮಾಧ್ಯಮ. ಅದರದೇನೇ ಎಷ್ಟೇ ಸಲಕರಣೆಗಳಿದ್ದರೂ ಹೆಲಿಕಾಪ್ಟರಿನ ಶಕ್ತಿಗೆ ಮಾತ್ರ ಬದ್ಧ, ಏರ್‌ಬಸ್‌ನಂತಹ ವೈನತೇಯ ಸಾಹಸ ಅದಕ್ಕಿಲ್ಲ. ಅದರಿಂದಾಗಿ ತನ್ನ ಮಾಧ್ಯಮ ದುರಾಕ್ರಮಣ

ಆದರೆ ಅಥವಾ ಬೇರೊಂದು ಪ್ರದರ್ಶನದ ಪ್ರತ್ಯಾಯೋಜನೆ ನಡೆದರೆ ಇದು ತಾನಾಗಿಯೇ ಶಕ್ತಿಗುಂದಿ, ಕಳೆಗುಂದಿ, ಮೂಲೆ ಸೇರಿಕೊಳ್ಳಬೇಕಾಗುತ್ತದೆ. ಇಂದು ಈ ಪರಿಸ್ಥಿತಿ ಪ್ರಸಾರನಾಟಕಕ್ಕೆ ಬಂದೊದಗಿದೆ ಅನ್ನಿಸುತ್ತದೆ. ಸಿನೆಮಾ ಬಂದು ನಾಟಕವನ್ನು ಕಬಳಿಸಿದಂತೆ, ಟೆಲಿವಿಷನ್ ಬಂದು ರೇಡಿಯೋ ನಾಟಕವನ್ನು ನುಂಗಿ ನೊಣೆಯುತ್ತಿದೆ. ಈ ರಾಹುಗ್ರಸ್ತ ಸ್ಥಿತಿಯಿಂದ ಅದಕ್ಕೆ ಮುಕ್ತಿಕೊಡುವ ಹೊಣೆ ಲೇಖಕರ ಮೇಲಿದೆ. ಈ ಜವಾಬ್ದಾರಿಯನ್ನರಿತು ತಮ್ಮೆಲ್ಲ ಸತ್ತ್ವ ಶಕ್ತಿಗಳನ್ನು ಆದರ ಪ್ರಗತಿಗಾಗಿ ಮೀಸಲಿರಿಸಿ ದುಡಿಯುತ್ತಿರುವವರು ಕನ್ನಡದ ಹೆಸರಾಂತ ಲೇಖಕಿ ಶ್ರೀಮತಿ ಜಯಾ ರಾಜಶೇಖರ್‌ರವರು.

ಎಷ್ಟೋ ಸಂಕೀರ್ಣ ಸ್ವಭಾವದ್ದಿದ್ದರೂ ಆ ನಾಟಕಕಲೆಯನ್ನು ಒಗ್ಗಿಸಿಕೊಂಡ ಒಲಿಸಿ ದುಡಿಸಿಕೊಂಡ ಹಿರಿಮೆ ಶ್ರೀಮತಿ ಜಯಾ ರಾಜಶೇಖರ್‌ರವರದು. ಕತೆ, ಪ್ರಬಂಧಗಳ ಬರೆಹಗಾರ್ತಿಯಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡ ಈ ಸೋದರಿ ನಾಟಕ. ಅಂದರೆ, ಪ್ರಸಾರ ನಾಟಕ, ನೃತ್ಯ ರೂಪಕ, ರಂಗನಾಟಕ ಮೂರೂ ವಿಧದ ನಾಟಕ ರಚನೆಯಲ್ಲಿ ತಮ್ಮ ದಾಖಲೆಯನ್ನು ಸ್ಥಾಪಿಸಿದ್ದಾರೆ. ಇದುವರೆಗೆ ಇವರ ಹತ್ತು ಪ್ರಸಾರ ನಾಟಕಗಳು ಬೆಳಕು ಕಂಡಿವೆ. ಇನ್ನೂ ಇಪ್ಪತ್ತು ಬತ್ತಳಿಕೆಯಲ್ಲಿ ಬೆಚ್ಚಗೆ ಮಲಗಿವೆ. ಇವರ ರಚನೆಯಿಂದಾಗಿ ಬೆಂಗಳೂರು ಆಕಾಶವಾಣಿ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿತು. ಹಲವು ಮಹಿಳಾಮಂಡಲಗಳು ಚೇತೋಹಾರಿಗಳಾದುವು. ಇವರದೇ ಆದ ನವೀನ ಆವಿಷ್ಕಾರದಿಂದ ಅಭಿವ್ಯಕ್ತಿಯನ್ನು ಸಾಧಿಸಿದ ಶೂನ್ಯ ಸಂಪಾದನೆಯ ಕಾವ್ಯವಾಚನ ಪದ್ಧತಿಯು ಗಮಕಕಲಾಲೋಕದ ಘನತೆ ಗಾಂಭೀರ್ಯಗಳನ್ನು ಹೆಚ್ಚಿಸಿತು. ಸಹೃದಯ ಸಮುದಾಯವಂತೂ ಅವರ ತೀರ್ಥ ಸಾಹಿತ್ಯದಲ್ಲಿ ಮಿಂದು ಮಡಿಯಾಯಿತು. ಲೇಖಕಿ ಜಯಾ ರಾಜಶೇಖರ್‌ರವರ ವಿಕಾಸಶೀಲವುಳ್ಳ ಪ್ರತಿಭೆಗೆ, ಕಾಣುವ ಕಣ್ಣಿದೆ, ಕಟ್ಟುವ ಕಸುವೂ ಇದೆ. ಅದು ಹಸಿದವರಿಗೆ ಆಹಾರವೂ ಆಗುತ್ತದೆ; ಬಯಸಿದವರಿಗೆ ಬಂಗಾರವೂ ಆಗುತ್ತದೆ. ಅದಕ್ಕೆ ಇಲ್ಲಿನ ನಾಟಕಗಳೇ ನಿದರ್ಶನ.

ಶ್ರೀಮತಿ ಜಯಾ ರಾಜಶೇಖರ್‌ರವರು ಓರ್ವ ಸವ್ಯಸಾಚಿನಿ; ಇವರಿಗೆ ಸಾಹಿತ್ಯ ಸಂಗೀತಗಳೆರಡರಲ್ಲೂ ಸಾಕಷ್ಟು ಪ್ರಭುತ್ವ ಇದೆ. ಇವರ ಮಾತು

ಮೃದು ಆದರೂ ಭಾವ ದೀಪ್ತ, ಇವರ ಶೈಲಿ ಸರಳ, ಆದರೂ ಪರಿಣಾಮ ಕಾರಿ; ಇವರಾಯ್ದ ವಸ್ತು ಇತಿಹಾಸಕ್ಕೆ ಪುರಾಣಕ್ಕೆ ಸಂಬಂಧಿಸಿದ್ದು, ಆದರೂ ಅದರ ವಿನ್ಯಾಸ ವೈಭವಗಳಲ್ಲಿ ಇವರ ಸ್ವೋಪಜ್ಞತೆ ಮೆರೆಯದಿಲ್ಲ. ಇವರ ಪಾತ್ರಗಳಲ್ಲಿ ಶ್ರೀಮಂತಿಕೆ ಧೀಮಂತಿಕೆಗಳಿವೆ. ವೈಶಿಷ್ಟ್ಯವೆಷ್ಟೊ ಅಷ್ಟೇ ಪ್ರಮಾಣದ ವೈಖರಿಯೂ ಇದೆ ಸಂವಿಧಾನ ಶಿಲ್ಪದಲ್ಲಿ. ಇವರದು ಕುಹಕ ಕುಟಿಲತೆಗಳನ್ನು ಕಂಡರಿಯದ ಮುಗ್ಧ ಮನೋಹರವಾದ ಲೇಖಣಿ. ದಣಿವರಿಯದ ಲೇಖಣಿಗೆ ಜಯವಾಗಲಿ, ಇವರ ಬತ್ತಳಿಕೆ ಅಕ್ಷಯವಾಗಲಿ. ಇವರು ಕೋದು ತಂದ ಈ ಹೂಮಾಲೆ ರಸಿಕವೃಂದಕ್ಕೆ ಆಪ್ಯಾಯಮಾನಕಾರಿಯಾಗಲಿ, ಕನ್ನಡಮ್ಮನ ಮಡಿಲು ತುಂಬಿ, ಮುಡಿಯ ಸಿಂಗರಿಸಿದ ಸತ್ಕೀರ್ತಿಗೆ, ಚಿರಭಾಗಿಯಾಗಲಿ ಎಂದು ಹಾರ್ದಿಕವಾಗಿ ಹಾರೈಯಿಸುವೆ.

ರಕ್ತಾಕ್ಷಿನವರಾತ್ರಿಯ ದುರ್ಗಾಷ್ಟಮಿ
ಗಾಂಧೀಜಯಂತಿಯ ಶುಭದಿನ.
ದಿನಾಂಕ—೨-೧೦-೯೮೪
(ಮಂಗಳವಾರ)

ಇಂತು
ಸಾ. ಶಿ. ಮರುಳಯ್ಯ
"ರಾಗಿಣಿ"
ಬೆಂಗಳೂರು

ಹಾರೈಕೆ

ಸೋದರಿ ಜಯಾ ರಾಜಶೇಖರ ಅವರು ಇದಾಗಲೇ ಪ್ರಕಟಿಸಿದ "ಐದು ಪ್ರಸಾರ ನಾಟಕ"ಗಳನ್ನೂ, ಪ್ರಸಾರಿಸಿದ "ಮನಸ್ಸೊಂದು ಮರ್ಕಟ" "ಸೀತಾ" "ಅಪರ್ಣಾ" ಮುಂತಾದ ಬಾನುಲಿ ರೂಪಕಗಳನ್ನೂ ಓದಿ ಆನಂದಿಸಿದ್ದೇನೆ. ಈಗ "ಝಾಂಸಿರಾಣಿ ಲಕ್ಷ್ಮೀಬಾಯಿ" "ಗೌರಮ್ಮನ ಗೌರವ" "ಹಬ್ಬದ ಉಡುಗೊರೆ" "ಕಾರೈಕ್ಕಾಲಮ್ಮ" "ಸೀತಾರತ್ನ" ಎಂಬ ನಾಟಕಗಳನ್ನು ಪ್ರಕಟನೆಗೆ ಮೊದಲೇ ಓದುವ ಸದವಕಾಶ ಅವರ ಸೌಜನ್ಯದಿಂದ ದೊರೆತು ಬಹಳ ಹಿಗ್ಗಿದ್ದೇನೆ.

ಸೋದರಿ ಜಯಾ ರಾಜಶೇಖರ ಅವರು ಸಂಗೀತ ಸಾಹಿತ್ಯಗಳೆಂಬ ಸ್ತನದ್ವಯಗಳಿಂದಲೂ ಶಾರದಾ ಮಾತೆಯ ಹಾಲನ್ನು ಹೀರಿ ಧನ್ಯರಾಗಿರುವವರು; ಈ ಎರಡನ್ನೂ ಅಷ್ಟೇ ನಿಷ್ಠೆಯಿಂದ ಆರಾಧಿಸುತ್ತ ಬಂದವರು; ಎರಡನ್ನೂ ತಮ್ಮ ಸಾಧನರಥದ ಎರಡು ಚಕ್ರಗಳನ್ನಾಗಿ ಮಾಡಿಕೊಂಡವರು. ಜೊತೆಗೆ ಮನೋಹರವಾದ ಮಾತುಗಾರಿಕೆಯನ್ನೂ ಅಳವಡಿಸಿಕೊಂಡವರು.

ಇವೆಲ್ಲವುಗಳ ಪರಿಣಾಮವಾಗಿ ಸಂಸ್ಕೃತಿ–ಸ್ನಿಗ್ಧ ಮಧುರ ಜೀವನ ಅವರದಾಗಿದೆ. ಆದುದರಿಂದ ಅವರ ಕೃತಿಗಳಲ್ಲಿ ಒಂದು ಸುಸಂಸ್ಕೃತ ಮನಸ್ಸಿನ ತಂಬೆಳಕನ್ನು, ಚೆಂಬೆಳಕನ್ನು ನಾವು ನೋಡಿ ಆಹ್ಲಾದಿಸುತ್ತೇವೆ. ಸರಳತೆ, ಸುಭಗತೆ, ಆಹ್ಲಾದ ಮಯತೆ, ಅಕ್ಲಿಷ್ಟ ಮನೋಹರತೆ, ಹೆಣ್ಣಿನ ಹೃದಯಕ್ಕೆ ಸಹಜವಾದ ಕೋಮಲತೆ–ಇವು ಇವರ ಕೃತಿಗಳಲ್ಲಿ ಎದ್ದುಕಾಣುವ ಅಂಶಗಳು.

ಇವುಗಳಲ್ಲಿ "ಅದಿಲ್ಲ, ಇದಿಲ್ಲ" ಎಂದು ಎತ್ತಿತೋರುವುದೇನೂ ಕಷ್ಟದ ಕೆಲಸವಲ್ಲ. ಆದರೆ ಇಲ್ಲದುದಕ್ಕಾಗಿ ಹಪಹಪಿಸಿ ಇದ್ದುದಕ್ಕೆ ಎರವಾಗುವುದು ಜಾಣತನವೇನಲ್ಲ. ಈ ಕೃತಿಗಳಲ್ಲಿ ಓದಿ ಆನಂದಿಸಲು ಬೇಕಾದುದೆಷ್ಟೋ ಇದೆ. ಓದುಗರು ಅದನ್ನು ಗುರುತಿಸಿ, ಗೌರವಿಸಿ. ಇವರಿಂದ ಇನ್ನಷ್ಟು ಮೇಲ್ಮಟ್ಟದ ಕೃತಿಗಳು ಬರುವಂತೆ ಪ್ರೋತ್ಸಾಹಿಸುವರೆಂದು ನೆರೆ ನಂಬಿದ್ದೇನೆ.

''ಶ್ರೀಗಿರಿ"
20–9–1984

ಸಿದ್ಧಯ್ಯ ಪುರಾಣಿಕ

ಕೃತಜ್ಞತೆಗಳು

ಪ್ರಕಟವಾಗುತ್ತಿರುವ ನನ್ನ ಎರಡನೆಯ ಕೃತಿ ಇದು. "ಐದು ಪ್ರಸಾರ ನಾಟಕಗಳು" ಎಂಬ ನನ್ನ ಮೊದಲ ಕೃತಿಗೆ ಸಿಕ್ಕಿದ ಸಹೃದಯರ ಪ್ರೋತ್ಸಾಹ ಈ ಕೃತಿಯ ಪ್ರಕಟಣೆಗೆ ನಾಂದಿಯಾಯ್ತು.

ಕೃತಿಗೆ ಮುನ್ನುಡಿ ಬರೆದಿರುವವರು ನಾಡಿನ ಪ್ರಸಿದ್ಧ ಕವಿಗಳಲ್ಲಿ ಒಬ್ಬರಾದ ಡಾ॥ ಸಾ. ಶಿ. ಮರುಳಯ್ಯನವರು. ಇವರು ಉತ್ತಮ ವಾಗ್ಮಿಗಳು, ಪಾಠ ಹೇಳುವ ಕಲೆಯಲ್ಲಿ ಪರಿಣತರು; ನನ್ನ ವಿದ್ಯಾಗುರುಗಳು, ನನ್ನಲ್ಲಿ ಸೋದರ ವಾತ್ಸಲ್ಯವಿಟ್ಟಿರುವವರು; ಅಲ್ಲದೆ, ಎಷ್ಟೋ ವರ್ಷಗಳಿಂದ ಬರೆದು ಮೂಲೆಯಲ್ಲಿ ಬಿದ್ದಿದ್ದ ನನ್ನ ಈ ಬರವಣಿಗೆ ಅಚ್ಚಿನ ಮನೆ ಕಾಣಲು ಸರ್ವ ರೀತಿಯಲ್ಲೂ ಕಾರಣಕರ್ತರಾದವರು :

ಹಾರೈಕೆಯನ್ನು ಬರೆದು ಶುಭಕೋರಿರುವವರು ಮತ್ತೊಬ್ಬ ಶ್ರೇಷ್ಠ ಸಾಹಿತಿಗಳಾದ ಶ್ರೀಯುತ ಸಿದ್ಧಯ್ಯ ಪುರಾಣಿಕರು, ಶ್ರೇಷ್ಠವಾಗ್ಮಿಗಳೂ, ಸಹೃದಯರೂ, ಸಂಗೀತ ರಸಿಕರೂ ಅಲ್ಲದೆ ಗುಣಗ್ರಾಹಿಗಳು:

ಹಸ್ತಪ್ರತಿ ಮತ್ತು ಮುದ್ರಿತ ಪ್ರತಿಗಳ ವಿನ್ಯಾಸದಲ್ಲಿ ನನ್ನ ಮಗಳು ವೈಜಯಂತಿ ಮತ್ತು ನನ್ನ ತಂಗಿಯ ಮಗಳು ಮೀರಾ - ಇವರಿಬ್ಬರ ಕಲಾ ಕೈವಾಡವಿದೆ.

"ಸೀತಾ–ರತ್ನ" ಎಂಬ ತಮ್ಮ ಕಥೆಯನ್ನು ನಾಟಕರೂಪದಲ್ಲಿಡಲು ಅನುಮತಿಕೊಟ್ಟು, ಶುಭವನ್ನು ಕೋರಿರುವವರು ಶ್ರೀಯುತ ರಮಾನಂದ ಘಾಟೆ ಅವರು ;

ಸಮಯಕ್ಕೆ ಸರಿಯಾಗಿ, ಸುಂದರವಾಗಿ ಪುಸ್ತಕವನ್ನು ಮುದ್ರಿಸಿ ಕೊಟ್ಟವರು ಲೋಟಸ್ ಪ್ರಿಂಟರ್ಸ್‌ನ ಶ್ರೀಯುತ ಸೋಮಶೇಖರ್ ಅವರು ;

ಸಾಹಿತ್ಯದಲ್ಲಿ ನಾಟಕ ಪ್ರಾಕಾರದಲ್ಲಿ ನನ್ನ ಬರವಣಿಗೆಯನ್ನು ರೂಢಿಸಿಕೊಳ್ಳಲು ಮೂಲ ಪ್ರೇರಕರು ಬೆಂಗಳೂರು ಆಕಾಶವಾಣಿಯವರು ;

ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಶ್ರೋತೃಗಳ ಪ್ರತಿಕ್ರಿಯೆಯ ಅನುಭವ ಮಾತ್ರ ಇರುವ ನನಗೆ—ಓದುಗರ ಪ್ರತಿಕ್ರಿಯೆ ತಿಳಿಯಲು ಕುತೂಹಲವಿದೆ.

ಜಯಾ ರಾಜಶೇಖರ್



ಅರ್ಪಣೆ

ನನ್ನ ಕಲಿಕೆಯ ಸಂಗೀತ, ಸಾಹಿತ್ಯ, ಗಮಕ ಮೊದಲಾದ

ಲಲಿತ ಕಲಾವಲ್ಲರಿಗೆ ನೀರೆರೆದು,

ನನ್ನ ಜೀವನ ಕಲಾವೃಕ್ಷಕ್ಕೆ ಹಾಲೆರೆದು

ಬದುಕನ್ನು ಅಮೃತಸ್ಯಂದಿಯಾಗಿಸಿದ

ನನ್ನ ಸ್ವಾಮಿ

ಡಾ॥ ವೈ. ರಾಜಶೇಖರ,

ಎಂ.ಬಿ.ಬಿ.ಎಸ್., ಟಿ.ಡಿ.ಡಿ. (ವೇಲ್ಸ್), ಎಂ.ಆರ್.ಸಿ.ಪಿ. (ಎಡಿನ್)

ಇವರಿಗೆ

ಇವರ ಅರವತ್ತೈದನೆಯ ಹುಟ್ಟುಹಬ್ಬದ ಸುಸ್ಮೃತಿಯ ಕುರುಹಾಗಿ

ನನ್ನ ಪ್ರೀತಿಯ ಉಡುಗೊರೆ.

— ಜಯಾ

ಪರಿವಿಡಿ

ಝಾಂಸಿ ರಾಣಿ ಲಕ್ಷ್ಮೀಬಾಯಿ

ಪಾತ್ರವರ್ಗ

ಸ್ತ್ರೀಯರು	ಪುರುಷರು
ರಾಣಿ	ಗುರುಭಕ್ತ
ಸುಂದರಿ	ದಿವಾನ ಜೀ
ಮುಂದರಿ	ಎಲಿಸ್
ಕಾಶಿ	ಮೇಜರ್
	ಮಿತ್ರ
	ಸರದಾರ

ದೃಶ್ಯ ೧

ಸೇವಕ : ರಾಣೀಸಾಹೇಬಾ - ಬುಂದೇಲ ಖಂಡದ ಪೊಲಿಟಿಕಲ್ ಏಜಂಟ್, ಮಾಲಕಮ್ ಸಾಹೇಬರ ಮುಖಾಂತರ ಗೌರ್ನರ್ ಜನರಲ್ ಸಾಹೇಬರಿಗೆ ಕಳಿಸಿದ ವಿನಂತಿ ಪತ್ರಕ್ಕೆ ಉತ್ತರ ಬಂದಿದೆ.

ರಾಣಿ : ಸುಂದರಿ, ಆ ಪ್ರಕಟಣೆಯನ್ನು ತೆಗೆದುಕೊಂಡು, ಓದಿ ತಿಳಿಸು.

ಸುಂದರಿ : ಅಪ್ಪಣೆ ರಾಣೀಸಾಹೇಬಾ -
ಗ್ವಾಲಿಯರ್, ಬುಂದೇಲಖಂಡ ಮತ್ತು ರೀವಾಗಳ ಪೊಲಿಟಿಕಲ್ ಏಜಂಟರಾದ ಮೇಜರ್ ಡಿ. ಎ. ಮಾಲಕಮ್ - ಇವರು ಪ್ರಸಿದ್ಧ ಮಾಡುವುದೇನೆಂದರೆ —
ಝಾಂಸಿಯ ಮಹಾರಾಜ ಗಂಗಾಧರರಾಯನು 1853ನೇ ಇಸವಿ ನವಂಬರ್ 21ನೇ ತಾರೀಖಿನ ದಿವಸ ಪರಲೋಕವಾಸಿ ಯಾದನು. ಅವನು ಮರಣಹೊಂದುವ ಮೊದಲು ದಾಮೋದರ ರಾಯನನ್ನು ದತ್ತಕ ತೆಗೆದುಕೊಂಡಿರುವುದನ್ನು ಗವರ್ನರ್ ಜನರಲ್ - ಇವರು ಮನ್ನಿಸದೆ ಇರುವರು. ಹಿಂದೂಸ್ಥಾನ ಸರಕಾರದ ಸೆಕ್ರೆಟರಿಯ ಕಡೆಯಿಂದ ಬಂದ 1854ನೇ ಮಾರ್ಚ್ 7ನೇ ತಾರೀಖಿನ ಅಪ್ಪಣೆಯ ಮೇರೆಗೆ ಝಾಂಸಿಯ ಸಂಸ್ಥಾನ ವನ್ನು ಬ್ರಿಟಿಷ್ ಸರಕಾರಕ್ಕೆ ಸೇರಿಸಿರುತ್ತೇವೆ. ಝಾಂಸಿಯ ಸಂಸ್ಥಾನ ಸಧ್ಯಕ್ಕೆ ಬುಂದೇಲ ಖಂಡದ ಅಸಿಸ್ಟೆಂಟ್ ಪೊಲಿಟಿಕಲ್ ಏಜಂಟ್ ಮೇಜರ್ ಎಲಿಸ್‌ರಿಗೆ ಒಪ್ಪಿಸಲ್ಪಟ್ಟಿರುವುದು. ಆದುದ ರಿಂದ ಝಾಂಸಿಯ ಯಾವತ್ತೂ ಪ್ರಜೆಗಳು ಬ್ರಿಟಿಷ್ ಸರಕಾರದ ಅಧೀನದಲ್ಲಿರುವೆವೆಂದು ತಿಳಿದು, ಮೇಜರ್ ಎಲಿಸ್ ಸಾಹೇಬರ ಕಡೆಗೆ ತೆರಿಗೆ ಒಪ್ಪಿಸಬೇಕು ಹಾಗೂ ಸಂತೋಷದಿಂದ ಇರಬೇಕು—.

ಡಿ. ಎ. ಮಾಲಕಮ್

ತಾ. 13 ಮಾರ್ಚ್ 1854—

ರಾಣಿ : ಇಲ್ಲ - ಇಲ್ಲ - ನನ್ನ ಝಾಂಸಿಯನ್ನು ಕೊಡುವುದಿಲ್ಲ - ಇಲ್ಲ ನನ್ನ - ಝಾಂಸಿಯನ್ನು ಎಂದಿಗೂ ಕೊಡುವುದಿಲ್ಲ.

ಎಲಿಸ್ : ರಾಣೀ ಸಾಹೇಬಾ... ಸಮಾಧಾನ ತಂದುಕೊಳ್ಳಿ.

ರಾಣಿ : ಸಮಾಧಾನ... ಇನ್ನೆಲ್ಲಿಯ ಸಮಾಧಾನ... ಪುತ್ರವಿಯೋಗ ವಾಯ್ತು... ಪತಿ ವಿಯೋಗವಾಯ್ತು... ಈಗ ರಾಜ್ಯವಿಯೋಗ ... ಹಾ... ಇಂದಿನವರೆಗೆ ಝಾಂಸಿಯ ಸಂಸ್ಥಾಪಕರು ಇಂಗ್ಲಿಷರಿಗೆ ಪ್ರಾಮಾಣಿಕ ರಾಜನಿಷ್ಠೆಯನ್ನು ತೋರಿದರು... ಅವರಿಗೆ ಅನೇಕ ಬಾರಿ, ಸಮಯದಲ್ಲಿ ಸಹಾಯ ಮಾಡಿದ್ದಾರೆ– ಇವನ್ನೆಲ್ಲಾ ವಿಮರ್ಶಿಸಿ, ಈ ದತ್ತಕ ವಿಧಾನವನ್ನು ಊರ್ಜಿತ ಗೊಳಿಸಬೇಕೆಂದು ವಿನಂತಿ ಕಳಿಸಿ. ಅದಕ್ಕೆ ಮನ್ನಣೆ ಸಿಕ್ಕುವುದು, ಇರುಳು ಕಳೆದು ಮನೋಹರ ಪ್ರಭಾತ ಸಮಯ ಬರುವುದೆಂದು ಸೂರ್ಯನಾರಾಯಣನ ಬರವನ್ನು ಕಮಲವು ಎದುರು ನೋಡುವಂತೆ, ಎದುರು ನೋಡುತ್ತಾ ಕುಳಿತೆ... ಆದರೆ ಎಲ್ಲೆಡೆಯೂ ಅಂಧಕಾರವೇ ಕವಿಯಿತು... ಪ್ರಜಾಹಿತದ ಕಾರ್ಯಗಳನ್ನು ಮಾಡಬೇಕೆಂದಿದ್ದ ಆಶೆ, ನಿರಾಶೆಯಾಯ್ತು.

ಎಲಿಸ್ : ರಾಣೀ ಸಾಹೇಬಾ... ನೀವು ಬದುಕಿರುವವರೆಗೆ ನಿಮ್ಮ ಸ್ವಾಭಿ ಮಾನಗಳಿಗೆ ಕುಂದು ಬಾರದಂತೆ, ದಯಾಳು ಅಂಗ್ರೇಜಿ ಸರಕಾರವು ತಮಗೆ ಪ್ರತಿ ತಿಂಗಳು ಐದು ಸಾವಿರ ರೂ. ಗಳ ಪೆನ್ಷನ್ ಗೊತ್ತು ಮಾಡಿದೆ, ಹಾಗೂ ಝಾಂಸಿಯ ಅರಮನೆ ನಿಮಗೆ ಕೊಡಲ್ಪಡುವುದು... ಸಂಸ್ಥಾನದ ಆಭರಣಗಳು, ನಿಮ್ಮ ಪತಿಯ ಖಾಸಗಿ ಸಂಪತ್ತು, ಖಜಾನೆಯಲ್ಲಿ ಉಳಿದಿರುವ ಆರು ಲಕ್ಷ ರೂ ಗಳನ್ನು ದತ್ತಕಪುತ್ರ ದಾಮೋದರರಾಯನ ಹೆಸರಿನಲ್ಲಿ ಬ್ರಿಟಿಷ್ ಖಜಾನೆಯಲ್ಲಿಡುವರು – ಅವನು ಪ್ರಾಯಕ್ಕೆ ಬಂದ ತರುವಾಯ ಅದನ್ನು ಬಡ್ಡಿಸಹಿತವಾಗಿ ಹಿಂತಿರುಗಿಸುವರು. ನಾನಿನ್ನು ಬರುತ್ತೇನೆ... ಸುಖವಾಗಿರಿ.

ರಾಣಿ : ಸುಂದರಿ, ಉಮೇಶಚಂದ್ರ ಬ್ಯಾನರ್ಜಿಯನ್ನು ಯೂರೋಪಿಯನ್ ಗೃಹಸ್ಥನೊಬ್ಬನನ್ನು ಜೊತೆ ಮಾಡಿಕೊಂಡು ಇಂಗ್ಲೆಂಡಿಗೆ ಹೊರಡಲು ಹೇಳು, ಅಲ್ಲಿ ಕೋರ್ಟ್ ಆಫ್ ಡೈರೆಕ್ಟರ್ಸ್ ಮುಂದೆ ನಮ್ಮ ಹೇಳಿಕೆಗಳನ್ನಿಟ್ಟು, ಯೋಗ್ಯ ನ್ಯಾಯ ಸಿಗುವಂತೆ ಮಾಡಲು ವ್ಯವಸ್ಥೆ ಮಾಡಲು ಹೇಳು... ಅವರ ಖರ್ಚಿಗಾಗಿ ಅರವತ್ತು ಸಾವಿರ ರೂ. ಗಳನ್ನು ಕೊಡಿಸಲು ಏರ್ಪಾಡು ಮಾಡು.

ಸುಂದರಿ : ಹಾಗೇ ಆಗಲಿ ರಾಣೀ ಸಾಹೇಬಾ ...

ದೃಶ್ಯ ೨

ರಾಣಿ : ಮುಂದರೀ... ಏನಾಯ್ತು... ಏಕೆ ಗಾಬರಿಯಿಂದ ಓಡಿಬಂದೆ ?

ಮುಂದರಿ : ಘಾತವಾಯ್ತು ರಾಣೀ ಸಾಹೇಬಾ ... ಘಾತವಾಯ್ತು... ಝಾಂಸಿಯನ್ನು ಬ್ರಿಟಿಷ್ ಸರಕಾರಕ್ಕೆ ಸೇರಿಸಿಕೊಂಡ ಮೇಲೆ, ಸೈನ್ಯಕ್ಕೆ ಆಂಗ್ರೇಜಿ ಸೈನಿಕರನ್ನೇ ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸಿ ಕೊಂಡು, ದೇಶೀ ಸೈನಿಕರನ್ನು ಕೆಲಸದಿಂದ ತೆಗೆದು,ಹಾಕಿದರಲ್ಲ...

ರಾಣಿ : ಹೌದು,... ಆ ಸೈನಿಕರು ಅತೃಪ್ತರಾಗಿರುವರೆಂದೂ ಕೇಳಿದೆನು...

ಮುಂದರಿ : ಅವರು ಬಂಡುಗಾರರೊಂದಿಗೆ ಸೇರಿಕೊಂಡು ಮನಬಂದಂತೆ ಗದ್ದಲ ಆರಂಭಿಸಿದ್ದಾರೆ... ಮೊದಲು ಡ್ರಿಲ್ ಬಯಲ ಕಡೆ ಹೋಗುತ್ತಿದ್ದ ಕ್ಯಾಪ್ಟನ್ ಡನ್‌ಲಪ್—ಎನ್‌ಸಾಯಿನ್ ಟೇಲರ್ —ಇವರನ್ನು ಕೊಂದು ಹಾಕಿದರು. ಅನಂತರ ಕಂಡ ಕಂಡ ಕಡೆ ಯೂರೋಪಿಯನ್ ಅಧಿಕಾರಿಗಳನ್ನು ಕಡಿದು ಚೆಲ್ಲುತ್ತಿದ್ದಾರೆ... ಅವರು ಹೊರಕ್ಕೆ ಬರುವಂತಿಲ್ಲ... ಅವರಿಗೆ ಅಪ್ಪಣೆಗಳನ್ನು ಕೊಡುವವರಿಲ್ಲ... ಇಂಥಲ್ಲಿಯೇ ಇರಬೇಕೆಂಬ ನಿರ್ಬಂಧವಿಲ್ಲ... ಸ್ವೇಚ್ಛೆಯಿಂದ ವರ್ತಿಸುತ್ತಿದ್ದಾರೆ... ನಿಮ್ಮ ಆಶ್ರಯ ಬಯಸಿ ಬರುತ್ತಿದ್ದ ಮೂವರು ಅಧಿಕಾರಿಗಳನ್ನೂ ಕೊಂದರು.

ರಾಣಿ : ಎಂತಹ ಅನುಚಿತ ಕಾರ್ಯ ಮಾಡುತ್ತಿದ್ದಾರೆ ಈ ಬಂಡುಗಾರರು ... ಸುಂದರೀ,... ಇಂಗ್ಲಿಷರ ಹೆಂಗಸರು ಮತ್ತು ಮಕ್ಕಳನ್ನು ನಮ್ಮ ಅರಮನೆಗೆ ಸುರಕ್ಷಿತವಾಗಿ ಕರೆದು ತನ್ನಿ... ಒಂದೆರಡು ದಿನಗಳಲ್ಲಿ ಅವರೆಲ್ಲರನ್ನೂ ದುರ್ಗದೊಳಗೆ ಕಳುಹಿಸುವ ಏರ್ಪಾಡು ಮಾಡಿ... ಅಲ್ಲಿಗೆ ಕಳುಹಿಸಿದನಂತರವೂ ಪ್ರತಿದಿನ ಮೂರು ಮಣ ಗೋಧಿ ರೊಟ್ಟಿ ಮತ್ತು ಇತರ ಅವಶ್ಯಕ ಸಾಮುಗ್ರಿಗಳನ್ನು ಅವರಿಗೆ ತಲುಪಿಸಿ... ಅವರಿಗೆ ಯಾವ ಕೊರತೆಯೂ ತೋರ ದಂತೆ ವ್ಯವಸ್ಥೆ ಮಾಡಿರಿ.

ಸುಂದರಿ : ಅಪ್ಪಣೆ ತಾಯಿ...

ದೃಶ್ಯ ೩

ರಾಣಿ : ಕಾಶಿ... ಕೋಟೆಯೊಳಗಿನ ಯೂರೋಪಿಯನ್ನರು ಒಪ್ಪಂದದ ನಿಶಾನೆ ನೆಟ್ಟರು, ಅವರನ್ನು ಸುರಕ್ಷಿತವಾಗಿ ಸಾಗರಕ್ಕೆ ಹೋಗ ಗೊಟ್ಟರೆ ಬಂಡುಗಾರರಿಗೆ ಕೋಟೆ ಒಪ್ಪಿಸುವೆವು ಅಂದರು.... ಅದಕ್ಕೆ ಒಪ್ಪಿ, ಪವಿತ್ರ ಕುರಾನ್ ಹಿಡಿದು ಪ್ರತಿಜ್ಞೆ ಮಾಡಿದ ಈ ಬಂಡುಗಾರರು, ಅವರೆಲ್ಲರೂ ಶಸ್ತ್ರ ಕೆಳಗಿರಿಸಿ, ಹೊರಗೆ ಬಂದನಂತರ, ಗಂಡಸರು, ಹೆಂಗಸರು, ಕಡೆಗೆ ಕಂದಮ್ಮಗಳನ್ನೂ ಸಹ ಕಡಿದು ಚೆಲ್ಲಿದರಂತೆ.... ಅಯ್ಯೋ ವಿಧಿಯೇ ಇದನ್ನು ಕೇಳಿದ ಯಾರ ಮನ ತಾನೇ ಕರಗದು ? ಪುಣ್ಯಭೂಮಿಯಾದ ಈ ಝಾಂಸಿಯಲ್ಲಿ ಇಂತಹ ಘೋರ ಕೃತ್ಯ ನಡೆಯಬೇಕೆ ? ನಿನ್ನೆ ರಾತ್ರಿ ಹಿಂದೂ ವೇಷಧಾರಿಗಳಾಗಿ ಬಂದು, ಆಶ್ರಯವನ್ನು ಯಾಚಿಸಿದ ಮಾರ್ಟಿನ್ ಸಾಹೇಬರ ಮತ್ತು ಇತರರ ಸ್ಥಿತಿ ಎಂತಹ ಕರುಣ ಕಥೆ.... ಸುಂದರೀ.... ಅವರನ್ನು ಸುರಕ್ಷಿತ ಸ್ಥಳಕ್ಕೆ ಕಳಿಸುವ ವ್ಯವಸ್ಥೆ ಮಾಡಿರುವೆಯಾ ?

ಸುಂದರಿ : ಅವರೀಗಾಗಲೇ ತಮ್ಮ ಸುರಕ್ಷಿತ ಸ್ಥಾನಗಳನ್ನು ತಲುಪಿರಬಹುದು.

ರಾಣಿ : ನೋಡು.... ನಮ್ಮ ವಿಶ್ವಾಸಿಕರಲ್ಲಿ ಕೆಲವರನ್ನು ಕರೆಸಿ ಹೇಳು.... ನಿರಾಶ್ರಿತರಾದ ಯೂರೋಪಿಯನ್ನರು ಯಾರಾದರೂ ಇದ್ದರೆ, ಅವರನ್ನು ಗುಪ್ತವಾಗಿ ಕರೆತರಲು ಹೇಳು.... ಮತ್ತು ಈ ಬಂಡಾಯದಲ್ಲಿ ಮೃತರಾದ ನಿರ್ಭಾಗ್ಯರ ಶವ ಸಂಸ್ಕಾರವನ್ನು, ಯಾರಿಗೂ ತಿಳಿಯದಂತೆ ಮಾಡುವ ವ್ಯವಸ್ಥೆಯಾಗಲಿ.... ಅಯ್ಯೋ ಎಂತಹ ನಿಷ್ಕರುಣಿಗಳಿವರು.... ಏನು ಮಾಡಲಿ.... ಈಗ ನಾನೇನು ಮಾಡಲಿ....

ದಿವಾನ : ರಾಣೀ ಸಾಹೇಬಾ.... ನಮಸ್ಕಾರ.

ರಾಣಿ : ನಮಸ್ಕಾರ.... ದಿವಾನಜೀ.... ಏನು ಸಮಾಚಾರ....

ದಿವಾನ : ಬಂಡುಗಾರರ ನಾಯಕ ಹವಾಲ್ದಾರ ಗುರುಭಕ್ಷನು ತಮ್ಮನ್ನು ಭೇಟಿ ಮಾಡಬೇಕೆಂದು ಬಂದಿರುವನು.

ರಾಣಿ : ನನ್ನಿಂದೇನಾಗಬೇಕಂತೆ ?

ಗುರುಭಕ್ಷ : (ಪ್ರವೇಶ) ಅದನ್ನು ನಾನು ಹೇಳುವೆನು.... ರಾಣೀ ಸಾಹೇಬಾ.... ನಾವು ಈಗಿಂದೀಗ ದಿಲ್ಲಿಗೆ ಹೋಗಬೇಕಾಗಿದೆ.... ಅದಕ್ಕೆ ಹಣದ ಅನುಕೂಲವಿಲ್ಲ.... ಆದುದರಿಂದ ನೀವು ನಮಗೆ ಮೂರು ಲಕ್ಷ ರೂ. ಗಳನ್ನು ಕೊಡಬೇಕು... ಇಲ್ಲದಿದ್ದರೆ ನಿಮ್ಮ ಪರಿಣಾಮ ನೆಟ್ಟಗಾಗದು.

ರಾಣಿ : ಗುರುಭಕ್ಷ ... ಈಗ ನನ್ನ ಕೈಯಲ್ಲಿ ಏನಿದೆ? ರಾಜ್ಯವಿಲ್ಲ.... ರಾಜ ವೈಭವವೂ ಉಳಿದಿಲ್ಲ.... ಹೀಗೆ ದೈನ್ಯಾವಸ್ಥೆಯಲ್ಲಿ ಬಿದ್ದಿರುವ ನನ್ನಂತಹ ಅಬಲೆಯನ್ನು ಪೀಡಿಸುವುದು ನಿನಗೆ ತರವಲ್ಲ.... ಮೂರು ಲಕ್ಷ ರೂ. ಗಳನ್ನು ನಾನು ಎಲ್ಲಿಂದ ತರಲಿ?

ಗುರುಭಕ್ಷ : ನೀವು ಕೊಡದಿದ್ದರೆ ಈ ಅರಮನೆಯನ್ನು ಸುಟ್ಟು, ಸೂರೆಮಾಡಿ ಝಾಂಸಿಯ ಸಂಸ್ಥಾನವನ್ನು, ನಿಮ್ಮ ದಾಯಾದಿಗಳಾದ ಸದಾಶಿವ ರಾವ ನಾರಾಯಣರಿಗೆ ಕೊಡುತ್ತೇವೆ.

ರಾಣಿ : ಹೂಂ.... ಆಗಲಿ.... ಇದೂ ಒಂದು ಶೋಧನೆ.... ನೋಡು ಗುರುಭಕ್ತ ಮೂರು ಲಕ್ಷ ರೂ. ಗಳು ನನ್ನ ಬಳಿ ಇಲ್ಲ... ನನ್ನ ಸ್ವಂತ ಸಂಪತ್ತಿನಿಂದ ಕೊಡುತ್ತಿರುವ ಒಂದು ಲಕ್ಷ ರೂ. ಬೆಲೆಬಾಳುವ ಈ ಆಭರಣಗಳನ್ನೇ ತೆಗೆದುಕೊಳ್ಳಿ. ಕೊಡಲು ಇದಕ್ಕಿಂತ ಹೆಚ್ಚಿಗೆ ನನ್ನಲ್ಲಿಲ್ಲ.

ಗುರುಭಕ್ತ : ಮಹಾರಾಣಿ ಲಕ್ಷ್ಮೀಬಾಯಿಗೆ ಜಯವಾಗಲಿ.

ರಾಣಿ : ಗಾಯದ ಮೇಲೆ ಬರೆ—ಹುಂ—ಇದೇ ಲೋಕ ನೀತಿ.

ದೃಶ್ಯ ೪

ರಾಣಿ : ದಿವಾನ್‌ಜೀ.... ಯೂರೋಪಿಯನ್ ಅಮಲ್ದಾರರುಗಳಿಗೆ ಪತ್ರಗಳನ್ನು ಕಳಿಸಿ, ಏನೆಂದರೆ "ಝಾಂಸಿಯಲ್ಲಾದ ಬಂಡಾಯದಲ್ಲಿ ನನ್ನ ಪಾತ್ರವೇನೂ ಇಲ್ಲ, ಮತ್ತು ಯೂರೋಪಿಯನ್ನರ ಕೊಲೆಯಲ್ಲಿ ನನ್ನ ಅಂಗ ಎಷ್ಟು ಮಾತ್ರವೂ ಇಲ್ಲ ... ಇಷ್ಟೇ ಅಲ್ಲದ ಈ ಅಮಾನುಷ ಸಾಮೂಹಿಕ ಕೊಲೆಯ ವಾರ್ತೆಯನ್ನು ಕೇಳಿ, ನನಗೆ ಅತೀವ ದುಃಖವಾಗಿದೆ. ಬ್ರಿಟಿಷ್ ಸರಕಾರದ ಅಮಲು ಪುನಃ ಜಾರಿಗೆ ಬರುವವರೆಗೆ ನಾನು ಝಾಂಸಿಯ ಸಂಸ್ಥಾನದ ಆಡಳಿತ ವ್ಯವಸ್ಥೆಯನ್ನು ಬ್ರಿಟಿಷರ ಪರವಾಗಿ ನಡೆಸುತ್ತಿರುವೆನು" ಈ ರೀತಿ ಕಾಗದಗಳನ್ನು ಬರೆದು ಕಳಿಸಿಕೊಡಿ.

ದಿವಾನ : ಪ್ರಯತ್ನ ಮಾಡುತ್ತೇನೆ. ರಾಣೀ ಸಾಹೇಬಾ...ನಮ್ಮಲ್ಲಿರುವ ಮುತ್ಸದ್ದಿಗಳಲ್ಲಿ ಇಂಗ್ಲಿಷ್ ಭಾಷೆ ಬರುವವರು ಒಬ್ಬರೂ ಇಲ್ಲ ....ಇರಲಿ...ಹೇಗಾದರೂ ವ್ಯವಸ್ಥೆ ಮಾಡುವೆನು...ಇನ್ನೊಂದು ವಿಚಾರ ಅರಿಕೆ ಮಾಡಬೇಕಾಗಿದೆ ತಮ್ಮಲ್ಲಿ...

ರಾಣಿ : ಏನು ವಿಚಾರ ?

ದಿವಾನ : ಹಿಂದೆಯೇ ಝಾಂಸಿಗೆ ತಾನು ಬಾಧ್ಯಸ್ಥನೆಂದು ಹಕ್ಕುತೋರಿಸಿ, ಹತಾಶನಾದ ಸದಾಶಿವರಾವ ನಾರಾಯಣನು, ಈಗ ಝಾಂಸಿ

ಯಲ್ಲಿ ಇಂಗ್ಲಿಷ್ ಅಧಿಕಾರಿಗಳು ಇಲ್ಲವಾದುದರಿಂದ, ಇಲ್ಲಿ ಅರಾಜಕತೆ ಇದೆಯೆಂದುಕೊಂಡು, ಈಗ ಪುನಃ ತನ್ನ ಯತ್ನ ವನ್ನು ಪ್ರಾರಂಭಿಸಿದ್ದಾನೆ.

ರಾಣಿ : ಏನು ! ಅವನಿಗೆ ಅಷ್ಟೊಂದು ಸೊಕ್ಕು ಬಂತೇ?

ದಿವಾನ : ಹೌದು...ಇಲ್ಲಿಗೆ ಮೂವತ್ತು ಮೈಲಿ ದೂರದಲ್ಲಿರುವ ಭದ್ರ ವಾದ ಕರೇರಾ ಕಿಲ್ಲೆಯನ್ನು ಹಿಡಿದುಕೊಂಡು ಕುಳಿತಿದ್ದಾನೆ... ಅಲ್ಲದೆ ತಾನೇ ಝಾಂಸಿಯ ರಾಜ್ಯಾಭಿಷೇಕ ಮಾಡಿಕೊಂಡು, ತನ್ನ ಸಹಿ ಮಾಡಿದ ಜಾಹೀರ ನಾಮೆಗಳನ್ನು ಪ್ರಕಟಿಸುತ್ತಿ ದ್ದಾನೆ.

ರಾಣಿ : ದಿವಾನ್‌ಜೀ...ಈಗಿಂದೀಗಲೇ ಒಂದು ಸಾವಿರ ಸೈನಿಕರನ್ನು ಕೂಡಿಸಿ ಕಳಿಸಿ...ಅವನನ್ನು ಬಂಧಿಸಿತಂದು, ಝಾಂಸಿಯ ದುರ್ಗ ದಲ್ಲಿ ಸೆರೆ ಇಡಿ.

ದಿವಾನ : ಹುಕುಂ ರಾಣೀ ಸಾಹೇಬಾ ...

ದೃಶ್ಯ ೫

ದಿವಾನ : ರಾಣೀಸಾಹೇಬಾ... ಸದಾಶಿವರಾವ ನಾರಾಯಣನನ್ನೇನೋ ಸೋಲಿಸಿ, ದುರ್ಗದಲ್ಲಿ ಸೆರೆ ಇಡಲಾಗಿದೆ... ಆದರೆ ನೆರೆಯ ವೋರಛಾ ಸಂಸ್ಥಾನದ ದಿವಾನ ನಥೇಖಾನನು ಇಪ್ಪತ್ತು ಸಾವಿರ ಸೈನ್ಯ ಕೂಡಿಸಿಕೊಂಡು ಇಲ್ಲಿಗೆ ಮೂವತ್ತು ಮೈಲಿ ದೂರದಲ್ಲಿ ರುವ ವೇತ್ರವತಿ ನದಿಯ ದಂಡೆಯಲ್ಲಿ ತಳವೂರಿದ್ದಾನೆ...ಹಾಗೂ "ಸಂಸ್ಥಾನದ ಸರ್ವಾಧಿಕಾರವನ್ನು ನನಗೆ ಒಪ್ಪಿಸಬೇಕು... ಬ್ರಿಟಿಷರು ತಮಗೆ ಕೊಡುತ್ತಿರುವ ಐದು ಸಾವಿರ ರೂ.ಗಳ ಪೆನ್‌ಷನ್ ನಾನೇ ಕೊಡುವೆನು... ನೀವು ಅನ್ಯರಾದ ಬ್ರಿಟಿಷರ ಆಡಳಿತದಲ್ಲಿರದೆ, ಸ್ವಜನರಾದ ವೋರಛಾರಾಣಿಯ ಅಧೀನ ದಲ್ಲಿರುವುದು ಒಳ್ಳೆಯದು" ಎಂದು ಹೇಳಿ ಕಳಿಸಿರುವನು.

ರಾಣಿ : ದಿವಾನ್‌ಜೀ... ನಮ್ಮ ಸೈನಿಕರು – ಸೇನಾಪತಿ ಮತ್ತು ಝಾಂಸಿಯ ಹಿತಚಿಂತಕರಿಗೆಲ್ಲ ತುರ್ತುಕರೆ ಕಳುಹಿಸಿ... ಯುದ್ಧವನ್ನು ಘೋಷಿಸೋಣ...

ಸುಂದರಿ : ರಾಣೀ ಸಾಹೇಬಾ... ಪೋರಛಾದ ರಾಜಮನೆತನ ಹೆಸರುವಾಸಿಯಾದದ್ದು. ಅಲ್ಲದೆ ಅವರದು ಶಸ್ತ್ರಸಜ್ಜಿತವಾದ ಇಪ್ಪತ್ತು ಸಾವಿರ ಸಂಖ್ಯೆಯ ಸೈನ್ಯ... ನಮ್ಮಲ್ಲಿ ಸೈನ್ಯದ ಸಿದ್ಧತೆಯೂ ಇಲ್ಲ... ಯುದ್ಧಸಾಮಗ್ರಿಗಳೂ ಸಾಕಷ್ಟು ಇಲ್ಲ... ಹೀಗಿರುವಾಗ ಅಂತಹ ಪ್ರಚಂಡ ಸೈನ್ಯದೊಂದಿಗೆ ಯುದ್ಧ ಆರಂಭಿಸುವುದೆಂದರೆ, ಅವಿವೇಕದ ಕೆಲಸವಾಗಲಾರದೇ ? ಅಲ್ಲದೆ ಬ್ರಿಟಿಷರನ್ನು ನಮ್ಮ ಅಧಿಕಾರಿಗಳೆಂದು ಒಪ್ಪಿಕೊಳ್ಳುವುದಕ್ಕಿಂತ, ಸ್ವಜನರ ಆಶ್ರಯದಲ್ಲೇ ಉಳಿಯುವುದು ಒಳ್ಳೆಯದಲ್ಲವೇ ?

ರಾಣಿ : ಸುಂದರೀ... ನಮ್ಮ ಹಿರಿಯರ ಕಾಲದಿಂದಲೂ ಬ್ರಿಟಿಷರನ್ನು ನಮ್ಮ ಅಧಿಕಾರಿಗಳೆಂದು ಒಪ್ಪಿ, ಅವರೊಂದಿಗೆ ಸ್ನೇಹದಿಂದ ನಡೆದುಕೊಂಡು ಬಂದಿದ್ದೇವೆ. ನಮ್ಮ ಸಂಸ್ಥಾನದ ಮೇಲೆ ಪೇಷ್ವೆಯವರ ಅಧಿಕಾರ ಹೋದಮೇಲೆ, ಬ್ರಿಟಿಷರೇ ಪೇಷ್ವೆಯವರ ಸ್ಥಾನದಲ್ಲಿದ್ದಾರೆ... ಪೋರಛಾ ಸಂಸ್ಥಾನಕ್ಕೆ ಝಾಂಸಿಯನ್ನು ಒಪ್ಪಿಸುವುದು ಒಂದು ರೀತಿಯಲ್ಲಿ ಹೇಡಿತನ... ಇನ್ನೊಂದು ರೀತಿಯಲ್ಲಿ ವಿಶ್ವಾಸಘಾತುಕತನ... ಬ್ರಿಟಿಷರಿಗೆ ನಮ್ಮ ಸ್ವಾಮಿನಿಷ್ಠೆಯ ಬಗೆಗೆ ಸರಿಯಾಗಿ ತಿಳಿವಳಿಕೆ ಇಲ್ಲದಿರುವುದರಿಂದ, ಸಧ್ಯಕ್ಕೆ ನಮ್ಮ ಸಂಸ್ಥಾನವನ್ನು ಖಾಲಸಾ ಮಾಡಿದ್ದಾರೆ...ನಿಜವಾದ ವಿಷಯ ತಿಳಿದಾಗ ನಮ್ಮ ಸಂಸ್ಥಾನವನ್ನು ತಿರುಗಿ ಕೊಟ್ಟೇಕೊಡುತ್ತಾರೆ... ದಿವಾನ್‌ಜೀ... ನೀವು ಗಂಡಸರು... ವೈರಿಸೇನೆಯನ್ನು ನೋಡಿ ಭಯವಾದರೆ, ಹೋಗಿ ಅಡಗಿ ಕುಳಿತುಕೊಳ್ಳಿ... ನಾನು... ಬ್ರಾಹ್ಮಣ ವಿಧವೆ... ಬಳೆಗಳನ್ನು ಧರಿಸಿದ್ದ ಇದೇ ಕೈಗಳಿಂದಲೇ ಖಡ್ಗ ಧರಿಸುವೆನು... ನೋಡೋಣ...ಅದಾವ ಗಂಡಸು ನನ್ನ ಖಡ್ಗವನ್ನು ಎದುರಿಸುವನು... ಆ ನಥೇಖಾನನ ಪರಾಕ್ರಮವನ್ನು ನೋಡಿಯೇ

ಸಾಯುವೆನು.... ನಿಮ್ಮಂತಹ ವೀರರು ಅಂಜಿ ಹಿಂದೆ ಉಳಿದರೂ ಚಿಂತೆಯಿಲ್ಲ.... ಮಾತೃಭೂಮಿಯ ಉದ್ಧಾರಕ್ಕಾಗಿ ಈ ಶರೀರ ವನ್ನೇ ಅರ್ಪಿಸುವೆನು...., ನನ್ನ ನಂತರ, ನನ್ನ ಈ ಝಾಂಸಿ ಯನ್ನು ಅವನಿಗೆ ಒಪ್ಪಿಸಿ...., ಹೆಂಗಸಿಗಿಂತ ಕಡೆಯಾಗಿ ಬಾಳಿರಿ.

ಸರದಾರ : ಮಹಾರಾಣಿಗೆ ಜಯವಾಗಲಿ...., ನಮ್ಮ ಶರೀರದಲ್ಲಿ ಕೊನೆಯ ರಕ್ತಬಿಂದು ಇರುವವರೆಗೂ ಝಾಂಸಿಯಲ್ಲಿ ನಥೇಖಾನನನ್ನು ಪ್ರವೇಶ ಮಾಡಲು ಬಿಡುವುದಿಲ್ಲ.

ರಾಣಿ : ನಥೇಖಾನನಿಗೆ ಐದು ತುಪಾಕಿಯ ಗುಂಡು, ಮದ್ದುಗಳನ್ನು ಈಗಿಂದೀಗಲೇ ಕಳಿಸಿ, ಯುದ್ಧಕ್ಕೆ ಆಮಂತ್ರಣವನ್ನು ನೀಡಿ.... ಹಿಂದಿನ ಸೈನಿಕರನ್ನೆಲ್ಲಾ ಕರೆಸಿ, ಯುದ್ಧಸಾಮಗ್ರಿಗಳನ್ನು ಅವ ರಿಗೆ ಒದಗಿಸಿಕೊಡಿ...., ಝಾಂಸಿಯಲ್ಲೇ ಮದ್ದು, ಗುಂಡಿನ ಕಾರ್ಖಾನೆಯನ್ನು ಆರಂಭಿಸಿ...., ದುರ್ಗದಲ್ಲಿ ಹುಗಿದು ಬಿದ್ದಿರುವ ಮೂರು ತೋಪುಗಳನ್ನು ಅಗೆಸಿ ತೆಗೆದು, ಸರಿಪಡಿಸಿ...., ಹಾಗೂ ರಾಜವಾಡೆಯಲ್ಲಿ ಅಡಗಿಸಿಟ್ಟ ನಾಲ್ಕು ತೋಪುಗಳನ್ನೂ ತೆಗೆ ಯಿರಿ.... ಎಲ್ಲ ಸರದಾರರಿಗೆ ತುರ್ತುಕರೆ ಕಳಿಸಿ...., ರಾತ್ರಿ ಬೆಳ ಗಾಗುವುದರೊಳಗೆ ಐದು ಸಾವಿರ ಸೈನ್ಯ ಸಿದ್ಧವಾಗಲಿ....

ಸರದಾರ : ತನ್ನಂತಹ ಶೂರ ಸರದಾರನ ಮುಂದೆ ಬ್ರಾಹ್ಮಣ ಹೆಂಗಸು ಏನು ಮಾಡಿಯಾಳು ? ಹಾ...., ಹಾ...., ಅನ್ನುವುದರೊಳಗೆ ದುರ್ಗವನ್ನು ವಶಪಡಿಸಿಕೊಳ್ಳುವೆನೆಂದು ಆ ನಥೇಖಾನನು ಹಾರಾಡುತ್ತಿರುವನಂತೆ.

ರಾಣಿ : (ನಕ್ಕು) ಹೂಂ...., ನೋಡಲಿ...., ಈ ಬ್ರಾಹ್ಮಣ ಹೆಂಗಸಿನ ಯುದ್ಧ ಕೌಶಲವನ್ನು...., ವೋರಛಾ ಮಹಾದ್ವಾರದ ಕಡೆ "ಕಡಕ ಬಿಜಲಿ" ಎಂಬ ತೋಪನ್ನು ಇಡಿಸಿ ಸ್ವತಃ ನಾನೇ ಗುರಿ ಯನ್ನು ಹಿಡಿಯುವೆನು.... ಶೂರ ಲಾಲಾಬಾವುಭಕ್ಷಿಯು ತೋಪಿಗೆ ಮದ್ದು, ಗುಂಡುಗಳನ್ನು ತುಂಬಿಕೊಡುತ್ತಿರಲಿ...., ಹುಂ.... ಆ ನಥೇಖಾನನು ಎಂದೆಂದೂ ಮರೆಯದ ಪಾಠ

ಕಲಿಸುವೆನು... ಆಂ... ಮತ್ತೊಂದು ಮಾತು. ಇಲ್ಲಿ ನಡೆಯುತ್ತಿರುವ ಪ್ರತಿಯೊಂದು ಸಮಾಚಾರವನ್ನೂ ಆಗಿಂದಾಗಲೇ ಹ್ಯಾಮಿಲ್ಟನ್ ಸಾಹೇಬರಿಗೆ ತಿಳಿಸುವ ವ್ಯವಸ್ಥೆ ಮಾಡಿರಿ ದಿವಾನ್‌ಜೀ.

ದಿವಾನ : ಅಪ್ಪಣೆಯಂತಾಗಲಿ ರಾಣೀ ಸಾಹೇಬಾ...

ದೃಶ್ಯ ೬

ಗುರಭಕ್ಷ : ಮಿತ್ರಾ... ನಥೇಖಾನನು ರಾಣಿಯ ಪತ್ರಗಳೊಂದೂ ಬ್ರಿಟಿಷರಿಗೆ ತಲುಪದಿರುವಂತೆ ಯೋಗ್ಯ ವ್ಯವಸ್ಥೆ ಮಾಡಿರುವನು... ಪಾಪ... ಇದು ರಾಣಿಗೆ ಗೊತ್ತಿಲ್ಲ... ಅದೂ ಅಲ್ಲದೆ "ರಾಣಿಯು ಬಂಡುಗಾರರೊಂದಿಗೆ ಸೇರಿರುವಳು... ನಾನು ಬ್ರಿಟಿಷರ ಪರವಾಗಿ ಅವಳೊಡನೆ ಯುದ್ಧ ಮಾಡುತ್ತಿದ್ದೇನೆ" ಎಂಬುದಾಗಿ ಬ್ರಿಟಿಷರಿಗೆ ಪತ್ರ ಬರೆದಿರುವನು... ನೋಡು, ನಮಗೆ ರಾಜಾಶ್ರಯ ಇಲ್ಲದಿರುವುದರಿಂದ, ಜನರು ನಮ್ಮನ್ನು ಕೀಳಾಗಿ ಕಾಣುವರು. ಆದ್ದರಿಂದ ಒಂದು ಉಪಾಯ ಮಾಡೋಣ... ಮಹಾರಾಣಿಯೇ ನಮ್ಮ ನೇತಾರಳು... ನಮ್ಮ ಸಹಾಯದಿಂದಲೇ ಅವಳು ಝಾಂಸಿಯ ಸಿಂಹಾಸನವನ್ನು ಆಕ್ರಮಿಸಿ ರಾಜ್ಯಭಾರ ನಡೆಸುತ್ತಿರುವಳು ಮತ್ತು ಅವಳ ಅಪ್ಪಣೆಯ ಮೇರೆಗೆ ಬ್ರಿಟಿಷರ ಮೇಲೆ ಸೇಡು ತೀರಿಸಿಕೊಳ್ಳುತ್ತಿರುವೆವೆಂದು ಎಲ್ಲಕಡೆ ಹೇಳಿಕೊಂಡು ತಿರುಗೋಣ...

ಮಿತ್ರ : ಗುರುಭಕ್ಷಾ... ನಿನ್ನ ತಂತ್ರಗಳೆಲ್ಲಾ ಒಳ್ಳೆಯವೇ... ಇನ್ನೂ ಒಂದು ಉಪಾಯ ಮಾಡಬಹುದು.

ಗುರುಭಕ್ಷ : ಏನು ಹೇಳು

ಮಿತ್ರ : ಬೇರೆ ಬೇರೆ ಸಂಸ್ಥಾನಿಕರಿಗೆ, ಮಹಾರಾಣಿಯ ಹೆಸರಿನಲ್ಲಿ ಪತ್ರಗಳನ್ನು ಬರೆದು ಧನಸಹಾಯ, ಜನಸಹಾಯ ಮಾಡಬೇಕೆಂದು ಕೇಳಿಕೊಂಡರೆ... ಹೇಗಿರುತ್ತೆ ಹೇಳು.

ಗುರು ಭಕ್ಷ : ಅಚ್ಛಾ....ಒಳ್ಳೆಯ ಸಲಹೆಯನ್ನೇ ಮಾಡಿದೆ....ಹಾಗೆಯೇ ಮಾಡೋಣ ನಡಿ.

ದೃಶ್ಯ ೭

ಕಾಶಿ : ರಾಣಿ ಸಾಹೇಬಾ... ಕುದುರೆಗಳನ್ನು ಮಾರಲು ಬಯಸಿ, ಸೌದಾಗರನು, ಎರಡು ಅತಿ ಸುಂದರವೂ, ಭವ್ಯವೂ ಆದ ಕುದುರೆಗಳನ್ನು ತಂದಿರುವನು.

ರಾಣಿ : ಆಗಲಿ ಕಾಶಿ... ನಾನೊಮ್ಮೆ ಅವುಗಳ ಮೇಲೆ ಸವಾರಿ ಮಾಡಿ ಬಂದು, ಅನಂತರ ಬೆಲೆಯನ್ನು ನಿಷ್ಕರ್ಷೆ ಮಾಡುವೆನು... (ಕುದುರೆ ಓಟದ ಶಬ್ದ)... ಸೌದಾಗರ, ನೋಡು... ಬಲದಲ್ಲಿ ನಿಂತಿರುವ ಕುದುರೆಯ ಬೆಲೆ ಒಂದು ಸಾವಿರ ರೂಪಾಯಿಗಳು... ಎಡದಲ್ಲಿ ನಿಂತಿರುವ ಕುದುರೆಯ ಬೆಲೆ ಐವತ್ತು ರೂ.ಗಳು....

ಕಾಶಿ : ಏನಿದು ವಿಚಿತ್ರ ರಾಣೀ ಸಾಹೇಬಾ.... ನೀವು ಐವತ್ತು ರೂ. ಬೆಲೆಕಟ್ಟಿದ ಕುದುರೆ ಆ ಇನ್ನೊಂದು ಕುದುರೆಗಿಂತ ಸುಂದರವಾಗಿಯೂ, ಗಟ್ಟಿಮುಟ್ಟಾಗಿಯೂ ಕಾಣುತ್ತದೆ... ಆದರೂ ಅವುಗಳ ಬೆಲೆಯಲ್ಲಿ ಇಷ್ಟೊಂದು ಅಂತರವೇಕೆ ?

ರಾಣಿ : (ನಕ್ಕು) ಅದು ನೋಡಲು ಹೇಗೆ ಕಂಡರೇನು...ಅದು ನಿಜವಾಗಿಯೂ ಕೆಲಸಕ್ಕೆ ಬರುವಂತಹುದಲ್ಲ...ಅದರ ಎದೆಯೊಳಗೆ ಹಳೆಯ ಘಾಯವಿದೆ...ನಿಜವಲ್ಲವೇ ಸೌದಾಗರ.

ಸೌದಾಗಾರ : ನಿಜ, ರಾಣೀ ಸಾಹೇಬಾ...ಇಡೀ ಉತ್ತರ ಹಿಂದೂಸ್ಥಾನದಲ್ಲಿ, ಅಶ್ವಪರೀಕ್ಷೆಯಲ್ಲಿ ಹೆಸರಾದವರು ಶ್ರೀಮಂತ ನಾನಾಸಾಹೇಬ ಪೇಷ್ವೆ ಒಬ್ಬರು...ಮತ್ತೊಬ್ಬರು ಬಾಬಾ ಸಾಹೇಬ ಅಷ್ಟೆ... ಆದರೆ ಇವರಿಗಿಂತಲೂ ನೀವು ತುಂಬಾ ಶ್ರೇಷ್ಠರು ಈ ಅಶ್ವಪರೀಕ್ಷೆಯಲ್ಲಿ...ಇದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು.

ದೃಶ್ಯ ೮

ರಾಣಿ : ಸ್ನೇಹಿತರೇ...ಬ್ರಿಟಿಷರ ಸಂಗಡ ನಾವು ಎಷ್ಟು ನಿಷ್ಠೆಯಿಂದ ನಡೆದುಕೊಂಡರೂ,ಅವರು ನಮ್ಮ ಮನಸ್ಸನ್ನರಿಯದೆ,ನಮ್ಮನ್ನು

ಬಂಡಾಯಗಾರರೆಂದೇ ತೀರ್ಮಾನಿಸಿದರು...ಮೇಜರ್ ಜನರಲ್ ಸರ್ ಹ್ಯೂರೋಜನು, ಸುಸಜ್ಜಿತವಾದ ಅಸಂಖ್ಯಾತ ಸೈನ್ಯ ದೊಡನೆ ದಂಡೆತ್ತಿ ಬರಲಿದ್ದಾನೆ...ಹುಂ ದೈವಗತಿಯು ವಿಚಿತ್ರ ವಾದದ್ದು, ನಮ್ಮಲ್ಲಿರುವ ಸೈನಿಕರು, ಹಿಂದೆ ಬ್ರಿಟಿಷರು ಸೈನ್ಯ ದಿಂದ ತೆಗೆದು ಹಾಕಿದವರು...ಅವರಲ್ಲಿರುವ ದೇಶೀಸೈನಿಕರೂ ತುಪಾಕಿಗೆ ಹಂದಿಯ ಕೊಬ್ಬನ್ನು ಸವರಿರುವರೆಂದು ಅತೃಪ್ತ ರಾಗಿದ್ದಾರೆ...ಅವರಿಗೆ ಬ್ರಿಟಿಷರ ಬಗೆಗೆ ದ್ವೇಷವೇ ತುಂಬಿದೆ; ಸೇಡು ತೀರಿಸಿಕೊಳ್ಳಲು ಉತ್ಸುಕರಾಗಿದ್ದಾರೆ...ಬ್ರಿಟಿಷರಿಗೆ ನಿಜ ವಾದ ಸಂಗತಿ ತಿಳಿಸಿ, ಸಮಾಧಾನ ಮಾಡಬೇಕೆನ್ನುವಷ್ಟರಲ್ಲೇ, ಬಂಡುಗಾರರು ರಾತ್ರಿ ಬ್ರಿಟಿಷರ ಮೇಲೆ ಶಸ್ತ್ರವನ್ನೆತ್ತಿ, ಗುಂಡ ಹಾರಿಸಿದ್ದಾರೆ. ಹೀಗಾಗಿ ನನ್ನ ಯೋಚನೆಯು ನಿಷ್ಫಲ ವಾಯ್ತು...ಇನ್ನು ಯುದ್ಧಕ್ಕೆ ಸಿದ್ಧರಾಗಲೇ ಬೇಕು.

ಸೇನಾಪತಿ : ರಾಣೀ ಸಾಹೇಬಾ...ತಮ್ಮನ್ನು ಸೆರೆಹಿಡಿದು ಒಯ್ಯಬೇಕೆಂದು ಬ್ರಿಟಿಷರು ಯೋಚಿಸಿದ್ದಾರೆಂದು ಸೈನ್ಯದಲ್ಲೆಲ್ಲಾ ವಾರ್ತೆ ಹಬ್ಬಿದೆ.

ರಾಣಿ : ಏನು ನನ್ನನ್ನು ಸೆರೆ ಹಿಡಿಯುವರೇ? ಇಷ್ಟು ನಿಷ್ಠೆಯಿಂದ ನಡೆದು ಕೊಂಡ ನನ್ನನ್ನು ! ಈ ಝಾಂಸಿಯ ರಾಣಿಯನ್ನು ಸೆರೆಹಿಡಿಯು ವರೇ!...ಎಂದಿಗೂ ಸಾಧ್ಯವಿಲ್ಲ...ಹುಂ...ಈ ಜೀವಿತ ನಶ್ವರ ವಾದುದು. ಅಂದ ಮೇಲೆ ರಣರಂಗದಲ್ಲಿ ಹೋರಾಡುತ್ತಾ ಮರಣ ಹೊಂದಲು ಚಿಂತೆಮಾಡುವ ಕಾರಣವೇನಿದೆ?...ಹಾಂ... ಝಾಂಸಿಯ ನಗರ ಮತ್ತು ಕಿಲ್ಲೆಗಳನ್ನು ಭದ್ರಪಡಿಸಿ...ಆಹಾರ ಸಂಗ್ರಹಣೆ ಆಗಲಿ...ಮದ್ದು, ಗುಂಡುಗಳ ಸರಬರಾಜು ಹೆಚ್ಚಾ ಗಲಿ...ದಿವಾನ್‌ಜೀ...ಕಾಲ್ಪಿಗೆ ಸವಾರರನ್ನು ತುರ್ತಾಗಿ ಅಟ್ಟಿ, ಅಲ್ಲಿರುವ ನಾನಾಸಾಹೇಬ ಪೇಷ್ವೆಯ ಸಹಾಯವನ್ನು ಕೋರು ತ್ತಿರುವೆನೆಂದು ವಿನಂತಿ ಪತ್ರವನ್ನು ಕಳಿಸಿ, ತಾತ್ಯಾಟೋಪಿಯ ಸಹಾಯವೂ ಇಷ್ಟರಲ್ಲಿಯೇ ಒದಗಲಿದೆ...ಯಾರೂ ಎದೆಗುಂದು ಬಾರದು...ಮಾತೃಭೂಮಿಯ ರಕ್ಷಣೆಗೆ ಹೋರಾಡೋಣ...

ಸುಂದರಿ, ಮುಂದರಿ...ನಮ್ಮ ಸ್ತ್ರೀ ಸೈನ್ಯವೂ ಯುದ್ಧಕ್ಕೆ ಸಿದ್ಧವಾಗಲಿ...ಇದು ಬ್ರಿಟಿಷರ ವಿರುದ್ಧ, ನಮ್ಮ ಸ್ವಾತಂತ್ರ್ಯಕ್ಕಾಗಿ ನಡೆಸುವ ಧರ್ಮಯುದ್ಧ...ಗೆದ್ದರೆ ನಾವು ಸ್ವತಂತ್ರರು ಸೋತರೆ ನಮ್ಮ ಪಾಲಿಗೆ ವೀರಸ್ವರ್ಗ ಕಾದಿದೆ...ಸ್ನೇಹಿತರೇ ನಿಮಗೆ ಸಿಕ್ಕಿರುವ ಈ ಸುಸಂಧಿಯನ್ನು ಉಪಯೋಗಿಸಿಕೊಂಡು, ಶಕ್ತಿ ಮೀರಿ ಹೋರಾಡಿ...ಫಲಾಫಲ ದೈವೇಚ್ಛೆ.

ಜನರು : ಜೈ ಭವಾನಿ...ಅಲ್ಲಾ ಹೋ ಅಕ್ಬರ್...ಮಹಾರಾಣಿಗೆ ಜಯವಾಗಲಿ

ದೃಶ್ಯ ೯

ಹ್ಯೂರೋಜ: ಮೇಜರ್...ಈ ರಾಣಿಯು ಎಂತಹ ಅಸಾಧಾರಣ ಹೆಂಗಸು ! ಏನವಳ ತೇಜಸ್ಸು!...ಏನವಳ ಧೈರ್ಯ, ಪರಾಕ್ರಮ, ಯುದ್ಧ ಕೌಶಲ ! ಅಬ್ಬಾ...ಯಾರಾದರೂ ಮೆಚ್ಚಬೇಕು...ಸರಿಯಾದ ವ್ಯವಸ್ಥೆ ಇಲ್ಲದ ಆ ಸೈನಿಕರನ್ನೇ ಇಟ್ಟುಕೊಡು, ಯುದ್ಧಮಾಡಿ, ಈ ಸರ್ ಹ್ಯೂರೋಜನಂತಹ ಯುದ್ಧ ಕುಶಲನಿಗೂ ಮಣ್ಣು ಮುಕ್ಕಿಸಿದಳಲ್ಲ!...ಹನ್ನೆರಡು ದಿನಗಳ ಕಾಲ ರಾಜ್ಯವನ್ನೂ, ಕಿಲ್ಲೆಯನ್ನೂ ಸಂರಕ್ಷಿಸಿದಳಲ್ಲ!...ಕಾಲ್ಪಿಯಲ್ಲಿರುವ ನಾನಾ ಸಾಹೇಬ ಪೇಷ್ವೆಯನ್ನು ಕೂಡಿಕೊಳ್ಳಲು, ದತ್ತುಮಗನನ್ನೂ ಬೆನ್ನಿಗೆ ಕಟ್ಟಿಕೊಂಡು, ಕೇವಲ ಒಂದು ದಿನದಲ್ಲಿ ನೂರ ಎರಡು ಮೈಲಿ ಕುದುರೆಸವಾರಿ ಮಾಡಿರುವಳಲ್ಲ!...ಆಂ... ಕುದುರೆಸವಾರಿಯಲ್ಲಿ ಎಂತಹ ಅದ್ವಿತೀಯ ಚತುರಳು!... ಮೇಜರ್, ಆಕೆ ಕಾಲ್ಪಿಯನ್ನು ತಲುಪಿದ ನಂತರದ ವಿಚಾರ ವೇನಾದರೂ ತಿಳಿದು ಬಂತೇ ?

ಮೇಜರ್ : ಅವಳ ಹಿಂದೆಯೇ ನಮ್ಮ ಕಡೆಯ ನೂರಾರು ಪಠಾಣವೀರರು ಹಿಂಬಾಲಿಸಿ ಹೋದರು, ಸರ್...ಅವಳ ಯುದ್ಧ ಕಲೆಯನ್ನು

ಏನೆಂದು ವರ್ಣಿಸಲಿ...ಆ ಗುಂಪನ್ನು ಬಗೆದುಕೊಂಡು ಹೋದವಳಂತೆ, ಕುದುರೆ ಏರಿ, ಶರವೇಗದಿಂದ ಹೋದಳು... ಹಾಗೂ ಹಿಂಬಾಲಿಸಿ ಹೋದವರನ್ನು ಅಪ್ರತಿಮ ಶೌರ್ಯದಿಂದ ಇರಿದು ಕೊಂದಳು...ಕಾಲ್ಪಿಯನ್ನು ತಲುಪಿದ ಮೇಲೆ ಪೇಷ್ವೆ, ತಾತ್ಯಾಟೋಪಿಯವರ ಅಸಂಖ್ಯಾತ ಸೈನ್ಯದೊಂದಿಗೆ ಕೂಡಿ ಕೊಂಡರೂ, ಇವಳು ಹೆಂಗಸೆಂಬ ಕೀಳು ಮನೋಭಾವನೆಯನ್ನು ಇಟ್ಟುಕೊಂಡು, ಇವಳ ನೇತೃತ್ವವನ್ನು ಒಪ್ಪದೆ ಅವರು ತಾವೇ ನಾಯಕರಾದರು...ಸುವ್ಯವಸ್ಥೆ ಇಲ್ಲದ ಆಸೈನ್ಯವು ಸೋತು ಹೋಯಿತು....ಈ ಕಡೆ ಇಲ್ಲಿ ತಾತ್ಯಾಟೋಪಿಯು ಒಂದು ವರ್ಷದಿಂದ ಕೂಡಿಟ್ಟಿದ್ದ ಯುದ್ಧ ಸಾಮಗ್ರಿಗಳು ಮತ್ತು ಅರವತ್ತು ಸಾವಿರ ಪೌಂಡು ಮದ್ದು ಅಲ್ಲದೆ ವಿಪುಲ ಸಂಪತ್ತು ನಮ್ಮವರ ಕೈವಶವಾಯಿತು...ಅನಂತರ ಅವರುಗಳು ಇತರ ಸಂಸ್ಥಾನಿಕರೊಡನೆ ಕೂಡಿಕೊಂಡು. ಗ್ವಾಲಿಯರ್‌ನಲ್ಲಿ ಯುದ್ಧಕ್ಕೆ ತೊಡಗಿದರು. ಆದರೆ ಅವರ ಅಂತಃಕಲಹ...ಬುದ್ಧಿವಂತಳೂ, ಶೂರಳೂ ಆದ ರಾಣಿಯ ನೇತೃತ್ವವನ್ನು ಒಪ್ಪದಿರುವುದು ಮತ್ತು ಆಯತ ಸಮಯದಲ್ಲಿ ಸ್ವಜನರಿಂದ ಆದ ಮೋಸ...ಈ ಎಲ್ಲ ಕಾರಣಗಳಿಂದ ಸೋಲನ್ನು ಅಪ್ಪಬೇಕಾಯ್ತು...ರಾಣಿಯು ಹೋರಾಡುತ್ತಾ ವೀರಸ್ವರ್ಗವನ್ನು ಪಡೆದಳು.

ರೋಜ : ಝಾಂಸಿ ರಾಣಿ ಲಕ್ಷ್ಮೀಬಾಯಿಯು ಯಾವ ಗಂಡಸಿಗೂ ಕಡಿಮೆ ಇಲ್ಲದಂತೆ, ತನ್ನ, ವಿವೇಕ, ಸದ್ಗುಣ, ಸ್ವದೇಶಾಭಿಮಾನ, ವೀರ್ಯ, ಯುದ್ಧಕೌಶಲ ತೋರಿ ಮೆರೆದಳು...ತನ್ನ ಶಕ್ತಿ ಮೀರಿ ಪ್ರಯತ್ನ ಮಾಡಿದಳು...ಈ ವೀರರಮಣಿ ಒಂದು ಉಜ್ವಲ ರತ್ನ...ಹಿಂದೂಸ್ಥಾನದ ವೀರನಾರಿಯರಲ್ಲಿ ಮುಕುಟ ಪ್ರಾಯಳು...ಅವಳ ಆತ್ಮಕ್ಕೆ ಶಾಂತಿ ಇರಲಿ...

ಸೀತಾ-ರತ್ನ

ಪಾತ್ರವರ್ಗ

ಸ್ತ್ರೀಯರು

ಸುನೀತಿ

ರಾಧಾಬಾಯಿ

ಸೀತೆ

ಪುರುಷ

ರಾಮರಾಯ

ದೃಶ್ಯ ೧

(ಕಾರು ಬಂದು ನಿಂತ ಶಬ್ದ)

ರಾಧಾ : ರೀ...ಮಿಸ್ಟರ್...

ರಾಮು : ಓ...ಇದ್ದಾರಪ್ಪ, ಆಸ್ಪತ್ರೆ ಬಾಗಿಲು ಮುಚ್ಚಿ ಹೊರಡುವ ಸಮಯಕ್ಕೆ ಸರಿಯಾಗಿ ಬಂದವರು...ಕಾರಿನಲ್ಲಿ ಕುಳಿತು ಕರೆಯು ತ್ತಿದ್ದಾರೆ...ಸಂಜ್ಞೆಮಾಡಿ ಬೇರೆ ಕರೆಯುತ್ತಿದ್ದಾರೆ...ಅವೂ ಹೆಂಗಸು...ನನ್ನ ಪರಿಚಯದವರ್ಯಾರೂ ಅಲ್ಲ...ಹುಂ...ಇರಲಿ ...ಹೋಗಿ ನೋಡೋಣ. (...ಹೆಜ್ಜೆಯ ಸದ್ದು)

ರಾಧಾ : ತಾವೇನೋ ಕಾಂಪೌಂಡರ್ ರಾಮರಾಯರು ?

ರಾಮು : ಯಸ್ ಮೇಡಮ್

ರಾಧಾ : ಹಾಗಾದರೆ ಸಲ್ಪ ಹೀಗೆ ಬನ್ನಿ...ತಮ್ಮೊಡನೆ ಅಗತ್ಯವಾಗಿ ಮಾತನಾಡ ಬೇಕಾಗಿದೆ,

ರಾಮು : (ಆಶ್ಚರ್ಯ) ಏನು...ನನ್ನ ಹತ್ತಿರ...ಮಾತೇ ?

ರಾಧಾ : ಹೌದು ಬಹು ತುರ್ತು ಕೆಲಸವಿದೆ...ದಯಮಾಡಿ ನನ್ನೊಂದಿಗೆ ಬನ್ನಿ.

ರಾಮು : ಸರಿ...ನಡೆಯಿರಿ (ಕಾರು ಬಾಗಿಲು ತೆಗೆದು ಹಾಕಿದ ಶಬ್ದ)

ರಾಧಾ : ನನ್ನ ಹೆಸರು ರಾಧಾಬಾಯಿ...ನನ್ನ ಮನೆ ಜಯನಗರದಲ್ಲಿ... ತಮ್ಮಿಂದ ನನಗೊಂದು ಕೆಲಸವಾಗ ಬೇಕಾಗಿದೆ.

ರಾಮು : ನನ್ನಿಂದಲೇ... ಏನದು ಕೆಲಸ ?

ರಾಧಾ : ತಾವು ಬರೆಯುವುದರಲ್ಲಿ ನಿಷ್ಣಾತರೆಂದು ಕೇಳಿದ್ದೇನೆ.

ರಾಮು : ಬರೆಯುವುದರಲ್ಲಿ ನಿಷ್ಣಾತ...ನಾನು...(ನಕ್ಕು)ಹುಂ...ಆಫೀಸಿನ ಲೆಖ್ಖ ಪತ್ರ ಬರೆಯುವುದು ನಾನೇ...ಇನ್‌ಕಂಟ್ಯಾಕ್ಸಿಗೆ ಲೆಖ್ಖ ತೆಗೆದುಕೊಂಡು ಹೋಗುವವನೂ ನಾನೇ...ಪುರುಸೊತ್ತಿದ್ದಾಗ

ಯಾರದಾದರೂ ರೇಷನ್ ಅರ್ಜಿಗಳನ್ನೂ ಸಹ ಬರೆದು ಕೊಡು ತ್ತೇನೆ.

ರಾಧಾ : ಛೇ...ಛೇ...ವರ್ತಮಾನ ಪತ್ರಿಕೆಗಳಿಗೆ ಲೇಖನ–ಕತೆ, ಕವನ ಮುಂತಾದವುಗಳನ್ನು ಬರೆಯುತ್ತೀರಂತೆ.

ರಾಮು ; (ಸ್ವಗತ) ಓಹೋ...ನನ್ನ ಕೀರ್ತಿಲತೆ ಎಲ್ಲೆಲ್ಲಿ ಹಬ್ಬಿದೆ!....ಅಲ್ಲಾ ನನ್ನ ಕತೆ, ಕವನ ಎಲ್ಲಾದರೂ ನನ್ನಂತಹ ಎಳೆಯ ಪ್ರಾಯದ ತರುಣ, ತರುಣಿಯರಿಗೆ ರುಚಿಸಿಯಾವೇ ಹೊರತು, ಈ ರಾಧಾ ಬಾಯಿಯಂತಹ ಮುದುಕಿಗೆ ಹೇಗೆ ಹಿಡಿಸಿಯಾವು ?...ಅಂ... (ಪ್ರಕಟ) ಹುಂ...ಬರೆಯುವ ಅಭ್ಯಾಸ ಉಂಟು...

ರಾಧಾ : ಅದಕ್ಕಾಗಿಯೇ ನಾನು ತಮ್ಮ ಬಳಿ ಬಂದುದು.

ರಾಮು : ಏನು ಪತ್ರಿಕೆ ಹೊರಡಿಸುತ್ತೀರಾ ?...ನಾನೊಂದು ಕತೆ ಬರೆದು ಕೊಡಬೇಕೇ ? ಕಳೆದ ದೀಪಾವಳಿಯಲ್ಲಿ ಬರೆದು, ಯಾರೂ ಪ್ರಕಟ ಮಾಡಲು ಒಪ್ಪಲಿಲ್ಲವಾದ್ದರಿಂದ ಹಾಗೇ ಉಳಿದು ಬಿಟ್ಟಿ ರುವ ಕತೆ ಒಂದಿದೆ.

ರಾಧಾ ; ಛೇ...ಹಾಗಲ್ಲ

ರಾಮು : ಮತ್ತೇನು ?

ರಾಧಾ : ತಾವು ಕೆಲವು ಲವ್ ಲೆಟರ್ಸ್ ಬರೆದು ಕೊಡಬೇಕು...ಅದೇ... ಪ್ರಣಯ ಪತ್ರಗಳನ್ನು ಬರೆದು ಕೊಡಬೇಕು.

ರಾಮು : (ಸ್ವಗತ) ಎಂತಹ ವಿಚಿತ್ರ ಮನುಷ್ಯರಿದ್ದಾರೆ ಈ ಪ್ರಪಂಚದಲ್ಲಿ ...ನಾನು...ವಯಸ್ಸು ಮೂವತ್ತು ದಾಟದ ತರುಣ...ಪತ್ನಿ ಇದ್ದೂ...ಈಕೆಗೆ...ಕಡಿಮೆ ಎಂದರೆ ಅರವತ್ತು ವರ್ಷದಾಟಿದ ಈ ಮುದುಕಿಗೆ ಪ್ರಣಯ ಪತ್ರ...(ನಗು) ಓಹೋಹೋ... ಹೋ...ಹೋ...

ರಾಧಾ ; ಇದರಲ್ಲಿ ನಗುವಂತಹ ಪ್ರಸಂಗವೇನೂ ಇಲ್ಲ—ನನಗೊಬ್ಬಳು ಮಗಳಿದ್ದಾಳೆ...ಹೆಸರು ಸುನೀತಿ...ಅವಳೊಬ್ಬಳೇ ಮಗಳು

ನನಗೆ...ಬಹಳ ಮುದ್ದಿನಿಂದ ಸಾಕಿದ ಹುಡುಗಿ...ಸದ್ಗುಣೆ... ಆದರೆ ಮೊನ್ನೆ ದಸರಾ ರಜೆಯಲ್ಲಿ ಕಾರಣಾಂತರಗಳಿಂದ ನಾನು ಮಂಗಳೂರಿಗೆ ಹೋಗಿ ಬರಬೇಕಾಯ್ತು...ಇಲ್ಲಿ ಮನೆಯಲ್ಲಿ ಅಡುಗೆ ಮಾಡುವ ಭಟ್ಟನೊಬ್ಬ...ಸುನೀತಿಯೊಬ್ಬಳು...ಹೀಗೆ ಇಬ್ಬರೇ...ನಾನು ವಾಪಸು ಬರುವುದರಲ್ಲಿ ವಿಧಿಯು ಒಂದು ಆಟವನ್ನಾಡಿದೆ.

ರಾಮು : ಏನದು ? ಅಡುಗೆ ಭಟ್ಟನು ಸತ್ತು ಹೋದನೇ ?

ರಾಧಾ : (ನಿಟ್ಟುಸಿರು) ಇಲ್ಲ...ಹಾಗಾಗಿದ್ದರೆ ಚೆನ್ನಾಗಿರುತ್ತಿತ್ತು. ಆ ಹಾಳಾದವ ತಿಂದು, ಸೊಕ್ಕಿ, ಅನ್ನವಿಟ್ಟ ಕೈಯನ್ನೇ ಕಚ್ಚಿದ್ದಾನೆ.

ರಾಮು : ಏನು ಮಾಡಿದ ?

ರಾಧಾ . ಅಯ್ಯೋ...ನಿಮಗಿನ್ನೂ ಅರ್ಥವಾಗಲಿಲ್ಲವೇ ? ಬಿಡಿಸಿ ಇನ್ನು ಹೇಗೆ ಹೇಳಲಿ ? ನಾನು ಇರದಿದ್ದ ಎಂಟು ದಿನಗಳಲ್ಲೇ ಸುನೀತಿಯ ಮೇಲೆ ಮಾಯದ ಬಲೆ ಬೀಸಿ, ತನ್ನ ಬುಟ್ಟಿಯಲ್ಲಿ ಹಾಕಿ ಕೊಂಡಿದ್ದಾನೆ...ಸುನೀತಿಯು ಅವನನ್ನಲ್ಲದೆ ಬೇರಾರನ್ನೂ ಮದುವೆಯಾಗುವುದಿಲ್ಲವೆಂದು ಹಠ ಹಿಡಿದಿದ್ದಾಳೆ..."ನಾವು ದೊಡ್ಡ ಮನೆತನದವರು...ಹಾಗೆಲ್ಲಾ ಅಡುಗೆ ಭಟ್ಟನನ್ನು ಮದುವೆಯಾಗುವುದೇ "ಎಂದು ಗದರಿದರೆ, "ಅಮ್ಮಾ ಅಡುಗೆ ಭಟ್ಟನೂ ಮನುಷ್ಯನೇ, ದೊಡ್ಡಮನೆತನದವರೂ ಮನುಷ್ಯರೇ ...ಇಬ್ಬರ ಮೈಯಲ್ಲೂ ಹರಿಯುತ್ತಿರುವುದು ಕೆಂಪು ಬಣ್ಣದ ರಕ್ತವೇ" ಎಂದು ತತ್ವವನ್ನು ಹಾಡತೊಡಗಿದ್ದಾಳೆ.

ರಾಮು : (ಸ್ವಗತ) ಭಲೇ ಹುಡುಗಿ...ಏನು ಸಮತಾವಾದ...ಕಮ್ಯುನಿಸ್ಟ ರನ್ನು ಬಿಟ್ಟು ಕೊಡುವವಳಲ್ಲ...(ಪ್ರಕಟ) ಮುಂದೇನಾಯಿತು?

ರಾಧಾ : ಮತ್ತೇನಾಗುವುದು...ಗತ್ಯಂತರವಿಲ್ಲದೆ, ಅವನನ್ನು ಅಡುಗೆ ಕೆಲಸದಿಂದ ತೆಗೆದು ಹಾಕಿದೆ.

ರಾಮು : ಒಳ್ಳೆಯದಾಯಿತಲ್ಲ...

ರಾಧಾ : ಈಗ ಸುನೀತಿ ಹಠ ಹಿಡಿದು ಕುಳಿತಿದ್ದಾಳೆ...ಅದೇ ಕಷ್ಟಕ್ಕೆ ಬಂದಿರುವುದು..."ಆ ಅಡುಗೆ ಭಟ್ಟನನ್ನು ಕಾಣದೆ ಊಟ ಮಾಡುವುದಿಲ್ಲ...ಪಾಠ ಓದುವುದಿಲ್ಲ ನೀರು ಕುಡಿಯುವುದಿಲ್ಲ" ಎಂದು ಹಠ. ಸದಾ ಅಳುತ್ತಾ ಕೂತಿರುತ್ತಾಳೆ...ಗಳಿಗೆ ಗೊಮ್ಮೆ ಬಾವಿಗೆ ಬಿದ್ದು ಪ್ರಾಣ ಬಿಡುತ್ತೇನೆಂದು ಒದರಾಡು ತ್ತಾಳೆ...ಅಷ್ಟು ಮಂಕುಬೂದಿ ಎರಚಿದ್ದಾನೆ ಆ ಗೋಮುಖ ವ್ಯಾಘ್ರ...ಅಡುಗೆ ಭಟ್ಟ.

ರಾಮ : (ಸ್ವಗತ) ಎಂತಹ ರೊಮ್ಯಾಂಟಿಕ್ ನಾವೆಲ್ಲು...ಯಾವ ಅದ್ಭುತ ಕತೆಗಾರನ ತಲೆಗೂ ಇಂತಹ ಭಯಂಕರ ಪ್ಲಾಟ್ ಹೊಳೆದಿರ ಲಾರದು...(ಪ್ರಕಟ) ಅದಕ್ಕೆ ಈಗ ನನ್ನಿಂದೇನಾಗಬೇಕು ?

ರಾಧಾ : ತಾವು ಆಕೆಯ ಮನಸ್ಸಿನೊಳಗೆ ಹೊಕ್ಕಿರುವ ಆ ಅಡುಗೆ ಭಟ್ಟನ ಭೂತವನ್ನು ಬಿಡಿಸಬೇಕು.

ರಾಮ : (ನಕ್ಕು) ಭೂತ ಬಿಡಿಸಲು ನಾನೇನು ಮಂತ್ರವಾದಿಯೇ ?

ರಾಧಾ : ಮಂತ್ರವಾದಿಯ ಅಗತ್ಯವಿಲ್ಲ...ನಿಮ್ಮ ಲೇಖನಿಯ ತಂತ್ರ ವಾದವೇ ಸಾಕು...ಅವಳಿಗೆ ಅಡುಗೆ ಭಟ್ಟನೊಂದಿಗೆ ಆಗಿರು ವುದು ಪ್ರಥಮ ಸಲದ ಪ್ರಣಯಾನುಭವ...ಆದ್ದರಿಂದ ಅವಳ ತಲೆಯೊಳಗೆ ಇನ್ನೊಂದು ಪ್ರಣಯ ಬೀಜವನ್ನು ಬಿತ್ತಿದಲ್ಲಿ ಆ ಭಟ್ಟನ ನೆನಪು ತನಗೆ ತಾನೇ ಮಾಸುತ್ತದೆ.

ರಾಮ : (ಸ್ವಗತ) ಒಳ್ಳೆಯ ಯೋಚನೆ...ಅವಳನ್ನು ಉದ್ಧಾರ ಮಾಡಲಿ ಕ್ಕೆಂದು ನಾನು ಅವಳಿಗೆ ಪ್ರೇಮ ಪತ್ರಗಳನ್ನು ಬರೆದು, ಕೊನೆಗೆ ಅವಳು ನನ್ನ ಬೆನ್ನು ಹತ್ತಿದರೆ...ಒಳ್ಳೆ ಚೆನ್ನಾಗಿರುತ್ತದೆ.

ರಾಧಾ : ನೀವು ಏನು ಯೋಚಿಸುತ್ತಿದ್ದೀರೆಂದು ನನಗೆ ಗೊತ್ತಾಯಿತು.... ಹಾಗೆಲ್ಲಾ ಅನುಮಾನ ಪಡುವ ಕಾರಣವಿಲ್ಲ...ನಾನು ಅವಳಿಗೆ ನಿಮ್ಮ ಪರಿಚಯವನ್ನು ತಿಳಿಸುವುದಿಲ್ಲ....ಸಧ್ಯ ಅವಳ ಮನಸ್ಸು ಅಡುಗೆ ಭಟ್ಟನಿಂದ ದೂರವಾದರೆ ಸಾಕು—

ರಾಮ : ಒಳ್ಳೆಯ ಕತೆಗಿಟ್ಟುಕೊಂಡಿತಲ್ಲಪ್ಪ ಇದು.

ರಾಧಾ : ತಮ್ಮ ಅದ್ಭುತ ಲೇಖನಿಯಿಂದ ಒಂದೆರಡು ಪ್ರಣಯ ಪತ್ರಗಳನ್ನು ಬರೆದರೆ ಸಾಕು....ಅವಳಿಗೆ ಕವಿದ ಮಂಕು ಮಾಯವಾಗುತ್ತದೆ....ತಾವು ಬರೆದ ಅನೇಕ ರೊಮ್ಯಾಂಟಿಕ್ ಕತೆಗಳನ್ನು ಓದಿದ್ದೇನೆ....ಓದುವಾಗ ಆ ರೀತಿಯ ಅನುಭವ ನನ್ನ ಹಣೆಯಲ್ಲೇಕೆ ಬರೆದಿಲ್ಲವೆಂದು ಪರಿತಪಿಸಿದ್ದೇನೆ....ನನ್ನವಯಸ್ಸನ್ನು ನಿಂದಿಸಿಕೊಂಡಿದ್ದೇನೆ....ಪ್ರೇಮ ಪ್ರಕರಣಗಳನ್ನು ನೀವು ಅಷ್ಟು ಚೆನ್ನಾಗಿ ಚಿತ್ರಿಸುತ್ತೀರಿ....ಸೊಗಸಾದ ಬರೆವಣಿಗೆ ನಿಮ್ಮದು ....ನಿಮ್ಮಿಂದಲ್ಲದೆ ಈ ಕಾರ್ಯ ಇತರರಿಗೆ ಸಾಧ್ಯವಾಗದು.

ರಾಮು : (ಸ್ವಗತ) ಅಲ್ಲ....ನನ್ನನ್ನು ಏನೆಂದು ತಿಳಿದಿದ್ದಾಳೆ ಈಕೆ.... ಹೊಗಳಿಕೆ ಕೇಳಿದ ಕೂಡಲೆ ಬಲಿಬೀಳುವ ಆಸಾಮಿಯೇ ನಾನು.

ರಾಧಾ : ಅಲ್ಲದೆ ಸುಮ್ಮಸುಮ್ಮನೆ ಪತ್ರ ಬರೆಯಲು ತಮಗೆ ಹೇಳುವುದಿಲ್ಲ, ಪ್ರತಿಯೊಂದು ಪ್ರಣಯ ಪತ್ರಕ್ಕೆ ಮೂವತ್ತು ರೂ. ಗಳಂತೆ ಸಂಭಾವನೆ ಕೊಡುತ್ತೇನೆ.

ರಾಮು : ಹೀ....ಹೀ....ಹೀ....ಇಷ್ಟೊಂದು ಕೇಳಿಕೊಂಡ ಮೇಲೆ ಇಲ್ಲವೆನ್ನಲು ಮನಸ್ಸೇ ಬರುತ್ತಿಲ್ಲ ನನಗೆ

ರಾಧಾ : ಪ್ರಥಮ ಪತ್ರಕ್ಕಾಗಿ ನಾಳೆ ಡ್ರೈವರ್ ಕಳಿಸುತ್ತೇನೆ. ಅವನ ಕೈಯಲ್ಲೇ ಮೂವತ್ತು ರೂ. ಗಳನ್ನೂ ಕಳಿಸಿರುತ್ತೇನೆ....ವಾರಕ್ಕೊಂದರಂತೆ ಪತ್ರ ಬರೆಯಿರಿ....ನಿಮಗೆ ಏನೂ ತೊಂದರೆಯಾಗದಂತೆ ನೋಡಿಕೊಳ್ಳಲು ನಾನಿದ್ದೇನೆ.

ರಾಮು : ಆಗಬಹುದು....ಆಗಬಹುದು.

ರಾಧಾ : ಸರಿ...ನಾನಿನ್ನು ಬರುತ್ತೇನೆ....ನಾಳೆ ನೀವು ಪ್ರೇಮಪತ್ರವನ್ನು ಬರೆದು ಸಿದ್ಧ ಮಾಡಿಟ್ಟಿರಿ ಮರೆತು ಬಿಟ್ಟೀರಾ....ಹಾಗಾದರೆ ಬರಲಾ.

ರಾಮು : ಆಗಲಿ....ಹೋಗಿಬನ್ನಿ....(ಕಾರು ಹೋದಶಬ್ದ)....(ಸಂತೋಷ) ಓಹೋ....ಹೋ....ಒಂದು ಪತ್ರಕ್ಕೆ ಮೂವತ್ತು ರೂಪಾಯಿ

....ಓ...ಬೆಳಗೆದ್ದು ಯಾರ ಮುಖ ನೋಡಿದ್ದೆನೋ....,ಹೂ.... ಯಾರ ಮುಖ ಏನು, ನನ್ನ ಸೀತೆಯ ಮುಖವನ್ನೇ ನೋಡಿದ್ದು ..ಒಂದು ತಿಂಗಳಿಗೆ ಕನಿಷ್ಠ ನಾಲ್ಕು ಪತ್ರಗಳು....ಅಲ್ಲಿಗೆ ತಿಂಗಳಿಗೆ ನೂರಇಪ್ಪತ್ತು ರೂ.ಗಳು ...ಓಹೋ....ಏನು ಸಂಪಾದನೆ ಆದರಲ್ಲಿ ನನ್ನ ಸೀತೆಗೊಂದು ಹೊಸಾ ಸೀರೆ....

ದೃಶ್ಯ ೨

ರಾಮು : (ಪತ್ರ ಕೈಲಿ ಹಿಡಿದು ಓದುತ್ತಿರುವನು)

ಹೃದಯೇಶ್ವರೀ....

ನಿನ್ನೆದಿನ ನಿನ್ನನ್ನು ಲಾಲ್‌ಬಾಗ್‌ನಲ್ಲಿ ನೋಡಿದೆ....,ಸುತ್ತಲಿನ ನಿಸರ್ಗವೇ ಕಾಣದಂತಾಯ್ತು....,ನಿನ್ನ ರೂಪ ಪ್ರಭೆಯ ಮುಂದೆ ಜಗತ್ತೇತಟಸ್ಥವಾದಂತೆನಿಸಿತು....,ನನ್ನ ಚಿತ್ತವು ನಿನ್ನಲ್ಲೇ ಸೇರಿ ಹೋಗಿದೆ....,ಕಣ್ಣುಗಳು ನಿನ್ನನ್ನು ಕಾಣಲು ಆತುರವಾಗಿವೆ.... ಕಿವಿಗಳು ನಿನ್ನ ಸುಮಧುರ ಸ್ವರವನ್ನು ಕೇಳಲು ಕಾತುರಗೊಂಡಿವೆ ...,ಕೈಗಳು ನಿನ್ನ ಮೃದುವಾದ ಕೇಶಪಾಶವನ್ನು ಸವರಲು ತವಕಿಸುತ್ತಿವೆ....,ಮೂಗು ನೀನು ಶಿರದಲ್ಲಿ ಮುಡಿದಿರುವ ಗುಲಾಬಿಯನ್ನು ಆಘ್ರಾಣಿಸಲು ಕಾಯುತ್ತಿದೆ....ಹೆಚ್ಚೇನು.... ನನ್ನ ಇಂದ್ರಿಯಗಳೆಲ್ಲ ನಿನಗಾಗಿ ಹಂಬಲಿಸುತ್ತಿವೆ....ನನ್ನ ಮನ ಮೋಹಿನೀ....ಮದ್ಭಾಗ್ಯರೂಪಿಣೀ..ಮಮ ಹೃದಯಸ್ವಾಮಿನೀ ....ನಿನಗಾಗಿ ವಿರಕ್ತನಾಗಿದ್ದೇನೆ....ನಿನ್ನನ್ನು ಪುನಃ ಕಾಣದೆ ಮನ ಬೇಸರಗೊಂಡಿದೆ....,ಅನ್ನ, ಬಟ್ಟೆಗಳ ಆಸೆ ಇಲ್ಲದಂತಾಗಿದೆ.... ನೀನಿಲ್ಲದೆ ಜಗತ್ತೇ ಶೂನ್ಯವಾಗಿ ತೋರುತ್ತಿದೆ....ಜೀವನವೇ ಅಂಧಕಾರ ಮಯವಾಗಿದೆ.

ನಿನಗಾಗಿ ಕೆಂಪು ಸಮುದ್ರವನ್ನೇ ಈಜುತ್ತಿದ್ದೆ ; ಏನುಮಾಡಲಿ, ಈಜು ಬರುವುದಿಲ್ಲ....ನಿನಗಾಗಿ ಆಗಸವನ್ನೇ ಏರುತ್ತಿದ್ದೆ: ಆದರೆ

ಮರ ಕೂಡ ಏರಲು ಬರುವುದಿಲ್ಲ...,ಹುಲಿಯೊಡನೆ ಹೋರಾಡಿ ಹುಲಿಯ ಹಾಲನ್ನು ತರಲೇ, ಹುಲಿಯವೇಷವನ್ನಲ್ಲದೆ ಜೀವಂತ ಹುಲಿಯನ್ನೇ ನೋಡಿಲ್ಲ ಇದುವರೆಗೆ....ನಿನಗಾಗಿ ಏನುಮಾಡಲಿ ಹೇಳು....ಸಲ್ಫ್ಯೂರಿಕ್ ಆಸಿಡ್ ಕುಡಿದು ಪ್ರಾಣ ಬಿಡಲೇ.... ಕುತ್ತಿಗೆಗೆ ನೇಣು ಬಿಗಿದುಕೊಂಡು ಜೀವ ಬಿಡಲೇ....ಛೇ.... ಬೇಡ ಈ ನನ್ನ ಜೀವ ನಿನಗಾಗಿ ಮುಡಿಪಿಟ್ಟಿದ್ದೇನೆ....ನನ್ನ ತನು ಮನ, ಧನಗಳೆಲ್ಲಾ ನಿನಗೆ ಕೃಷ್ಣಾರ್ಪಣ...ಅಲ್ಲ, ಅಲ್ಲ ಸುನೀತಿ ಅರ್ಪಣ. ಪುನಃ ಭೇಟಿ ಎಂದು ?

ನಿನ್ನನ್ನೇ ಸದಾ ನೆನಸುತ್ತಿರುವ
ನಿನ್ನವ....

ಆಹಾ...ಎಷ್ಟು ಚೆನ್ನಾಗಿ ಬಂದಿದೆ ಪತ್ರ...ಚೆಲುವಾದ ಪ್ರಣಯ ಪತ್ರ...ನಾನು ಬರೆದದ್ದೆಂದು ಹೊಗಳಿಕೊಳ್ಳುವುದಲ್ಲ...ಈಗ ಕೇಳಿದಿರಲ್ಲ...ನೀವೇ ಹೇಳಿ...ಎಷ್ಟು ಚೆನ್ನಾಗಿದೆ ಈ ಪತ್ರ ಅಲ್ಲವೇ (ನಕ್ಕು) ನಾನು ಈ ಪತ್ರವನ್ನು ಆ ಹುಡುಗಿಗೆ ಬರೆದಿರು ವುದು ಗೊತ್ತಾದರೆ, ನನ್ನ ಪರಿಚಯದವರಿಗೆಲ್ಲಾ ಆಶ್ಚರ್ಯ ವಾಗಬೇಕು...(ಜೋರಾಗಿನಕ್ಕು)ಯಾವುದಾದರೂ ಪತ್ರಿಕೆಯಲ್ಲಿ, ಇದು ಅಚ್ಚಾಗಬೇಕು...ಆಗ ನೋಡಬೇಕು ಮಜಾ..,ಹೂ... ಮತ್ತೇನಿಲ್ಲ ಹೆಣ್ಣು ಕೊಟ್ಟ ಮಾವ, ದೊಣ್ಣೆತಂದು, ಮಂಡೆ ಬಿಸಿಮಾಡುತ್ತಾರೆ ಅಷ್ಟೆ...ಮನೆಯಲ್ಲಿ ನನ್ನ ಸೀತೆ ಇರುವಾಗ ...ಸುಖ ಸಂಸಾರ ನಡೆಸುತ್ತಿರುವಾಗ, ಇವನಿಗೇನು ಬಂತು ದುರ್ಬುದ್ಧಿ ಎಂದು ಮೂಗಿನ ಮೇಲೆ ಬೆರಳಿಡುತ್ತಾರೆ ಅಷ್ಟೆ... ನೋಡಿದ ಜನ.

ಆಗಾಗ್ಗೆ ಕೊಂಕು ನುಡಿಯುವ ಅಭ್ಯಾಸ ಇದ್ದರೂ ಸುಮಧುರ ಭಾಷಿಣಿ ನನ್ನ ಸೀತಾ..,ಮಾತು ಮಾತಿಗೆ "ತವರು ಮನೆಗೆ ಹೋಗುತ್ತೇನೆ" ಎಂದು ಹೆದರಿಸಿದರೂ ಕ್ಷಣ ಕಾಲವೂ ನನ್ನಿಂದ ದೂರ ಇರಲಾರದ ಸೀತಾ..."ಸಾತಿಯ ಗಂಡ ರೇಡಿಯೋ ತಂದ ಪಾತಿಯ ಗಂಡ ಎಮ್ಮೆ ತೆಗೆದುಕೊಂಡ...ಸರಸುವಿನ ಗಂಡ

ಅವಳಿಗೊಂದು ನೆಕ್‌ಲೇಸ್ ಮಾಡಿಸಿದ್ದಾನೆ" ಎಂದೆಲ್ಲಾ ವರದಿ ಮಾಡಿ, ನನ್ನನ್ನು ಆ ಎಲ್ಲಾ ಗಂಡಂದಿರಿಗಿಂತಲೂ ದಂಡನನ್ನಾಗಿ ಮಾಡುವ ಸೀತಾ...ದಾರಿಯಲ್ಲಿ ಹೋಗುವಾಗ, ದಾರಿಹೋಕರ ಮೇಲೆ ಕಣ್ಣು ಹೊರಳಿಸಿದರೆ "ಏನ್ರೀ...ಯಾರ್ರೀ ಅದು"ಎಂದು ಗದರಿಸುವ ಸೀತಾ...ನನ್ನ ಸೀತಾ ಮನೆಯಲ್ಲಿರುವಾಗ, ನಾನೀ ಪ್ರಣಯ ಪತ್ರವನ್ನು ಬೇರೊಬ್ಬಹೆಣ್ಣು ಮಗಳಿಗಾಗಿ ಬರೆದಿದ್ದೇನಲ್ಲ...ಅಂ...ಇದೂ ಒಂದು ರೀತಿಯ ತಮಾಷೆ...ಇರಲಿ... ಇದೊಂದು ಸಂಪಾದನೆಯ ಮಾರ್ಗ—ಅದೂ ನನ್ನ ಸೀತೆಗಾಗಿ.

ದೃಶ್ಯ ೩

ರಾಮು : ಈ ದಿನ ಭಾನುವಾರ...ಹೇಗೂ ರಜ...ಸೀತೆ ಬೇರೆ ಅವಳ ಸ್ನೇಹಿತೆಯನ್ನು ನೋಡುವ್ರದಕ್ಕೆಂದು ಬನಶಂಕರಿಗೆ ಹೋಗಿದ್ದಾಳೆ ...ನನ್ನ ನಾಲ್ಕನೆಯ ಪ್ರಣಯ ಪತ್ರವನ್ನು ಅವಳು ವಾಪಸು ಬರುವಷ್ಟರಲ್ಲಿ ಬರೆದು ಮುಗಿಸೋಣ...ಇಲ್ಲಿಗೆ ಮೂರು ಪತ್ರಗಳಿಂದ ತೊಂಬತ್ತು ರೂ. ಸಂಪಾದನೆಯಾಗಿದೆ. (ನಕ್ಕು) ಅಂ... ಯಾರಿಗುಂಟು-ಯಾರಿಗಿಲ್ಲ... (ಕಾರು ನಿಂತ ಶಬ್ದ) ಓಹೋ ಯಾವುದೋ ಕಾರು ನಮ್ಮ ಮನೆಯ ಮುಂದೇ ನಿಂತಿತಲ್ಲ... ಯಾರೋ ಹೆಂಗಸು ಬರುತ್ತಿದ್ದಾರೆ ..ಹೆಂಗಸೇನು ತರುಣಿ !

ಸುನೀತಿ : ತಾವೇನೋ ರಾಮರಾಯರು ?

ರಾಮು : ಹುಂ...ಹೌದು...ನಾನೇ ರಾಮರಾಯ.

ಸುನೀತಿ : (ಅವನನ್ನು ತಬ್ಬಿ) ಹಲ್ಲೋ ಡಾರ್ಲಿಂಗ್...ನಿಮ್ಮ ದರ್ಶನ ಇಂದಾದರೂ ಆಯಿತು...ಅದಕ್ಕಾಗಿ ಆ ಪರಮಾತ್ಮನಿಗೆ ಅನೇಕ ನಮಸ್ಕಾರಗಳು...ಇದೇ ಏನು ತಮ್ಮ ಮನೆ ? ಬಹಳ ಚೆನ್ನಾಗಿದೆ...ನಾನೂ ಕೂಡ ಬಂದು ಇಲ್ಲಿಯೇ ಉಳಿದು ಕೊಂಡರೆ,

ಮನೆ ತುಂಬಿದಂತಾಗುತ್ತದೆ...ಅಲ್ಲದೆ ಏಕಾಂಗಿಯಾಗಿ ಕಾಲ ಕಳೆಯುತ್ತಿರುವ ನಿಮ್ಮ ಜೀವನವೂ ಸುಖಮಯವಾಗುತ್ತದೆ.

ರಾಮು : (ಸ್ವಗತ) ಒಳ್ಳೆಯ ಫಜೀತಿಯಾಯ್ತಲ್ಲ...ಹೂಂ...ದೊಡ್ಡ ಮನೆಯಲ್ಲಿ ಒಬ್ಬರೇ ವಾಸಿಸುವವರಿಗೆ ಇದೊಂದು ಪಾಠ...ಒಂಟಿ ಜೀವನವನ್ನು ಸುಖಮಯವಾಗಿಸುವ ಪ್ರಯತ್ನ ಮಾಡುವ ಇಂತಹ ಹುಚ್ಚು ಹುಡುಗಿಯರೂ ಇದ್ದಾರೆ ಈ ಪ್ರಪಂಚದಲ್ಲಿ ...(ಪ್ರಕಾಶ) ತಮ್ಮ ಪರಿಚಯವಾಗಲಿಲ್ಲವಲ್ಲ ಮೇಡಂ...

ಸುನೀತಿ : ಎಂತಹ ಹಾಸ್ಯ ಮಾಡುತ್ತಿರುವಿರಿ ? ಪತ್ರಿಕೆಗಳಲ್ಲಿ ನಿಮ್ಮ ಲೇಖನಗಳನ್ನು ಓದಿಯೇ ಗೊತ್ತಾಗಿತ್ತು ನೀವು ಬಹು ದೊಡ್ಡ ಹಾಸ್ಯಗಾರರೆಂದು...ಅದು ಇಂದು ಇನ್ನೂ ಸ್ಪಷ್ಟವಾಯ್ತು... (ನಕ್ಕು) ಅಲ್ಲಾ...ನನ್ನ ಪರಿಚಯವೇ ಇಲ್ಲವೆನ್ನುತ್ತೀರಲ್ಲ...ನಾನೇ ತಮ್ಮ ಹೃದಯೇಶ್ವರಿ... ಭಾಗ್ಯರೂಪಿಣಿ... ಸುಮನೋಹರ ಸ್ವರೂಪಿಣಿ..,ಸುನೀತಾ.

ರಾಮು : (ಆಶ್ಚರ್ಯ) ಸುನೀತಾ...ಸುನೀತಾ...

ಸುನೀತಿ : ಎಷ್ಟು ಚೆನ್ನಾಗಿ ಪ್ರಣಯ ಪತ್ರಗಳನ್ನು ಬರೆಯುತ್ತೀರಿ ನೀವು! ನಿಮ್ಮ ಪತ್ರಗಳು ಬರಲು ಆರಂಭವಾದಾಗಿನಿಂದ ನನ್ನ ಜೀವನದಲ್ಲಿ ಬೆಳಕು ಮೂಡಿತು. ಪ್ರತಿದಿನ ನಿಮ್ಮ ಪತ್ರಗಳನ್ನು ತಲೆದಿಂಬಿನಡಿಯಲ್ಲೇ ಇಟ್ಟುಕೊಂಡು ನಿದ್ರೆ ಮಾಡುತ್ತೇನೆ... ಡಾರ್ಲಿಂಗ್...ನಾವು ಎಂದು ಮದುವೆಯಾಗೋಣ...ಹೇಳಿ... ಶುಭಸ್ಯ ಶೀಘ್ರಂ ಎನ್ನುವರಲ್ಲ... ಹಾಗೆಯೇ ಶೀಘ್ರದಲ್ಲೇ ವಿವಾಹವಾಗಿ, ಸುಖ ಸಂಸಾರ ಹೂಡೋಣ.

ರಾಮು : (ಸ್ವಗತ) ಪರಮಾತ್ಮಾ , ಹೇ, ದಯಾಮಯಾ...ಏನು ಪ್ರಸಂಗವನ್ನು ತಂದೊಡ್ಡಿದೆಯಪ್ಪ...(ಪ್ರಕಾಶ)ನಾನು ತಮಗೆ ಯಾವ ಪತ್ರಗಳನ್ನೂ ಬರೆಯಲಿಲ್ಲವಲ್ಲಮ್ಮ.

ಸುನೀತಿ : (ಜೋರಾಗಿ ನಕ್ಕು) ಏನು ಹಾಸ್ಯ ಮಾಡುತ್ತೀರಿ ನೀವು... ನೀವು ಪತ್ರಗಳ ಅಡಿಯಲ್ಲಿ ನಿಮ್ಮ ನಾಮಧೇಯವನ್ನು ಸೂಚಿಸ

ದಿದ್ದರೂ ನಿಮ್ಮ ಹಸ್ತಾಕ್ಷರಗಳಿವೆಯಲ್ಲ...ನಿಮ್ಮ ಆಫೀಸಿನ ಗುಮಾಸ್ತರಿಗೆ ತೋರಿಸಿ ಆ ಪತ್ರಗಳನ್ನು ನೀವೇ ಬರೆದದ್ದೆಂದು ಖಚಿತ ಮಾಡಿಕೊಂಡಿದ್ದೇನೆ...ಹುಡುಗಾಟವನ್ನು ಬಿಡಿ...ನಾವು ಎಂದು ಮದುವೆಯಾಗೋಣ....ಅದನ್ನು ತಿಳಿಸಿ ಮೊದಲು.

ರಾಮು : (ಸ್ವಗತ) ಭಗವಂತಾ...ಇದೊಂದು ಅಪಶಕುನವನ್ನು ಮದುವೆಯಾದರೆ, ಮನೆಯಲ್ಲಿ ಸೀತೆ ಇದ್ದಾಳೆ..ಜೈಲು ಕಾಣಬೇಕಾಗುತ್ತೆ ಮತ್ತೇನಿಲ್ಲ...ಸೀತೆ ಇಲ್ಲದಿದ್ದರೂ ಈ ಬಜಾರಿಯನ್ನು ಮದುವೆಯಾಗಲಾರೆ...ಪರಮಾತ್ಮಾ...ಇವಳು ಭಸ್ಮೀಭೂತವಾಗುವಂತೆ ಸಿಡಿಲಾದರೂ ಇವಳಿಗೆ ಬಡಿಯ ಬಾರದೇ...(ಪ್ರಕಾಶ..ಕಾತರದಿಂದ) ಅಮ್ಮಾ...ನಾನು ನಿಮ್ಮನ್ನು ಮದುವೆಯಾಗುವುದು ಈ ಜನ್ಮದಲ್ಲಿ ಸಾಧ್ಯವಿಲ್ಲ...

ಸುನೀತಿ : ಏನ್ರೀ ಬಹಳ ಧೂರ್ತರಂತೆ ಮಾತನಾಡುತ್ತಿರುವಿರಿ...ನನಗೆ ಈ ರೀತಿ ಮೂರು ಪ್ರೇಮ ಪತ್ರಗಳನ್ನು ಬರೆದು, ವಿವಾಹಕ್ಕೆ ಒಪ್ಪಿ, ಈಗ ಕೈ ಬಿಡುವಿರಾ ?...ಸಾಧ್ಯವಿಲ್ಲ...ಸ್ತ್ರೀ ಹೃದಯವೆಂದರೆ ಏನೆಂದುಕೊಂಡಿದ್ದೀರಿ?...ಬೇಕಾದಾಗ ಕೈಗೆತ್ತಿಕೊಂಡು.ಬೇಡವಾದಾಗ ದೂರ ಎಸೆಯುವ ಕರವಸ್ತ್ರ ಎಂದುಕೊಂಡಿರಾ? ಪ್ರೇಮ ಪತ್ರಗಳನ್ನು ಬರೆದು, ಆ ಮುಖಾಂತರ ವಿವಾಹ ಆಗುವೆನೆಂದು ವಚನ ಬದ್ಧರಾಗಿದ್ದೀರಿ...ಇನ್ನು ತಮ್ಮನ್ನು ಬಿಡಲಾರೆ.

ರಾಮು : (ಸ್ವಗತ) ಅಯ್ಯೋ...ರಾಮ...ರಾಮ (ಪ್ರಕಾಶ) ಇದು ಆಗದ ಮಾತು.

ಸುನೀತಿ : ಸಾಮೋಪಾಯದಿಂದ ನೀವು ಬಗ್ಗುವುದಿಲ್ಲವಾದರೆ ದಂಡೋಪಾಯ ಮಾಡಬೇಕಾಗುತ್ತದೆ...ಹೇಗೂ ನ್ಯಾಯಾಲಯವಿದೆ... ನಿಮ್ಮ ಮೇಲೆ ಮಾತು ಮುರಿದ ಆರೋಪ ಹೊರಿಸಿ ಕೇಸ್ ಮಾಡುತ್ತೇನೆ.

ರಾಮು : (ಸ್ವಗತ) ಅಯ್ಯೋ ಪರಮಾತ್ಮಾ... (ಪ್ರಕಾಶ) ಸಾಧ್ಯವಿಲ್ಲದುದನ್ನು ಮಾಡೆಂದರೆ ಹೇಗೆ ಮಾಡಲಿ ತಾಯಿ.

ಸುನೀತಿ : ಪತ್ರಗಳಲ್ಲಿನ ತಮ್ಮ ಪ್ರೇಮದ ಮಾತುಗಳನ್ನು ನಿಜವೆಂದು ನಂಬಿದ್ದೆ. ನನ್ನ ಹೃದಯವನ್ನೇ ನಿಮಗೆ ಧಾರೆ ಎರೆದಿದ್ದೆ...ಆದರೆ ಈಗ ನಿಮ್ಮ ಮಾತುಗಳನ್ನು ಕೇಳಿ ನನ್ನ ಹೃದಯ ಒಡೆದು ಚೂರು ಚೂರಾಗಿ ಹೋಯ್ತು...ತಾವು ನನ್ನನ್ನು ವಿವಾಹ ಆಗುವುದೇ ಇಲ್ಲವೆಂದು ತೀರ್ಮಾನಿಸಿದರೆ, ನಾನು ಈ ಭಗ್ನ ಹೃದಯದೊಂದಿಗೆ ಬಾವಿಯಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತೇನೆ... ಅಥವಾ ಮಾತು ಮುರಿದ ಅಪರಾಧಕ್ಕಾಗಿ ಐದು ಸಾವಿರ ರೂ.ಗಳನ್ನು ಕೊಡಿರಿ.... ನಾನು ಈ ನನ್ನ ಹಾಳಾದ ಹೃದಯವನ್ನು ಹೊತ್ತು, ಕಾಣದ ಊರಿಗೆ ಹೋಗಿ ನಿಮ್ಮನ್ನು ಮರೆಯುವ ಪ್ರಯತ್ನ ಮಾಡುತ್ತೇನೆ.

ರಾಮು : (ಗಾಬರಿ) ಐದು ಸಾವಿರ ರೂಪಾಯಿಗಳು ?

ಸೀತೆ : (ಪ್ರವೇಶ) ಐದು ಸಾವಿರ ರೂಪಾಯಿಗಳೇಕೆ ?

ರಾಮು : (ಸ್ವಗತ) ಅಯ್ಯೋ ದೇವರೇ...ನನ್ನ ಗುಟ್ಟು ರಟ್ಟಾಯಿತು... ಸತ್ಯ ಹೇಳಿದರೂ ಸೀತೆ ನಂಬಲಾರಳು...ಅವಳ ಬಾಯಿಗೆ ಸಿಕ್ಕಿ ನನಗಿನ್ನು ಉಳಿಗಾಲವಿಲ್ಲ...ಪರಮಾತ್ಮಾ...ಒಮ್ಮೆ ನನ್ನ ಮೇಲೆ ಸಿಡಿಲನ್ನು ಎರಗಿಸು...ಫಾಲಾಕ್ಷ ಶಿವನೇ...ನಿನ್ನ ಹಣೆಗಣ್ಣಿ ದೃಷ್ಟಿಯನ್ನಾದರೂ ನನ್ನ ಮೇಲೆ ಬೀರಿ ಸುಟ್ಟುಬಿಡು... ಭೂತಾಯಿ...ನಿನ್ನ ಬಾಯ್ತೆರೆದು ನನ್ನನ್ನು ನಿನ್ನ ಗರ್ಭದಲ್ಲಾದರೂ ಸೇರಿಸಿಕೋ...

ಸುನೀತಿ : ತಾವು ಯಾರು ?

ಸೀತಾ : ನಾನು ಇವರ ತಂಗಿ–ಸೀತಾ ಅಂತ ನನ್ನ ಹೆಸರು...ನೀವಾರು ತಾಯಿ ?

ರಾಮು : (ಸ್ವಗತ) ಸೀತಾ...ನನ್ನ ತಂಗಿ...ಏನಿದು...ಏನು ಇವಳಿಗೆ ಹುಚ್ಚು ಹಿಡಿದಿದೆಯೇ.,.ಅಥವಾ ನನಗೇ ಮತಿಭ್ರಾಂತಿಯೇ....

ಸುನೀತಿ : ಇವರು ನನ್ನನ್ನು ಮದುವೆಯಾಗಬೇಕೆಂದು ಪ್ರಣಯ ಪತ್ರ ಳನ್ನು ಬರೆದಿದ್ದರು...ಈಗ ನೋಡಿದರೆ ಮದುವೆಯಾಗಲ್ಲ ಎನ್ನುತ್ತಾರೆ.

ಸೀತೆ : ಓಹೋ...ಹಾಗಾ...ನೀವು ನನ್ನ ಅತ್ತಿಗೆಯಾಗಲು ಬಂದಿರು ವಿರಾ ? ಅಣ್ಣ ಬೇಡವೆಂದನೇ...ಅಣ್ಣಾ...ಅಣ್ಣಾ...ಈ ವಿವಾ ಹಕ್ಕೆ ನಿನ್ನ ಒಪ್ಪಿಗೆಯನ್ನು ಬೇಗ ಕೊಡು...ಇಂತಹ ಸು ಸುಂದರಿ...ನಮ್ಮ ಮನೆಯನ್ನು ಬೆಳಗಲಿರುವ ಭಾಗ್ಯಲಕ್ಷ್ಮಿ ಬೇರೆಲ್ಲಿ ಸಿಕ್ಕಿಯಾಳು ಅಣ್ಣಾ ಬೇಗನೆ ನಿನ್ನ ಸಮ್ಮತಿಯನ್ನು ಕೊಡು...

ಸುನೀತಿ: (ಆಶ್ಚರ್ಯ) ಅಂದರೆ ಇವರಿಗೆ ಇನ್ನೂ ಮದುವೆಯಾಗಿಲ್ಲವೇ !

ಸೀತಾ : (ನಕ್ಕು) ಅವನಿಗೆ ಮದುವೆಯಾಗಿದ್ದರೆ, ಅವನು ನಿಮಗೆ ಈ ಪ್ರಣಯ ಪತ್ರಗಳನ್ನು ಬರೆಯುತ್ತಿದ್ದನೇ...ಅತ್ತಿಗೆ ! ಅವನು ನಿಮ್ಮನ್ನು ಎಲ್ಲೋ ನೋಡಿದಾಗಿನಿಂದ ತಮ್ಮ ಧ್ಯಾನದಲ್ಲಿ ಅನ್ನಾಹಾರಗಳನ್ನು ತೊರೆದು ಬಿಟ್ಟಿದ್ದಾನೆ...ಹಗಲೂ ರಾತ್ರಿ ತಮ್ಮದೇ ಧ್ಯಾನ...ಯಾವಾಗಲೂ ತಮಗೆ ಪತ್ರ ಬರೆಯುವುದೇ ಕೆಲಸ...ಆದಷ್ಟು ಬೇಗನೆ ಈ ವಿವಾಹ ಮಹೋತ್ಸವವನ್ನು ನೆರವೇರಿಸಿ ಬಿಡೋಣ...ಅಣ್ಣನಮದುವೆಯನ್ನು ನೋಡ ಬೇಕೆಂದು ನಾನೂ ಕಾತರಳಾಗಿದ್ದೇನೆ...ಅಂ...ಪಕ್ಕದ ಮ ಯಲ್ಲೇ ಜೋಯಿಸರಿದ್ದಾರೆ...ದಿನ ನೋಡಿಸಿ...ಮುಹೂರ್ತ ನಿಶ್ಚಯಿಸೋಣವೇ ?

ಸುನೀತಿ : (ಬಾಗಿಲ ಬಳಿ ಹೋಗುತ್ತಾ) ಜೋಯಿಸರು...ವಿವಾಹ...ಥ ಹಾಳಾಗಿ ಹೋಗಿ...ಇಂಡಿಯನ್ ಬ್ಯಾಂಕಿನ ಹಣವೆಲ್ಲವನ್ನು ತಂದು ನನ್ನ ಕಾಲ ಮೇಲೆ ಸುರಿದರೂ ನಾನು ಈ ಕೋತಿಯನ್ನು ಮದುವೆಯಾಗುವೆನೇ...ಯಾರೋ ನನ್ನನ್ನು ಮೋಸಗೊಳಿ ದರು ನಾನು ಇವರಿಗೆ ವಿವಾಹ ಆಗಿದೆಯೆಂದೇ ತಿಳಿದಿದ್ದೆ... ಮೋಸವಾಯ್ತು...ಎಲ್ಲಾದರೂ ಹಾಳಾಗಿ ಹೋಗಿ...ಈಗ

...ತೆಗೆದು ಕೊಳ್ಳಿ...ನಿಮ್ಮ ಸುಡುಗಾಡು ಪ್ರೇಮ ಪತ್ರಗಳನ್ನು ...(ಕಾಗದಗಳನ್ನು ಎಸೆದುಹೋಗುತ್ತಾಳೆ)

ರಾಮ : (ನಿಟ್ಟುಸಿರು) ಪರಮಾತ್ಮಾ...ಕಾಪಾಡಿದೆಯಾ...(ತಲೆ ಮೇಲೆ ಕೈಹೊತ್ತು ಕೂರುವನು)

ಸೀತಾ : (ನಕ್ಕು) ಅಲ್ಲಾ...ಅಷ್ಟು ಬುದ್ಧಿ ಇಲ್ಲದವರು ನೀವು...ಆ ತಾಯಿ ಮಗಳಿಬ್ಬರೂ ಸೇರಿ, ನಿಮಗೆ ಬಲೆ ಬೀಸಿ, ನಿಮ್ಮಿಂದ ಆದಷ್ಟು ದುಡ್ಡು ಹೊಡೆಯೋಣವೆಂದು ಹೂಡಿದ ಯೋಜನೆ ಇದು ಎಂದು ತಿಳಿಯಲಿಲ್ಲವೇ ತಮಗೆ...ನೀವು ಅವಳನ್ನು ವಿವಾಹವಾಗುವುದು ಯಾವ ರೀತಿ ಅಸಂಭವವಿತ್ತೋ ಅದೇ ರೀತಿ ಅವಳು ನಿಮ್ಮನ್ನು ವಿವಾಹವಾಗುವುದೂ ಅಸಾಧ್ಯವೇ ಆಗಿತ್ತು.

ರಾಮ : ಏಕೆ ?

ಸೀತಾ : ಅವಳಿಗೂ ಈ ಮೊದಲೇ ವಿವಾಹವಾಗಿದೆ.

ರಾಮ : ಎಲ ! ಎಲಾ ! ...ಇದು ನಿನಗೆ ಹೇಗೆ ಗೊತ್ತಾಯ್ತು ?

ಸೀತೆ : ಅವಳ ಕೊರಳಲ್ಲಿ ಮಂಗಳ ಸೂತ್ರ ಇರುವುದನ್ನು ಕಾಣಲಿಲ್ಲವೇ ನೀವು ? ಮದುವೆಗೆ ಮೊದಲೇ ಯಾರಾದರೂ ಮಾಂಗಲ್ಯ ಕಟ್ಟಿ ಕೊಳ್ಳುತ್ತಾರೆಯೇ...ಆದ್ದರಿಂದಲೇ ತಮಗೆ ಮದುವೆಯಾಗಿಲ್ಲ: ತಾವು ಮದುವೆಗೆ ಸಿದ್ಧರಿದ್ದೀರೆಂದು ಅವಳಿಗೆ ತೋರಿಸಿ ಕೊಟ್ಟೆ ...ಇಲ್ಲಿ ಇನ್ನು ತನ್ನ ಬೇಳೆ ಬೇಯುವುದಿಲ್ಲವೆಂದು, ಅವಳು ಕಾಲಿಗೆ ಬುದ್ಧಿ ಹೇಳಿದಳು.

ರಾಮ : (ಸ್ವಗತ) ಏನು ತಲೆ ನನ್ನ ಸೀತೆಯದು ! ಅವಳಿಲ್ಲದಿದ್ದರೆ ಇಂದು ಆತ್ಮಹತ್ಯೆ ಮಾಡಿಕೊಂಡವರ ಪಟ್ಟಿಯಲ್ಲಿ ನನ್ನ ಹೆಸರೂ ದಾಖಲಾಗುತ್ತಿತ್ತು...(ಸೀತೆಯನ್ನು ಹತ್ತಿರಕ್ಕೆ ಎಳೆದುಕೊಂಡು)... (ಪ್ರಕಾಶ) ಸೀತಾ...ನನ್ನ ಸೀತಾ...ನಿಜವಾಗಿಯೂ ನೀನೊಂದು ರತ್ನ...ನನ್ನ ಸೀತಾ...ರತ್ನ...!



ಗೌರಮ್ಮನ ಗೌರವ

ಪಾತ್ರವರ್ಗ

ಪುರುಷರು	ಸ್ತ್ರೀಯರು
ಶಂಕರಪ್ಪ	ಗೌರಮ್ಮ
ಶೇಖರ್	ಶಾರದಮ್ಮ
ಬೋರ	ಉಷಾ

ದೃಶ್ಯ ೧

ಗೌರಮ್ಮ : ಅಲ್ಲಾಂದ್ರೆ, ಈಗ ನಮಗೆ ಏನು ಕಡಿಮೆ ಆಗಿದೆ ಅಂತ ನೀವು ಅಷ್ಟು ದೂರದ ಊರಿಗೆ ಕೆಲಸಕ್ಕೆ ಹೋಗಬೇಕೂಂತೀರಿ–ಇಷ್ಟು ವರ್ಷ ಒಂದೇ ಸಮನೆ ದುಡಿದೂ ದುಡಿದೂ ದಣಿದಿದ್ದಾಯ್ತು, ಇನ್ಮೇಲಾದರೂ ನಿಮಗೆ ವಿಶ್ರಾಂತಿ ಬೇಡವೇ – ಹಾಯಂತ ಇರಬಾರ್ದಾ.

ಶಂಕರಪ್ಪ : ನೋಡು ಗೌರಿ, ನಮಗಿರೋಕೆ ಒಂದು ಪುಟ್ಟ ಮನೆ, ಬರುವ ಪೆನ್ಷನ್ ಹಣ ನಮ್ಮ ಜೀವನಕ್ಕೆ ಸಾಕು ನಿಜ. ನಾನೇನು ಈಗ ಖರ್ಚಿಗೆ ಹಣ ಸಾಲೋಲ್ಲ ಎಂದು ಕೆಲಸಕ್ಕೆ ಹೋಗ್ತಾ ಇಲ್ಲ. ದೇವರು ನನಗಿನ್ನೂ ಒಳ್ಳೆಯ ಆರೋಗ್ಯ ಕೊಟ್ಟಿದ್ದಾನೆ. ಕೈಲಾಗೋ ತನಕ ಕೆಲಸ ಮಾಡಬೇಕೆಂದು ನನ್ನ ಇಷ್ಟ. ಇಷ್ಟು ದಿನಗಳು ಯಾವಾಗಲೂ Engage ಆಗಿದ್ದು, ಈಗ ಸುಮ್ಮನೆ ಮನೆಯಲ್ಲಿರುವುದಕ್ಕೇ ಬೇಜಾರು. ಇದುವರೆಗೂ ಬೇರೆ ಊರು ಗಳನ್ನು ನೋಡೋಕೆ ಅನುಕೂಲವಾಗಲಿಲ್ಲ. ನಡಿ, ಈಗ ಒಂದು ಅವಕಾಶ ಸಿಕ್ಕಿತೂಂತ ಹೊರಡು. ಕೈಲಾಗೋ ಅಷ್ಟು ದಿನ ಕೆಲಸ ಮಾಡ್ತೀನಿ, ಆಮೇಲೆ ಇದ್ದೇ ಇದೆಯಲ್ಲ, ಕೂತುಣ್ಣುವುದು.

ಗೌರಮ್ಮ : ಅಯ್ಯೋ... ನಾನೆಲ್ಲಿ ಬರಲಿ... ಹುಡುಗರನ್ನು ಬಿಟ್ಟು,

ಶಂಕರಪ್ಪ : ಮತ್ತೆ !.... ನೀನಿಲ್ಲೇ ಇರ್ತೀಯಾ ?

ಗೌರಮ್ಮ : ಇನ್ನೇನು ಮಾಡೋದು.... ನಾನೂ ಬಂದರೆ ಇಲ್ಲಿ ಹುಡುಗರನ್ನು ನೋಡಿಕೊಳ್ಳುವವರು ಯಾರಿದ್ದಾರೆ –ಒಳ್ಳೆ ಚೆನ್ನಾಗಿ ಹೇಳಿದಿರಿ.

ಶಂಕರಪ್ಪ : ಲೇ.... ಲೇ.... ಏನೇ ಇದು ಗ್ರಹಚಾರ.... ಅಂ.... ನಮಗಿರು ವವರು ಮೂರು ಮಕ್ಕಳು.... ಅವರನ್ನೆಲ್ಲಾ ಸಾಕಿ, ದೊಡ್ಡವ ರನ್ನು ಮಾಡಿ, ಓದಿಸಿ, ಮದುವೆ ಮಾಡಿ, ಜವಾಬ್ದಾರಿ ಮುಗಿಸಿ ಕೊಂಡಿದ್ದಾಯ್ತು.... ಈಗ.... ಅವರ ಮಕ್ಕಳನ್ನು ಇಲ್ಲಿಟ್ಟು

ಕೊಂಡು ಇನ್ನೂ ದೊಡ್ಡ ಜವಾಬ್ದಾರಿ ಹೊತ್ತುಕೊಂಡಿದ್ದೀಯಲ್ಲ ಏನು ಹೇಳಲಿ.... ನಿನ್ನ ಬುದ್ಧಿಗೆ.

ಗೌರಮ್ಮ : ಅಯ್ಯೋ ಬಿಡಿ.... ಇದೇನು ಮಹಾ ಜವಾಬ್ದಾರಿ, ಆ ಮಕ್ಕಳ ಗೋಸ್ಕರ ನಾವು ಏನು ಕಷ್ಟಪಡಬೇಕಾಗಿದೆ.... ಅವರವರ ಖರ್ಚನ್ನು ಅವರ ತಂದೆ, ತಾಯಿಗಳೇ ನೋಡಿಕೊಳ್ಳುತ್ತಿದ್ದಾರಲ್ಲ.

ಶಂಕರಪ್ಪ : (ವ್ಯಂಗ್ಯವಾಗಿ) ಆಹಾ.... ನಿನ್ನ ಯೋಚನಾಶಕ್ತಿಗೆ ಏನು ಹೇಳಲಿ ಅಲ್ವೇ ದುಡ್ಡು ಒಂದು ಅವರ ತಂದೆ, ತಾಯಿ ಕಳಿಸಿಬಿಟ್ಟರೆ ಆಗಿ ಹೋಯ್ತೇನೇ – ಅವರನ್ನು ಬೆಳೆಸುವುದಕ್ಕೆ ಎಂತಹ ಜವಾಬ್ದಾರಿ ನಮ್ಮ ಮೇಲಿದೆ ಅನ್ನುವುದೇನಾದರೂ ನಿನಗೆ ಯೋಚನೆ ಇದೆಯಾ?.... ನನಗೇ ಹೇಳ್ತೀಯಲ್ಲ "ಇಷ್ಟು ದಿನ ದುಡಿದಿದ್ದು ಸಾಕು, ವಿಶ್ರಾಂತಿ ತೆಗೆದುಕೊಳ್ಳಿ" ಅಂತ....ನನ್ನಂತೆಯೇ ನಿನಗೂ ವಯಸ್ಸಾಗಿಲ್ವಾ— ಬರ್‍ತಾ ಬರ್‍ತಾ ಏನು ಪ್ರಾಯ ಬರುತ್ತಾ– ನಿನಗೆ ವಿಶ್ರಾಂತಿ ಬೇಡವಾ – ಈ ವಯಸ್ಸಿನಲ್ಲಿ ಯಾಕೆ ಈ ಬಾಲ್ಯ ಸಂಸಾರ— ಸ್ವಲ್ಪ ಯೋಚನೆ ಮಾಡಿ ನೋಡು.

ಗೌರಮ್ಮ : ಏನು ಮಾಡೋದು ಹೇಳಿ— ನಮ್ಮ ಮಕ್ಕಳೋ ದೂರದ ಊರುಗಳಲ್ಲಿದ್ದಾರೆ. ಆ ಊರುಗಳಲ್ಲೋ ನಮ್ಮ ಭಾಷೆಯೇ ಇಲ್ಲ— ಸ್ಕೂಲು, ಕಾಲೇಜುಗಳಿಗೆ ಕಳಿಸಲು ಎಷ್ಟೋ ರೀತಿಯ ತೊಂದರೆಗಳು.... ಇನ್ನೇನು 2–3 ವರ್ಷಗಳಲ್ಲಿ ಶೇಖರ, ಉಷಾ ಇಬ್ಬರ ವಿದ್ಯಾಭ್ಯಾಸವೂ ಒಂದು ಘಟ್ಟಕ್ಕೆ ಬರುತ್ತೆ.

ಶಂಕರಪ್ಪ : ಅವರಿಬ್ಬರದೂ ಮುಗಿದರೇನಂತೆ — ಜಯಂತನನ್ನೇನು ಮಾಡ್ತೀಯ? ಆಮೇಲೆ ನಿನ್ನ ಚಿಕ್ಕಮಗಳು "ಅಣ್ಣನ ಮಗಳು, ಅಕ್ಕನ ಮಗ ಇಬ್ಬರನ್ನೂ ನೋಡಿಕೊಂಡರು— ನನ್ನ ಮಗನನ್ನು ಮಾತ್ರ ನೋಡಿಕೊಳ್ಳಲಿಲ್ಲ" ಅಂತ ಆಕ್ಷೇಪಣೆ ಮಾಡೊಲ್ಲವಾ.... ನೋಡು— ಈ ಸಂಸಾರ ತಾಪತ್ರಯಗಳಿಗೆ ಕೊನೆ ಮೊದಲೆಲ್ಲಿ? ಹಚ್ಚಿಕೊಂಡಷ್ಟೂ ಇದ್ದೇ ಇರುತ್ತೆ ಈ ವ್ಯಾಮೋಹ.

ಗೌರಮ್ಮ : ಅದಕ್ಕೇನು ಮಾಡೋಣಾಂತೀರಿ ಹೇಳಿ— ಈ ಮಕ್ಕಳ ವಿದ್ಯಾಭ್ಯಾಸ ಹಾಳಾದರೂ ಚಿಂತೆ ಇಲ್ಲ— ಅವರನ್ನೆಲ್ಲಾ ಅವರವರ ಊರುಗಳಿಗೆ ಕಳಿಸಿ ನಾನು ನಿಮ್ಮ ಜೊತೆ ಬಂದುಬಿಡಲೇನು ?

ಶಂಕರಪ್ಪ : ಅವರೂರಿಗೆ ಯಾಕೆ ಕಳಿಸಬೇಕು— ಇವತ್ತೇ ನಾಗೇಶ, ಉಮಾ, ಲಲಿತಾ ಮೂರು ಜನಕ್ಕೂ ಕಾಗದ ಬರೀತೀನಿ. ಅವರು ಬಂದು ಅವರ ಮಕ್ಕಳ ಮುಂದಿನ ವ್ಯವಸ್ಥೆ ಹೇಗೆ ಬೇಕಾದರೂ ಮಾಡಿಕೊಳ್ಳಲಿ— ತಮ್ಮ ಜೊತೆ ಕರೆದುಕೊಂಡಾದರೂ ಹೋಗಲಿ. ಅಥವಾ ಹಾಸ್ಟೆಲ್‌ನಲ್ಲಿ ಬೇಕಾದರೂ ಇರಿಸಲಿ.

ಗೌರಮ್ಮ : ಸರಿ, ಸರಿ.... ನಿಮ್ಮ ಮಾತು ಕೇಳಿದರೆ ಒಳ್ಳೆ ಗೌರವ ಬರುತ್ತೆ— ಹಾಗೆ ಮಾಡಿದರೆ ನಮ್ಮ ಮಕ್ಕಳು ಏನು ತಿಳಿದುಕೊಳ್ತಾರೆ— ನೋಡಿದವರು ಏನೆಂದಾರು— ಅಲ್ಲದೆ ಪುಟ್ಟದಾದರೂ ಇದು ನಮ್ಮ ಸ್ವಂತ ಮನೆ. ಇದನ್ನು ಬಿಟ್ಟು ನಾನಂತೂ ಎಲ್ಲಿಗೂ ಬರೋಲ್ಲ.

ಶಂಕರಪ್ಪ : ಸರಿ— ನಿನ್ನ ಹಣೆಯ ಬರಹ— ಇನ್ನೊಮ್ಮೆ ಪ್ರಾಯ ಬರ್ತಾ ಇದೆ ನಿಂಗೆ— ಹುಡುಗರನ್ನು ನೋಡಿಕೊಂಡು ಇರು ಇಲ್ಲೇ— ಮದ್ರಾಸ್ ಏನೂ ತುಂಬಾ ದೂರ ಅಲ್ಲವಲ್ಲ ಇಲ್ಲಿಗೆ— ಅಲ್ಲಿ ನನ್ನ ಬಾಲ್ಯ ಸ್ನೇಹಿತ ಮಂಜುನಾಥ ಇದ್ದಾನೆ. ಅವನ ಮನೆಯಲ್ಲೇ ಇದ್ದುಕೊಂಡು ಕೆಲಸಕ್ಕೆ ಹೋಗ್ತೀನಿ.

ಗೌರಮ್ಮ : ಎಲ್ಲಾ ತೀರ್ಮಾನ ಮಾಡಿಬಿಟ್ಟಿದ್ದೀರಿ ಹಾಗಾದರೆ ?

ಶಂಕರಪ್ಪ : ಇನ್ನೇನು ಮಾಡಲಿ— ನೀನು ಹೀಗೆ ಬರೋಲ್ಲ ಅಂತ ಹೇಳಿದರೆ, ಆಗಲಿ ಇದೂ ಒಂದು ರೀತಿಯ ಬದಲಾವಣೆ— ನೋಡೋಣ. ಹೇಗಿರುತ್ತೊ—

ದೃಶ್ಯ ೨

ಗೌರಮ್ಮ : ಶೇಖರಾ— ಶೇಖರಾ—

ಶೇಖರ : ಓ— ಬಂದೆ ಅಜ್ಜೀ— ಏನು ?

ಗೌರಮ್ಮ : ಕಾಲೇಜಿಗೆ ಹೋಗುವಾಗ ಹಾಗೇ ಲೈಟ್ ಆಫೀಸಿಗೆ ಹೋಗಿ ಲೈಟ್‌ಬಿಲ್ ಕಟ್ಟಿಬಿಡ್ತೀಯೇನೋ— ಒಂದು ಹತ್ತು ನಿಮಿಷ ಮುಂಚೆ ಹೊರಟರಾಯ್ತು.

ಶೇಖರ : ಅಯ್ಯೋ...., ಹೋಗಜ್ಜಿ— ನಂಗಾಗೋಲ್ಲ.

ಗೌರಮ್ಮ : ಹೀಗಂದರೆ ಹೇಗೋ ಮಗೂ— ಮನೇಲಿ ಇನ್ಯಾರಿದ್ದಾರಪ್ಪ ಗಂಡಸರು— ಈ ಹೊರಗಿನ ಕೆಲಸಗಳನ್ನೆಲ್ಲಾ ಮಾಡೋಕೆ.

ಶೇಖರ : ಗಂಡಸರೇ ಈ ಕೆಲಸಗಳನ್ನು ಮಾಡ್ಬೇಕೊಂತ ಏನಾದರೂ ಕಾನೂನಿದೆಯಾ— ಉಷಾನ್ನ ಕಳಿಸು— ಅವಳೇ ಕಟ್ಟಿ ಬರಲಿ—

ಗೌರಮ್ಮ : ಶಿವ, ಶಿವಾ— ಹೆಣ್ಣು ಹುಡುಗೀನ ಈ ಕೆಲಸಕ್ಕೆ ಕಳಿಸೋ ದೇನೋ—

ಶೇಖರ : ನೀನಿನ್ನೂ ಓಬಿರಾಯನ ಕಾಲದಲ್ಲೇ ಇದ್ದೀಯ ಅಜ್ಜಿ— ಉಷಾ ಹೋಗಿ ಕಟ್ಟಿಬಂದರೆ ಅದರಲ್ಲೇನು ತಪ್ಪು.

ಗೌರಮ್ಮ : ನಿನಗದರಲ್ಲಿ ಏನೂ ತಪ್ಪು ಕಾಣಿಸದಿದ್ದರೆ ಹೋಗಲಿ— ನನಗಂತೂ ಹಿಡಿಸುವುದಿಲ್ಲ. ನೀನೇ ಹೋಗಿ ಕಟ್ಟಿ ಬಾರೋ ಅಂದರೆ ತಲೆ ಎಲ್ಲಾ ಹರಟಬೇಡ, ಹೇಳಿದ ಮಾತು ಕೇಳು.

ಶೇಖರ : ಆಗೋಲ್ಲ ಅಜ್ಜಿ— ಅಲ್ಲಿ ಒಂದು ಫರ್ಲಾಂಗ್ ಉದ್ದ ಕ್ಯೂ ಇರುತ್ತೆ – ನನಗೆ ಕಾಲೇಜಿಗೆ ಹೊತ್ತಾಗಿಬಿಡುತ್ತೆ— ಸೈಕಲ್ ಬೇರೆ ಪಂಕ್ಚೇರ್ ಆಗಿದೆ— ಪಂಕ್ಚೇರ್ ಹಾಕಿಸಿಕೊಂಡು ಹೋಗ ಬೇಕು— ನಾನು ಹೊರಟೆ.

ಗೌರಮ್ಮ : ಒಬ್ಬರಾದರೂ ಹೇಳಿದ ಮಾತೇ ಕೇಳದಿದ್ದರೆ ನಾನು ಏನ್ ಮಾಡಲಿ— ಉಷಾ— ನಾನಾದರೂ ಹೋಗಿ ಲೈಟ್‌ಬಿಲ್ ಕಟ್ಟಿ

ಬರ್ತೀನಿ— ಇವತ್ತೇ ಕೊನೇ ದಿನ— ಆಮೇಲೆ ದಂಡ ಕೊಡ ಬೇಕಾಗುತ್ತೆ— ಹೇಗೂ ನಿನಗೆ ಇವತ್ತು ಕಾಲೇಜಿಗೆ ರಜಾ ಇದೆ ಅಂದೆಯಲ್ಲ— ಮನೆ ಕಡೆ ಹುಶಾರಾಗಿರಮ್ಮ— ಈಗ ಬಂದು ಬಿಡ್ತೀನಿ— ಅಗೋ— ಇದೇನು— ಆಗಲೇ ಎಲ್ಲಿಗೋ ಹೊರ ಟಿರೋ ಹಾಗಿದೆ— ಅಲಂಕಾರ ಮಾಡಿಕೊಂಡು....

ಉಷಾ : ಹೌದಜ್ಜಿ— ನನ್ನ ಸ್ನೇಹಿತೆ ವನಜಾ ಮನೇಗೆ "ಬರ್ತೀನಿ" ಅಂತ ಹೇಳಿದ್ದೆ— ಹೋಗಿ ಬರ್ತೀನಿ.

ಗೌರಮ್ಮ : ಕಾಲೇಜಿಗೆ ರಜಾ ಇದ್ದರೆ ಮನೇಲಿದ್ದು ಓದಿಕೊಳ್ಳಬಾರದೇನಮ್ಮ ಪರೀಕ್ಷೆ ಹತ್ತಿರ ಬಂತು. ಆದ್ರೂ ನೀನು ದಿನಾ ತಿರುಗ್ತಾನೇ ಇದ್ದೀಯಲ್ಲಮ್ಮ.... ಹೀಗಾದರೆ ನೀನು ಪಾಸು ಮಾಡಿದ ಹಾಗೇ ಇದೆ.

ಉಷಾ : ನಾನೇನು ಕೆಲಸವಿಲ್ಲದೆ ಸುಮ್ಮ ಸುಮ್ಮನೆ ತಿರುಗ್ತಾ ಇದ್ತೀನೇನಜ್ಜಿ ಒಳ್ಳೆ ಚೆನ್ನಾಗಿ ಹೇಳ್ತೀಯ— ವನಜಾ ಮನೇಲಿ ಕಂಬೈಂಡ್ ಸ್ಟಡಿ ಮಾಡೋಕೆ ಬರ್ತೀನೀಂತ ಹೇಳಿದ್ದೆ. ಅದಕ್ಕೇ ಅವಳ ಮನೆಗೆ ಹೋಗ್ತಾ ಇರೋದು.

ಗೌರಮ್ಮ : ಏನಾದ್ರೂ ಮಾಡಿಕೊಳ್ಳಮ್ಮ— ನನಗೇನು ಗೊತ್ತಾಗುತ್ತೆ— ಅಂತೂ ಪರೀಕ್ಷೇಲಿ ಪಾಸಾದರೆ ಸರಿ ಅಷ್ಟೆ.

ಉಷಾ : ಅಜ್ಜೀ—

ಗೌರಮ್ಮ : ಏನಮ್ಮ

ಉಷಾ : ಮತ್ತೆ— ಒಂದು ಹತ್ತು ರೂ. ಬೇಕಾಗಿತ್ತು.

ಗೌರಮ್ಮ : ಇದೇನೇ— ಮೊನ್ನೆ ತಾನೇ 5 ರೂ. ಇಸುಕೊಂಡೆ. ಈಗಾಗಲೇ ಪುನಃ ದುಡ್ಡು ಕೇಳ್ತೀಯ, ಆ 5 ರೂ. ಏನು ಮಾಡಿದೆ ಆಗಲೇ

ಉಷಾ : ಪುಸ್ತಕ ಬೇಕಾಗಿತ್ತು, ತಗೊಂಡೆ.

ಗೌರಮ್ಮ : ಏನು— ಪರೀಕ್ಷೆ ತೀರ ಹತ್ತಿರ ಬಂತು— ಈಗೆಂತಹ ಪುಸ್ತಕ ತಗೊಂಡ್ಯೆ—

ಉಷಾ : ನೋಟ್ಸು ಬೇಕಾಗಿತ್ತು— ತಗೊಂಡೆ— ನಿನ್ನದೆಲ್ಲಾ ಬರೀ ಪುರಾಣ ಅಜ್ಜಿ— ಈಗೇನು ದುಡ್ಡು ಕೊಡ್ತೀಯೋ ಇಲ್ವೋ ಹೇಳು— ದುಡ್ಡು ಬೇಕೂಂದ ಕೂಡಲೆ ತನಿಖೇಗೇ ಪ್ರಾರಂಭಿಸಿ ಬಿಡ್ತೀಯ.

ಗೌರಮ್ಮ : ತಗೋ ಮಹಾರಾಯ್ತಿ— ಮಾತಾಡಿಸಿದರೆ ಮೈಮೇಲೇ ಬರ್ತೀಯ— ನಿಮ್ಮಪ್ಪ ಕಳಿಸಿರೋ ದುಡ್ಡಿರೋವರೆಗೂ ಖರ್ಚು ಮಾಡು.... ಉಷಾ ಒಂದು ಮಾತು.

ಉಷಾ : ಏನಜ್ಜಿ

ಗೌರಮ್ಮ : ಏನಿಲ್ಲ— ಕತ್ತಲಾಗುವಷ್ಟರಲ್ಲಿ ಮನೆಗೆ ಬಂದುಬಿಡು— ದಿನದಂತೆ ಹೊತ್ತು ಮಾಡಿ ಬರಬೇಡ.... ಹೆಣ್ಣು ಹುಡುಗಿ ಕತ್ತಲಾದ ಮೇಲೂ ಮನೆಯಿಂದ ಹೊರಗಿದ್ದರೆ ನೋಡಿದ ಜನ ಏನಂತಾರೆ ಹೇಳು.

ಉಷಾ : ಜನ ಏನೆಂದರೆ ನಮಗೇನು ? ನಾವೇನು ನಮಗೋಸ್ಕರ ಬಾಳು ತ್ತಿದ್ದೇವೋ ಅಥವಾ ಜನಕ್ಕೋಸ್ಕರವೋ –

ಗೌರಮ್ಮ : ಎಲ್ಲರೂ ಜನರಿಗೆ ಅಂಜಲೇಬೇಕು ಅಲ್ವೇನಮ್ಮ.

ಉಷಾ : ಸ— ರಿ— ನಿನ್ನ ಹತ್ತಿರ ವಾದಿಸೋಕೆ ನನಗೆ ಪುರುಸೊತ್ತಿಲ್ಲ.... ಬರ್ತೀನಿ.

ದೃಶ್ಯ ೩

ಶಾರದಮ್ಮ : ಬಿಡುವಾಯ್ತೆ ಗೌರಮ್ಮ— ಆರಾಮವಾಗಿ ನಿಂತಿರಲ್ಲ.

ಗೌರಮ್ಮ : ಬಿಡುವೆಲ್ಲಿ ಬಂತಮ್ಮ—ಜಯಂತ ಸ್ಕೂಲಿಗೆ ಹೋದ— ರಸ್ತೆ ದಾಟುವ ತನಕ ಇಲ್ಲೇ ನಿಂತೆ— ಹಾಳು ಈ ಬಸ್ಸು, ಕಾರುಗಳ ಹಾವಳಿ ನೋಡಿ.

ಶಾರದಮ್ಮ : ಊಟ ಆಯ್ತೆ ?

ಗೌರಮ್ಮ : ಇನ್ನೂ ಇಲ್ಲ ಶಾರದಮ್ಮ, ಬೆಳಗಿನ ಹೊತ್ತು ಹುಡುಗರಿಗೆ ಅವಸರ— ಸ್ಕೂಲು ಕಾಲೇಜು ಅಂತ . . . ನನಗೇನು ಅವಸರ. ಅವರನ್ನೆಲ್ಲಾ ಕಳಿಸಿದ್ದಾಯ್ತು . . . ಇನ್ನು ನಾನು ನಿಧಾನವಾಗಿ ಊಟ ಮಾಡಿದರಾಯ್ತು.

ಶಾರದಮ್ಮ : ಗೌರಮ್ಮ . . ನೀವು ಏನೂ ತಿಳಿದುಕೊಳ್ಳದಿದ್ದರೆ ಒಂದು ಮಾತು ಹೇಳಬೇಕೂಂತ ಇದ್ದೀನಿ.

ಗೌರಮ್ಮ : ಇದೇನು ಶಾರದಮ್ಮ—ಹೀಗೆ ಕೇಳ್ತೀರಿ . . ಇಷ್ಟು ವರ್ಷ ಪಕ್ಕದ ಮನೆಯಲ್ಲಿದ್ದುಕೊಂಡು, ಇಷ್ಟೊಂದು ಸ್ನೇಹ ಬೆಳೆದಿದೆ . . ಅಂಥಾದ್ದರಲ್ಲಿ ಹೀಗೆ ಕೇಳುತ್ತೀರಲ್ಲ . . ಅದೇನು ಹೇಳಿ . . ನೀವು ನನ್ನ ತಂಗಿ ಹಾಗೆ . . ನನ್ನಲ್ಲಿ ಯಾಕೆ ಸಂಕೋಚ.

ಶಾರದಮ್ಮ : ಅಲ್ಲ . . ನಿಮಗೇಕೆ ಈ ವಯಸ್ಸಿನಲ್ಲಿ ಈ ಜಗತ್ಸಂಸಾರ - ನಿಮ್ಮ ಮಕ್ಕಳನ್ನೆಲ್ಲಾ ಸಾಕಿ . . ವಿದ್ಯಾ ಬುದ್ಧಿ ಕಲಿಸಿ . . ಅವರವರ ಕಾಲ ಮೇಲೆ ನಿಲ್ಲಿಸಿದ್ದಾಯ್ತು. ಇನ್ನಾದರೂ ಯಜಮಾನರ ಜೊತೆ ಹಾಯಂತ ಇರೋದು ಬಿಟ್ಟು, ಈ ಬಾಲ್ಯ ಸಂಸಾರ ಕಟ್ಟಿ ಕೊಂಡು ಏಗ್ತಾ ಇದ್ದೀರಲ್ಲ . . ನೋಡೋಕೇ ನನಗೆ ಕಷ್ಟವಾಗಿ ಕಾಣುತ್ತೆ . . ಅಲ್ಲದೆ ಪ್ರತಿಯೊಂದಕ್ಕೂ ನೀವೇ ಓಡಾಡ್ತೀರಲ್ಲ . , ಏಕೆ ? ನಿನ್ನೆದಿನ ರೇಷನ್ ಕೂಡ ನೀವೇ ತರುತ್ತಿದ್ದಂತಿತ್ತು.

ಗೌರಮ್ಮ : (ಸುಸ್ತು) ಹುಶ್ . . ಏನು ಹೇಳಲಮ್ಮ . . ಶೇಖರ ಹೊರಗಿನ ಕೆಲಸ ಯಾವುದು ಹೇಳಿದರೂ ಮಾಡೋಲ್ಲ . . ಅವನಾಯಿತು ಅವನ ಸ್ನೇಹಿತರು ಆಟ—ಪಾಟ ಆಯ್ತು . . ಎಲ್ಲದಕ್ಕೂ ನಾನೇ ಸಾಯಬೇಕು.

ಶಾರದಮ್ಮ : ಯಾಕ್ರೀ . . ಮೊದಲೆಲ್ಲಾ ಈ ಕೆಲಸಗಳನ್ನೆಲ್ಲ ಅವನೇ ಮಾಡು ತ್ತಿದ್ದನಲ್ಲ – ನಾನು ನಮ್ಮ ಚಂದ್ರೂನ ಬೈತಾ ಇದ್ದೆ. "ಶೇಖ ರನ್ನ ನೋಡಿಯಾದರೂ ಕೆಲಸ ಮಾಡುವುದನ್ನು ಕಲಿಯಬಾರ ದೇನೋ . . ನೀನೊಬ್ಬ ಸೋಮಾರಿ" ಅಂತ . . ಈಗ್ಯಾಕೆ ಹೀಗೆ

ಮಾಡ್ತಾನೆ . . ಅದೂ ಅವರ ತಾತನೂ ಊರಿನಲ್ಲಿ ಇಲ್ಲದೇ ಇರುವಾಗ . .

ಗೌರಮ್ಮ : ಅವರು ಊರಿನಲ್ಲಿ ಇಲ್ಲದೇ ಇರುವುದೇ ಇಷ್ಟಕ್ಕೆಲ್ಲಾ ಅವಕಾಶ ಆಗಿದೆ ನೋಡಿ . . ಇವನು ಹೀಗೋ . . ಇನ್ನು ಆ ಉಷಾ ಕೇಳೋ ಹಾಗೇ ಇಲ್ಲ—ಈ ಕಡೆ ಕಡ್ಡಿ ತೆಗೆದು ಆ ಕಡೆ ಇಡೋಲ್ಲ. ಹೇಳಿದ್ದೊಂದೂ ಮಾಡೋಲ್ಲ. ನಮ್ಮ ಯಜಮಾನರು ಇಲ್ಲಿದ್ದಾಗ ಎಷ್ಟೋ ಭಯದಿಂದ ಇರ್ತಾ ಇದ್ದರು. ಈಗ ಭಯ, ಭೀತಿ ಒಂದೂ ಇಲ್ಲ, ಹಾಗಾಗಿದೆ . . ಕಾಲೇಜ್ ಮುಗಿಸಿಕೊಂಡು ದೀಪ ಹತ್ತಿಸೋ ಅಷ್ಟರಲ್ಲಿ ಮನೇಲಿರಬೇಕೂಂತ ಅವರ ತಾತನ ಕಟ್ಟಪ್ಪಣೆ ಆಗಿತ್ತು . . ಆಗ ಹಾಗೇ ನಡ್ಕೋತಾ ಇದ್ದಳು . . ಈಗ ಎಷ್ಟು ಹೊತ್ತಿಗೂ ಮನೆಗೆ ಬರೋಲ್ಲ . . ಕೇಳೋಕೆ ಹೋದರೆ "ನೀನು ಅಂದ್ರ, ನಿಮ್ಮಪ್ಪ" ಅಂತಾಳೆ . . ನನಗಂತೂ ಒಂದೂ ತೋರುತ್ತಿಲ್ಲ . . ಏನು ಮಾಡಬೇಕೂಂತ . .

ಶಾರದಮ್ಮ : ಮಕ್ಕಳು ಹಾಗೇನೇ....ಗಂಡಸರ ಹಿಡಿತ ಇಲ್ಲದಿದ್ದರೆ ಅವರನ್ನು ದಾರಿ ತಪ್ಪದಂತೆ ನೋಡಿಕೊಳ್ಳುವುದು ತುಂಬಾ ಕಷ್ಟ..... ಹೀಗಂತೀನಿ ಅಂತ ಏನೂ ತಿಳಿದುಕೊಳ್ಳಬೇಡಿ. ಇತ್ತೀಚೆಗೆ ನಿಮ್ಮ ಉಷಾ....ವನಜನ ಜೊತೆ ತುಂಬಾ ಓಡಾಡ್ತಿರ್ತಾಳಂತೆ...ಈಗಲೇ ಸ್ವಲ್ಪ ಹುಶಾರಾಗಿ ನೋಡಿಕೊಳ್ಳಿ....ನಾಳೆ ಮದುವೆಯಾಗುವ ಹುಡುಗಿ...ಆ ವನಜ ಚೆಲ್ಲು ಹುಡುಗೀಂತ ಕೆಟ್ಟ ಹೆಸರು ತಗೊಂಡಿದಾಳೆ...ಸಹವಾಸದೋಷ......ಆ ಮೇಲೆ ಏನೂ ಮಾಡಲಾಗುವುದಿಲ್ಲ .... ಇವಳಿಗೂ ಕೆಟ್ಟ ಹೆಸರು ಬಂದರೇನು ಮಾಡ್ತೀರಿ ?

ಗೌರಮ್ಮ : ನೀವು ಹೇಳೋದು ನಿಜ.... (ಕೂಗು post-post) ಓ ಕಾಗದ ಯಾರದು....

ಶಾರದಮ್ಮ : ನಿಮಗೇ ಬಂದಿರೋದು....ನಿಮ್ಮ ಮಗಳು ಉಷಾ ಬರೆದಿರೋ ಹಾಗಿದೆ....ನಾಗಪುರದ ಮುದ್ರೆ ಬಿದ್ದಿರೋದು ನೋಡಿದರೆ.... ಹುಂ ತಗೊಳ್ಳಿ.

ಗೌರಮ್ಮ : ನೀವೇ ಒಡೆದು ಓದಿ ಶಾರದಮ್ಮ... ಯಾಕೋ ಒಂದು ಥರಾ ತಲೆ ಸುತ್ತುತ್ತಿದೆ.

ಶಾರದಮ್ಮ : ಇಷ್ಟು ಹೊತ್ತಾದರೂ ಹೊಟ್ಟೆಗಿಲ್ಲದಿದ್ದರೆ ಇನ್ನೇನಾಗುತ್ತೆ.... ಹೇಳಿ.

ಗೌರಮ್ಮ : ಏನೋ ಸುಸ್ತು....ನೀವೇ ಓದಿ ಶಾರದಮ್ಮ....ಉಮಾ ಏನು ಬರೆದಿದ್ದಾಳೋ ನೋಡೋಣ.

ಶಾರದಮ್ಮ : (ಕಾಗದ ಒಡೆದ ಸದ್ದು) ... ಓದ್ತೀನಿ ಕೇಳಿ ಗೌರಮ್ಮ...
ಮಾ॥ ಅಮ್ಮನಿಗೆ ನಮಸ್ಕಾರಗಳು. ಉಭಯ ಕುಶಲೋಪರಿ ಸಾಂಪ್ರತ....ಶೇಖರ ಕಾಗದ ಬರೆದಿದ್ದಾನೆ. ಅವನು ಕಾಲೇಜಿಗೆ ಇನ್ನೂ ಫೀ ಕಟ್ಟಿಲ್ಲವಂತೆ. ನಾನು ಅವನ ಫೀಸಿಗೆ ದುಡ್ಡು ಕಳಿಸಿದ್ದೆನಲ್ಲ ಮೊದಲೇ....ಇನ್ನೂ ಫೀ ಕಟ್ಟಲು ಏಕೆ ಹಣ ಕೊಟ್ಟಿಲ್ಲ?,,ಅಮ್ಮ,,ಅವನೂ ಕಾಲೇಜಿಗೆ ಹೋಗುವ ಹುಡುಗ. ಫೀಸ್ ಅಲ್ಲದೆ ಇತರ ಚಿಕ್ಕ ಪುಟ್ಟ ಖರ್ಚುಗಳು ಇದ್ದೇ ಇರುತ್ತವೆ. ನೀವು ತುಂಬಾ ಕೈಹಿಡಿತಮಾಡಿ ದುಡ್ಡು ಕೊಡುತ್ತೀರೆಂದೂ ನೇರವಾಗಿ ತನಗೇ ಮನಿಆರ್ಡರ್ ಕಳಿಸಬೇಕೆಂದೂ ಬರೆದಿದ್ದಾನೆ. ಅವನಿಗೇ ದುಡ್ಡು ಕಳಿಸುವುದು ಅಷ್ಟು ಚೆನ್ನಾಗಿರುವುದಿಲ್ಲ.... ನೀವು ಅಷ್ಟೊಂದು ಹಿಡಿತ ಮಾಡಬೇಡಿ.... ಸಮ ವಯಸ್ಕರೊಂದಿಗೆ ಇರುವಾಗ ಅವನು ಅವರ ಸಮಕ್ಕೆ ಇರಬೇಡವೇ.... ಮೊದಲು ಅವನ ಫೀಸಿಗೆ ದುಡ್ಡು ಕೊಟ್ಟು, ಕಟ್ಟಲು ಹೇಳಿ.... ಹೀಗೆ ಬರೆದೆನೆಂದು ಏನೂ ತಿಳಿದುಕೊಳ್ಳಬಾರದೆಂದು ನನ್ನ ಬೇಡಿಕೆ. ಇತಿ —ಉಮಾ
ಲಕ್ಷಣವಾಯ್ತು. ನೀವು ಹೇಗಿದ್ದೀರಿ ಅಂತ ನಿಮ್ಮ ಬಗ್ಗೆ ಒಂದು ಕಳಕಳಿಯ ಮಾತೂ ಇಲ್ಲವಲ್ಲ ಈ ಕಾಗದದಲ್ಲಿ.

ಗೌರಮ್ಮ : ಅಯ್ಯೋ ದೇವಾ....ಅವನು ಫೀಸಿಗೆ ಅಂತ ದುಡ್ಡು ಕೇಳಿ ತೆಗೆದುಕೊಂಡು ಯಾವ ಕಾಲ ಆಯ್ತು, ಏನು ಕಥೆ....ಅವರಮ್ಮ ಕಳಿಸಿದ ದುಡ್ಡು ಪೂರ್ತಿ ಖರ್ಚುಮಾಡಿ ನನ್ನ ಹಣದಲ್ಲೂ ಕೇಳಿ ತೆಗೆದು

ಕೊಂಡಿದ್ದಾನೆ... ಮತ್ತೆ ನನ್ನ ಮೇಲೆ ಹೀಗೆ ದೂರು ಹೊರಿಸಿ ಅವರಮ್ಮನಿಗೆ ಕಾಗದ ಬರೆದಿದ್ದಾನಲ್ಲ.... ಏನು ಹೇಳಲಿ ನನ್ನ ಹಣೆಯಬರಹಕ್ಕೆ.

ಬೋರ : ಅವ್ವಾ....ಅವ್ವಾ....(ಜಯಂತ ಅಳುವ ಶಬ್ದ)

ಗೌರಮ್ಮ : ಇದ್ಯಾಕಪ್ಪ ಜಯಂತನನ್ನು ಎತ್ತಿಕೊಂಡು ಬರ್ತಾಇದ್ದೀಯ... ಇಷ್ಟು ಬೇಗ ಸ್ಕೂಲ್ ಬಿಟ್ರಾ...ರಜಾ ಕೊಟ್ಟರೋ...ಆಂ... ಅವನ್ಯಾಕೆ ಅಳ್ತಿದ್ದಾನೆ...ಅಗೋ ಕಾಲಿಗೇನು ಬ್ಯಾಂಡೇಜು.

ಬೋರ : ಮರಕೋತಿ ಆಡೋಕೇಂತ ಮರಹತ್ತಿದ್ದೋರು ಜಾರಿ ಬಿದ್ದು ಬಿಟ್ರು ಕಣವ್ವ...ಟೀಚರ್ ಹೇಳಿದ್ರು, ಡಾಕ್ಟರ ಷಾಪಿಗೆ ಕರ ಕೊಂಡು ಹೋಗಿ ಬ್ಯಾಂಡೇಜ್ ಕಟ್ಟಿಸಿ, ಮನೆಗೆ ಎತ್ತಿಕೊಂಡು ಹೋಗಿ ಬಿಟ್ಟು ಬಿಡು ಅಂತ. (ಬಿದ್ದ ಶಬ್ದ)

ಶಾರದಮ್ಮ : ಯಾಕ್ರೀ ಗೌರಮ್ಮ... ಬಿದ್ದುಬಿಟ್ರೀ... ಅಯ್ಯೋ ದೇವರೇ ಮಾತೇ ಆಡ್ತಾ ಇಲ್ಲವಲ್ಲ...ನೋಡು ಬೋರಾ, ಬೇಗ ಓಡಿ ಹೋಗಿ, ಹಿಂದಿನ ಬೀದಿಲಿರೋ ಡಾಕ್ಟರನ್ನು ಕರೆದುಕೊಂಡು ಬಾ, ಬೇಗ ಬಾ–ತಡಮಾಡಬೇಡ... ಜಯಂತನನ್ನು ಆ ಸೋಫಾ ಮೇಲೆ ಮಲಗಿಸು...ನಾನೂ ಇವರನ್ನು ಒಳಗೆ ಕರೆದುಕೊಂಡು ಹೋಗಿ ಮಲಗಿಸುತ್ತೇನೆ.

ದೃಶ್ಯ ೪

ಶಾರದಮ್ಮ : ಗೌರಮ್ಮ...ಇವತ್ತು ಹ್ಯಾಗಿದ್ದೀರಿ ?...ರಾತ್ರಿ. ನಿದ್ರೆ ಚೆನ್ನಾಗಿ ಬಂತಾ–ಡಾಕ್ಟರು ಕೊಟ್ಟ ಮಾತ್ರೆ ತಗೊಂಡ್ರಾ ?

ಗೌರಮ್ಮ : ರಾತ್ರಿ ಸರಿಯಾಗಿ ನಿದ್ರೆ ಬರಲಿಲ್ಲರೀ...ಮಾತ್ರೆ ತಗೊಂಡೆ ರಾತ್ರೀನೇ.

ಶಾರದಮ್ಮ : ಬೆಳಿಗ್ಗೆ ತಗೊಳ್ಳಲಿಲ್ಲವಾ...ಹೊಟ್ಟೆಗೇನು ತಗೊಂಡಿರಿ ?

ಗೌರಮ್ಮ : ಹಾಲು ಕುಡಿದಿದ್ದೆ...ಈಗ ಏನಾದರೂ ಮಾಡಿಕೋಬೇಕು... ಹೊಟ್ಟೆಗೇನಾದರೂ ತಗೊಂಡ ಮೇಲೆ ಮಾತ್ರೆ ತಗೋತೀನಿ.

ಶಾರದಮ್ಮ : ನಿಮಗೆ ಇಷ್ಟೊಂದು ಮೈಗೆ ಚೆನ್ನಾಗಿಲ್ಲದೇ ಇರುವಾಗ, ನೀವೇ ಒಲೇ ಮುಂದೆ ಹೋಗೋದಾ...ಆ ಮೇಲೆ ಎಲ್ಲಾದರೂ ತಲೆ ಗಿಲೆ ಸುತ್ತಿ ಬಿದ್ದು ಅದೊಂದು ತೊಂದರೆ ಆಗೋಕೆ...ಉಷಾ ಎಲ್ಲಿ...ಅವಳಿಗೆ ಹೇಳಿದರೆ ಅವಳೇ ಏನಾದರೂ ಮಾಡಿಕೊಡು ತ್ತಾಳೆ. ಹೇಗೂ ಭಾನುವಾರ...ರಜಾ.

ಗೌರಮ್ಮ : ಹು...ಏನು ಹೇಳಲಿ ಶಾರದಮ್ಮ....ನಾನು ಹೀಗೆ ಮೈಲಿ ಸರಿ ಇಲ್ಲದೆ ಮಲಗಿದ್ದೀನಿ.... ಅವಳು ಬೆಳಿಗ್ಗೆಯೇ ಸ್ನೇಹಿತೆಯು ರೊಂದಿಗೆ ಪಿಕ್‌ನಿಕ್ ಹೋಗ್ತೀನೀಂತ ಹೋಗಿದ್ದಾಳೆ.... ಇನ್ನು ಶೇಖರನೋ....ಕಾಲೇಜಿನಿಂದ Tour ಕರೆದುಕೊಂಡು ಹೋಗ್ತಿ ದ್ದಾರೆ. ನಾನು ಹೋಗಲೇಬೇಕೂಂತ ಹಠ ಹಿಡಿದು ಕೂತಿ ದ್ದಾನೆ...ಇನ್ನು ಜಯಂತನಿಗೆ ಕಾಲುನೋವು ಜಾಸ್ತಿಯಾಗಿ ರಾತ್ರಿಯಿಂದ ವಿಪರೀತ ಜ್ವರ. ಯಾರ ಕೈಲಿ ಹೇಳಿಕೊಳ್ಳಲಿ ನನ್ನ ಈ ತಾಪತ್ರಯಗಳನ್ನು....(ಕೂಗು post-post) ಏನೋ ಕಾಗದ ಬಂದ್ಹಾಗಿದೆ ತರ್ತೀನಿತಾಳಿ....

ಶಾರದಮ್ಮ : ನೀವು ಎದ್ದು ಆಯಾಸ ಮಾಡ್ಕೋಬೇಡಿ... ಮಲಕ್ಕೊಳ್ಳಿ.... ನಾನೇ ತಂದು ಓದ್ತೀನಿ... (ಕಾಗದ ಒಡೆದ ಸದ್ದು)....ನೋಡಿ ಗೌರಮ್ಮ ನಿಮ್ಮ ಮಗ ನಾಗೇಶ ಬರ್ದಿದ್ದಾನೆ...ಓದ್ತೀನಿ ಕೇಳಿ. ಮಾ|| ಶ್ರೀ|| ಅಮ್ಮನಿಗೆ ನಮಸ್ಕಾರಗಳು

ಇಲ್ಲಿ ಎಲ್ಲರೂ ಕ್ಷೇಮ, ನಿಮ್ಮ ಕ್ಷೇಮಕ್ಕೆ ಬರೆಯಿರಿ. ಬೊಂಬಾ ಯಿಯಲ್ಲಿ ಈಗ ವಿಪರೀತ ಮಳೆ...ಪ್ರವಾಹ ಬಂದು ತುಂಬಾ ಜನಕ್ಕೆ ತೊಂದರೆ ಆಯ್ತು. ಆದರೆ ನಾವಿರುವ ಕಡೆ ಏನೂ ಭಯವಿಲ್ಲ. ಗಾಬರಿ ಮಾಡಿಕೊಳ್ಳಬೇಡ.

ಅದಾಗಿ....ಉಷಾ ಮೊನ್ನೆ ಕಾಗದ ಬರೆದಿದ್ದಳು. ಅವಳಿಗೆ ಸ್ವಲ್ಪವೂ ಸ್ವಾತಂತ್ರ್ಯವಿಲ್ಲವಂತೆ – "ಸ್ನೇಹಿತೆಯರ ಮನೆಗೆ

ಹೋಗಲೂ ಅಡ್ಡಿಮಾಡ್ತಾರೆ, ನನಗೆ ತುಂಬಾ ಬೇಜಾರು" ಅಂತ ಬರೆದಿದ್ದಾಳೆ. ಹೆಣ್ಣು ಹುಡುಗಿಯರನ್ನು ಸ್ವಲ್ಪ ಹಿಡಿತದಲ್ಲಿಡುವುದು ಒಳ್ಳೆಯದು ನಿಜ. ಆದರೆ ಅಮ್ಮಾ, ಕಾಲ ಬಹಳ ಬದಲಾಯಿಸಿದೆ. ಕಾಲಕ್ಕೆ ತಕ್ಕಂತೆ ನಾವೂ ಹೊಂದಿಕೊಂಡು ಹೋಗಬೇಕು ಅಲ್ವಾ, "ನೀನು ಮಾಡುವುದು ತಪ್ಪು" ಎಂದು ಬರೆದ ಎಂದು ದಯವಿಟ್ಟು ತಿಳಿದುಕೊಳ್ಳಬೇಡ. ಅಲ್ಲದೆ, ಸ್ವಲ್ಪ ಆಚೀಚೆ ಓಡಾಡುವುದರಿಂದಲೇ ಯಾರೂ ಕೆಡುವುದಿಲ್ಲ. ಅವಳನ್ನು ಅಷ್ಟೊಂದು ಅಂಕೆಯಲ್ಲಿಡಬೇಡ. ಸ್ನೇಹಿತೆಯರೊಂದಿಗೆ ಓಡಾಡಲು ಅವಕಾಶ ಕೊಡು.

ಇಂತು ನಮಸ್ಕಾರಗಳು
ನಾಗೇಶ.

ಗೌರಮ್ಮ : ಅಯ್ಯೋ ದೇವರೆ ಇವರುಗಳಿಗೆಲ್ಲಾ ಇಷ್ಟು ಮಾಡಿದ್ದಕ್ಕೆ ಇದೇ ನನಗೆ ಸಿಕ್ಕ ಬಹುಮಾನ...ಶಾರದಮ್ಮ ಶಾರದಮ್ಮ...ಯಾಕೋ ತಲೆತಿರುಗು ಜಾಸ್ತಿ ಆಗ್ತಿದಲ್ರೀ.

ಶಾರದಮ್ಮ : ಹಾಗೇ ಮಲಗಿ ಗೌರಮ್ಮ ಉದ್ವೇಗ ಮಾಡಿಕೊಳ್ಳಬೇಡಿ... ನೋಡಿ, ಡಾಕ್ಟರ್ ಏನು ಹೇಳಿದ್ರು ಗೊತ್ತಾ... "Low blood pressure ಇದೆ. ಆದಷ್ಟು ವಿಶ್ರಾಂತಿಯಲ್ಲಿರಲಿ...ಮನಸ್ಸಿಗೆ ಏನೂ ಚಿಂತೆ ಮಾಡಿಕೊಳ್ಳಬಾರದು. ಇಲ್ಲದೇ ಹೋದರೆ Heart ಗೇ ತೊಂದರೆ ಆಗುತ್ತೆ" ಅಂದ್ರು.

ಗೌರಮ್ಮ : (ಅಳು) ಅಯ್ಯೋ ದೇವರೇ ಏನು ಗತಿಯಪ್ಪಾ.

ಶಾರದಮ್ಮ : ಗಾಬರಿ ಆಗಬೇಡಿ...ಗಾಬರಿ ಆಗ್ತೀರೀಂತಲೇ ನಿನ್ನೆ ನಾನು ನಿಮಗೆ ಈ ವಿಷಯ ತಿಳಿಸಲಿಲ್ಲ. ಅದೂ ಮನೇಲಿ ನಿಮ್ಮ ಯಜಮಾನರೂ ಇಲ್ಲ...

ಗೌರಮ್ಮ : ನಮ್ಮ ಯಜಮಾನರನ್ನು ನೋಡದೆ ಹೊರಟು ಹೋಗ್ತೀನೋ ಏನೋ ಕಣ್ರೀ...ಈಗೇನು ಮಾಡಲಿ.

ಶಾರದಮ್ಮ : ಸುಮ್ಮನೆ ಕೆಟ್ಟ ಯೋಚನೆ ಮಾಡಬೇಡಿ. ಯಜಮಾನರನ್ನೂ ನೋಡ್ತೀರಿ, ಆರೋಗ್ಯವೂ ಸುಧಾರಿಸುತ್ತೆ. ನಾನು ನಿನ್ನೇನೇ ನಮ್ಮ ಚಂದ್ರೂ ಕೈಲಿ ನಿಮ್ಮ ಯಜಮಾನರಿಗೆ ಟೆಲಿಗ್ರಾಂ ಕೊಡಿಸಿದ್ದೀನಿ. ಅವರೂ ಇನ್ನೇನು ಬಂದುಬಿಡ್ತಾರೆ. ಯೋಚಿಸ ಬೇಡಿ. ಈಗ ನಾನು ಮನೆಗೆ ಹೋಗಿ ಬಿಸಿ ಬಿಸಿ ಅಡಿಗೆ ಕಳಿಸ್ತೀನಿ. ಸೇರಿದಷ್ಟು ಊಟ ಮಾಡಿ ವಿಶ್ರಾಂತಿ ತಗೊಳ್ಳಿ.

ಗೌರಮ್ಮ : ನಿಮ್ಮ ಉಪಕಾರ ಹೇಗೆ ತೀರಿಸೋದೋ ಕಾಣೆನಮ್ಮ.

ಶಾರದಮ್ಮ : ನೆರೆಹೊರೆ ಅಂದರೆ ಅಷ್ಟೂ ಬೇಡ್ವೆ...ಈಗ ಅದನ್ನೆಲ್ಲಾ ತಲೆಗೆ ಹಚ್ಚಿಕೋ ಬೇಡಿ...ಇದೆಲ್ಲಾ ಎಂತಹ ದೊಡ್ಡ ಉಪಕಾರ,.. ಬಿಡಿ.

ದೃಶ್ಯ ೫

ಶಂಕರಪ್ಪ : ಸಧ್ಯ...ಇಷ್ಟು ಮಾತ್ರ ಚೆನ್ನಾಗಿದ್ದೀಯಲ್ಲ. ಪಕ್ಕದ ಮನೆ ಯೋರು ಕೊಟ್ಟ ಟೆಲಿಗ್ರಾಂ ನೋಡಿದ ಕೂಡ್ಲೆ ಕೈ ಕಾಲೇ ಆಡ ದಂತಾಗಿತ್ತು.

ಗೌರಮ್ಮ : ನಿಮ್ಮನ್ನು ಮತ್ತೆ ನೋಡೋ ಪುಣ್ಯ ಇತ್ತು. ದೇವರ ದಯ ದಿಂದ ಜೀವಂತವಾಗಿದ್ದೀನಿ.

ಶಂಕರಪ್ಪ : ನೀನು ಹೇಳಿದ್ದಕ್ಕೆಲ್ಲಾ ಹೂಂ ಅಂದು ನಿನ್ನನ್ನು "ಈ ಸಂಸಾರದ ಭಾರ ಹೊರು" ಅಂತ ಹೇಳಿ ಬಿಟ್ಟು ಹೋದೆನಲ್ಲಾ, ಅದು ನನ್ನದೇ ತಪ್ಪು ಅಂತ ಈಗ ಅನ್ನಿಸ್ತಾ ಇದೆ. ಇನ್ನು ಸಾಕು ಈ ಸಂಸಾರದ ಜವಾಬ್ದಾರಿ.

ಗೌರಮ್ಮ : ಮತ್ತೆ ಈ ಮಕ್ಕಳ ವಿಚಾರ ?

ಶಂಕರಪ್ಪ : ಇನ್ನೂ ನಿನಗೆ ವ್ಯಾಮೋಹವೇನೇ ಗೌರಿ...ವಯಸ್ಸಾಗ್ತಾ ಆಗ್ತಾ ಆದಷ್ಟು ಈ ವ್ಯಾಮೋಹಗಳಿಂದ ದೂರವಾಗಬೇಕು ಕಣೇ...

ಉಮಾ, ನಾಗೇಶ, ಲಲಿತಾ ಎಲ್ಲರಿಗೂ ಆಗಲೇ ಕಾಗದಗಳನ್ನು ಬರೆದು ಹಾಕಿದ್ದೇನೆ. "ನಿಮ್ಮಮ್ಮನಿಗೆ ಹುಶಾರಿಲ್ಲ, ತತ್‌ಕ್ಷಣ ಬನ್ನಿ" ಎಂದು. ಅವರವರ ಮಕ್ಕಳ ಹೊಣೆಯನ್ನು ಅವರಿಗ ಒಪ್ಪಿಸಿಬಿಡೋಣ. ಅಲ್ಲದೆ ಮಕ್ಕಳು ಚಿಕ್ಕವಯಸ್ಸಿನಲ್ಲಿ ತಂದೆ, ತಾಯಿಗಳೊಂದಿಗೇ ಬೆಳೆಯಬೇಕು. ಮಹಾತ್ಮಗಾಂಧೀಜಿಯವರ ಅಭಿಪ್ರಾಯವೂ ಇದೇ ಆಗಿತ್ತು... ನೀನು ಸ್ವಲ್ಪ ಸುಧಾರಿಸಿ ಕೊಂಡಿದ್ದೀಯ...ಮುಂದಿನ ಬುಧವಾರ ಮದ್ರಾಸ್‌ಗೆ ಹೊರ ಡೋಣ...ಅಲ್ಲಿ ಸುತ್ತ ಮುತ್ತ ಇರುವ ಕ್ಷೇತ್ರಗಳನ್ನು ನೋಡ ಬೇಕೂಂತಿದ್ದೆಯಲ್ಲ...ಇದೂ ಒಂದು ಅವಕಾಶ... ಈ ಮನೆ ಯನ್ನೂ 1ನೇ ತಾ॥ ನಿಂದ ಬಾಡಿಗೆಗೆ ಕೊಟ್ಟಿದ್ದೇನೆ. ಅದರ ಚಿಂತೆಯೂ ನಿನಗೆ ಬೇಡ...ಇರುವಷ್ಟು ಕಾಲ ಇಬ್ಬರೂ ಒಂದೇ ಕಡೆ ನೆಮ್ಮದಿಯಾಗಿರೋಣ... ಟೇಬಲ್ ಮೇಲೆ ಇರೋ ನಿನ್ನ ಮಗ–ಮಗಳ ಕಾಗದಗಳನ್ನು ನೋಡಿದೆ...ಈ ವಯಸ್ಸಿನಲ್ಲೂ ನೀನು ಕಷ್ಟಪಟ್ಟು ಎಲ್ಲರಿಗೂ ಮಾಡಿದ್ದಕ್ಕೆ ಸರಿಯಾದ ಗೌರ ವವೇ ಸಿಕ್ಕಿತು... (ನಗು)... ಆಹಾ... ಗೌರವ... ಗೌರಮ್ಮನ ಗೌರವ.

ಕಾರೈಕ್ಕಾಲಮ್ಮ

ಶಿವನನ್ನು ಸೇರುವ ದಾರಿ ಯಾವುದೆಂದು ಕೇಳುವಿರೊ
ಅವನ ಕೃಪೆಯನ್ನು ಪಡೆಯುವುದು ಎಂತೆಂಬಿರೊ
ಅವನ ಇರುವಿನ ಎಡೆಯಾವುದೆನ್ನುವಿರೊ
ಅದು ನಮ್ಮೆಲ್ಲರ ಹೃದಯ, ಪಾಮರಳಾದ ನನ್ನಂಥವಳ
ಹೃದಯವೂ ಅವನ ವಾಸಸ್ಥಾನವೇ
ಇಲ್ಲಿ ಅವನನ್ನು ಕಾಣಬಹುದು

—ಕಾರೈಕ್ಕಾಲ್ ಅಮ್ಮೆಯಾರ್

ಪಾತ್ರವರ್ಗ

ಸ್ತ್ರೀಯರು

ಪುನೀತವತಿ
ಪಾರ್ವತಿ

ಪುರುಷರು

ಪರಮದತ್ತ
ಪರಮೇಶ್ವರ
ಹಿರಿಯ
ಜನರು

...GURU VISHWARADHY...
JNANA SIMHASAN JNANAMANDIR
LIBRARY
Jangamawadi Math, Varanasi
Acc. No. ....7151..........

ದೃಶ್ಯ ೧

ಪರಮದತ್ತ : ಪುನೀತವತಿ... ಪುನೀತವತಿ

ಪುನೀತವತಿ : ಓ... ಬಂದೆ ಸ್ವಾಮಿ

ಪರಮ : ಈ ಹಣ್ಣುಗಳನ್ನು ತೆಗೆದು ಒಳಗಿಡು.

ಪುನೀತ : ಓ... ಮಾವಿನ ಹಣ್ಣುಗಳು... ಈ ಕಾಲದಲ್ಲಿ... ಇವೆಲ್ಲಿಯವು.

ಪರಮ : ಸಿಂಹಳದಿಂದ ಬಂದವರೊಬ್ಬರು ಅಪರೂಪದ ಈ ಅಕಾಲದ ಫಲಗಳನ್ನು ಕಾಣಿಕೆಯಾಗಿ ತಂದುಕೊಟ್ಟರು. ಈ ಎರಡು ಹಣ್ಣುಗಳನ್ನೂ ತೆಗೆದಿಡು. ಮಧ್ಯಾಹ್ನ ಊಟದೊಂದಿಗೆ ಬಡಿಸುವಿಯಂತೆ... ಆಂ... ಹೊತ್ತಾಯಿತು... ನಾನಿನ್ನುಬರಲೇ.

ಪುನೀತ : ಒಳ್ಳೆಯದು... ಹೋಗಿ ಬನ್ನಿ...

ದೃಶ್ಯ ೨

ಶಿವ : ಭಿಕ್ಷಾಂದೇಹಿ... ಭವತಿ ಭಿಕ್ಷಾಂದೇಹಿ.

ಪುನೀತ : ಇದ್ದು ಇದ್ದು ಭವಿಗಳ ಮನೆಗೆ ಭಿಕ್ಷಕ್ಕೆ ಬರುವುದುಂಟೇ ಸ್ವಾಮಿ ...ಇದು ಭಕ್ತರ ಮನೆಯಲ್ಲ... ಇಲ್ಲಿಗೇಕೆ ಬಂದೆ ಸ್ವಾಮಿ ಭಿಕ್ಷಕ್ಕೆ ?

ಶಿವ : (ಸ್ವಗತ) ಈ ಗುಪ್ತ ಮಾಹೇಶ್ವರಿಯನ್ನು "ಭಕ್ತೆ" ಎಂದರೆ ನೊಂದುಕೊಂಡಾಳು... ಇರಲಿ ಯುಕ್ತಿಯಿಂದ ನುಡಿಸುವೆ... (ಪ್ರಕಟ) ಭಕ್ತರಹುದೋ ಅಲ್ಲವೊ... ಯಾರೆಂದೂ ನನಗೆ ಗೊತ್ತಿಲ್ಲ... ಭಕ್ತಿಗಿಟ್ಟ ಅನ್ನವನ್ನಿಡು ತಾಯಿ... ತುಂಬಾ ಹಸಿವು.

ಪುನೀತ : (ತನ್ನಲ್ಲಿ) ಶಿವನ ಪೂಜೆ ಮುಗಿಸಿ, ನೈವೇದ್ಯವಿಡುವಷ್ಟರಲ್ಲಿ ಈ ಶಿವಭಕ್ತ ಬಂದನಲ್ಲ... ಇರಲಿ... ಶಿವನಿಗೆ ಸಲ್ಲಿಸಬೇಕೆಂದಿದ್ದ ಎಡೆಯನ್ನು ಈ ಶಿವಭಕ್ತನಿಗೇ ನೀಡುವೆನು... (ಪ್ರಕಟ) ಕುಳಿತುಕೊಳ್ಳಪ್ಪಾ... ಊಟಮಾಡು. ಬೇಗ ಊಟ ಮಾಡಿ..: ಮನೆಯವರ್ಯಾರೂ ಕಾಣದ ಮೊದಲೇ ಇಲ್ಲಿಂದ ಹೊರಟು ಬಿಡು... ಇದು ಭವಿಗಳ ಮನೆ... ಶಿವನಿಗೆ, ಶಿವಭಕ್ತರಿಗ್ಯಾವ ಪೂಜೆ, ಸೇವೆಗೂ ಇಲ್ಲಿ ಅವಕಾಶವಿಲ್ಲ... ಆಂ... ತೆಗೆದುಕೋ ಈ ಮಾವಿನ ಹಣ್ಣನ್ನೂ... ನಂಚಿಕೊಂಡು ತೃಪ್ತಿಯಾಗಿ ಊಟ ಮಾಡು...

ಶಿವ : ತಾಯಿ... ಬಹು ಸೊಗಸಾಗಿದೆ ಊಟ... ಹಸಿವೆ ಇಂಗಿತು, ತೃಪ್ತಿಯಾಯ್ತು. ಶಿವ ನಿನಗೆ ಒಳ್ಳೆಯದು ಮಾಡಲಿ... ಹೋಗಿ ಬರುವೆನಮ್ಮಾ...

ದೃಶ್ಯ ೩

ಪುನೀತ : ಸ್ನಾನ, ಪೂಜೆ ಎಲ್ಲ ಆಯಿತಲ್ಲ... ಬನ್ನಿ ಊಟಕ್ಕೆ ಬಡಿಸಿದ್ದೇನೆ.

ಪರಮ : ಓಹೋಹೋ... ಏನು ಇಷ್ಟೊಂದು ಬಗೆ ಅಡುಗೆ ಮಾಡಿಬಿಟ್ಟಿದ್ದೀಯ... ಏನು ವಿಶೇಷ ಇಂದು... ಮಧ್ಯಾಹ್ನ ಅವರು ತಂದು ಕೊಟ್ಟ ಮಾವಿನ ಹಣ್ಣನ್ನು ಬಡಿಸಲೇ ಇಲ್ಲವಲ್ಲ.

ಪುನೀತ : ಇದೋ ತೊಳೆಯುತ್ತಿದ್ದೇನೆ... ತಂದೆ.., ಹುಂ... ತೆಗೆದು ಕೊಳ್ಳಿ.

ಪರಮ : ಪುನೀತವತಿ... ಹಣ್ಣು ಬಹಳ ಸವಿಯಾಗಿವೆ... ಇನ್ನೂ ಒಂದು ಹಣ್ಣಿತ್ತಲ್ಲ ಅದನ್ನೂ ತಾ.

ಪುನೀತ ; ತರುತ್ತೇನೆ... (ಹೆಜ್ಜೆ ಶಬ್ದ...) ಸರ್ವೇಶ್ವರಾ... ಇನ್ನೊಂದು ಹಣ್ಣನ್ನು ಶಿವರೂಪಿಯಾದ ಭಕ್ತನಿಗೆ ನೀಡಿ ಆಯ್ತು...

ಇನ್ನೆಲ್ಲಿಂದ ತರಲಿ..."ಭಕ್ತನಿಗೆ ಕೊಟ್ಟೆ"ಎಂದು ಹೇಳುವಂತೆಯೂ ಇಲ್ಲ... ಈಗೇನು ಮಾಡಲಿ ದೇವಾ... ನೀನೇ ಕಾಪಾಡಬೇಕು... ಓ... ಮೊದಲು ಹಣ್ಣಿಟ್ಟಿದ್ದಲ್ಲಿ ಕೈಹಾಕಲು ಇನ್ನೊಂದು ಹಣ್ಣು ಸಿಕ್ಕಿತಲ್ಲಾ... ದೇವಾ... ದಯಾಮಯಾ... ನಿನ್ನ ಕರುಣೆ ಅಪಾರವಾದುದು... ಇಂದು ಇನ್ನೊಮ್ಮೆ ಈ ಹಣ್ಣಿನ ಗರ್ಭದಲ್ಲಿ ಹುಟ್ಟಿಬಂದಂತಾಯ್ತು (ನಡಿಗೆಯ ಶಬ್ದ) ಹುಂ... ಹಣ್ಣನ್ನು ತೆಗೆದುಕೊಳ್ಳಿ ಸ್ವಾಮಿ.

ಪರಮ : ಆಹಾ... ಏನು ಸವಿ... ಹಿಂದೆ ತಿಂದ ಹಣ್ಣಿನಂತಿಲ್ಲ ಇದು... ಇದೆಲ್ಲಿಯ ಹಣ್ಣು... ಏಕೆ ಮೌನವಾಗಿರುವೆ... ಮೂರುಲೋಕ ಗಳಲ್ಲಿಯೂ ದೊರಕದಂತಹ ಅಪೂರ್ವ ರುಚಿಯ ಈ ಮಾವಿನ ಹಣ್ಣನ್ನು ಎಲ್ಲಿಂದ ತಂದೆ ಪುನೀತವತಿ. ಹೇಳು... ಏಕೆ ಸುಮ್ಮ ನಿರುವೆ ? ಇದು ಈ ನೆಲದ ಫಲವಲ್ಲ... ದೇವಲೋಕದ ಅಮೃತಫಲದಂತಿದೆ.., ಎಲ್ಲಿಯದು ಹೇಳು.

ಪುನೀತ : ಸ್ವಾಮಿ... ನೀವು ಮನೆಗೆ ಬರುವ ಮೊದಲು ಶಿವಭಕ್ತನೊಬ್ಬನು ಭಿಕ್ಷೆಗೆ ಬಂದಿದ್ದನು. ಅವನಿಗೊಂದು ಹಣ್ಣನ್ನು ಎಡೆಮಾಡಿದ್ದೆ. ನೀವೀಗ ಇನ್ನೊಂದು ಹಣ್ಣು ಬೇಕೆಂದು ಕೇಳಿದಿರಿ. ನನಗೆ ಏನು ಮಾಡಲೂ ತೋರಲಿಲ್ಲ... ಅಡುಗೆ ಮನೆಯಲ್ಲಿ ಹಣ್ಣಿಟ್ಟಿದ್ದ ಸ್ಥಳದಲ್ಲಿ ಶಿವನನ್ನು ನೆನೆದು ಕೈಹಾಕಿದೆ... ಅಲ್ಲಿ ಆ ದೇವನಿರಿಸಿದ ಈ ಅಮೃತಫಲ ಕೈಗೆ ಸಿಕ್ಕಿತು. ತಂದು ನಿಮಗೆ ಕೊಟ್ಟೆ. ಅಷ್ಟೆ ನನಗೆ ತಿಳಿದಿರುವುದು..

ಪರಮ : (ನಕ್ಕು) ಓಹೋ... ಹಾಗೋ ಸಮಾಚಾರ... ಹಾಗಾದರೆ ಎಲ್ಲಿ ನಿನ್ನ ಶಿವನನ್ನು ಬೇಡಿ ಇನ್ನೊಂದು ಹಣ್ಣನ್ನು ತರಿಸಿಕೊಡು ನೋಡೋಣ.

ಪುನೀತ : (ತನ್ನಲ್ಲಿ) ನನ್ನ ಗುಪ್ತಾರಾಧನೆ ಇಂದು ಹೀಗೆ ಪ್ರಕಟವಾಗುವಂತಾ ಯ್ತಲ್ಲ... ದಯಾನಿಧಿ... ಭಕ್ತವತ್ಸಲಾ... ನನ್ನ ಮಾತನ್ನು ಸುಳ್ಳಾಗಿಸದಿರು...ಕರುಣಿಸು ತಂದೆ... ಪತಿಯ ಕೋರಿಕೆಯಂತೆ

ಇನ್ನೊಂದು ಹಣ್ಣನ್ನಿತ್ತು ಸಲಹು... ನನ್ನ ಮಾತನ್ನು ನಿಜವಾಗಿಸು... ಓ ಹಣ್ಣು. ಹಣ್ಣಣ್ಣ... ತೆಗೆದುಕೊಳ್ಳಿ ಸ್ವಾಮಿ ನೀವು ಬೇಡಿದ ಹಣ್ಣನ್ನು...

ಪರಮ : (ಆಶ್ಚರ್ಯ) ಹಾಂ... ಇನ್ನೊಂದು ಹಣ್ಣು...ಅರೇ! ಇದೇನಿದು ...ನನ್ನ ಕೈಗೆ ಬರುತ್ತಿದ್ದಂತೆಯೇ ಮಾಯವಾಯಿತಲ್ಲ,.. ಶಿವನ ಪ್ರಸಾದ ರೂಪವಾದ ಹಣ್ಣನ್ನು ಮತ್ತೊಮ್ಮೆ ನೋಡದಂತಾದೆನಲ್ಲ... ದೇವಿ... ಪುನೀತವತಿ... ನೀನು ಸಾಮಾನ್ಯಳಲ್ಲ... ಕಾರಣಿಕೆ... ಶಿವನಲ್ಲಿಟ್ಟಿರುವ ನಿನ್ನ ಪ್ರೇಮ ಅನುಪಮವಾದುದು ...ನಿನಗೆ ಈ ರೀತಿ ತೊಂದರೆ ಕೊಟ್ಟಿದ್ದಕ್ಕೆ ನನಗೆ ತುಂಬಾ ದುಃಖವಾಗುತ್ತಿದೆ...ನನ್ನನ್ನು ಕ್ಷಮಿಸು...ನೀನು ನಿಜವಾಗಿಯೂ ದೈವಾಂಶ ಸಂಭೂತಳೇ ಸರಿ... (ಸ್ವಗತ) ಈಕೆ ಸಾಮಾನ್ಯ ಮಾನವಿಯಲ್ಲ... ನನ್ನ ಗುರುಸ್ಥಾನದಲ್ಲಿರುವವಳು... ಇನ್ನು ಈಕೆಯನ್ನು ಸತಿಯಂತೆ ಭಾವಿಸುವುದು ತರವಲ್ಲ... ವ್ಯಾಪಾರದ ನೆಪದಿಂದ ಈಕೆಯಿಂದ, ಈ ಪಟ್ಟಣದಿಂದಲೇ ದೂರವಾಗಿ ಹೊರಟು ಹೋಗುವುದೇ ಉತ್ತಮಮಾರ್ಗ... ಹಾಂ... ಹಾಗೆಯೇ ಮಾಡುತ್ತೇನೆ.

ದೃಶ್ಯ ೪

ಹಿರಿಯ : ಪರಮದತ್ತಾ...ಹೆಂಡತಿಯನ್ನಗಲಿ ನೀನು ಇಲ್ಲಿಗೆ ಬಂದು ಎಷ್ಟೊಂದು ಕಾಲವಾಯ್ತು...ಏನಪ್ಪಾ ತಿಳಿದವನು ನೀನು... ಸತಿಯನ್ನು ಬಹು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದವನು... "ಆದರ್ಶ ದಂಪತಿಗಳೆಂದರೆ ನೀವೇ" ಎಂದು ಜನ ಬೆರಳುಮಾಡಿ ತೋರಿಸುವಂತೆ ಬಾಳುವೆ ನಡೆಸಿದವರು ನೀವು. ಕೈಹಿಡಿದ ಹೆಂಡತಿಯನ್ನು ಹೀಗೆ ವಿರಹದ ಬೆಂಕಿಗೆ ನೂಕುವುದೇ ? ಅವಳು ಕೊರಗುವುದನ್ನು ನೋಡಲಾರದೆ ನಾವೂ ದುಃಖಪಡುತ್ತಿದ್ದೆವು.

ಈಚೆಗೆ ನೀನು ಈ ನಗರದಲ್ಲಿರುವುದು ತಿಳಿಯಿತು. ಒಡನೆಯೇ ಅವಳನ್ನೂ ಕರೆದುಕೊಂಡು ಇಲ್ಲಿಗೆ ಬಂದೆವು...ಸಾಧ್ವಿಯಾದ ಈ ನಿನ್ನ ಸತಿಯನ್ನು ಸ್ವೀಕರಿಸಿ, ನಮಗೂ ಸಂತೋಷವನ್ನುಂಟು ಮಾಡು...ಏಕೆ ಸುಮ್ಮನಿರುವೆ...ಹಾಂ...ಇದೇನು ಇದೇನು... ಕೈಹಿಡಿದ ಹೆಂಡತಿಗೆ ಗಂಡನು ಸಾಷ್ಟಾಂಗ ನಮಸ್ಕಾರ ಮಾಡು ವುದೇ...ಮತ್ತೆ ಈ ಹೆಂಗಸು...ಈ ಮಗು ಯಾರು...ಏನಿದೆಲ್ಲಾ

ಪರಮ: ಹಿರಿಯರೇ...ಈಕೆ ಸಾಮಾನ್ಯ ಸ್ತ್ರೀಯಲ್ಲ...ಸಾಕ್ಷಾತ್ ದೇವತೆ ಎಂಬುದನ್ನರಿತೆ...ಇಂತಹವಳ ಸಂಗಸುಖ ಬಯಸುವುದು ನನಗೆ ಹಿತವಲ್ಲವೆಂದು ತಿಳಿದು ಮನೆಬಿಟ್ಟುಬಂದೆ...ಈ ಊರುಸೇರಿ ವ್ಯಾಪಾರ ಪ್ರಾರಂಭಿಸಿದೆ...ನನಗಿನ್ನೂ ಲಗ್ನವಾಗಿಲ್ಲವೆಂದೇ ತಿಳಿದು, ಇಲ್ಲಿಯವರು ನನಗೆ ಇನ್ನೊಂದು ಮದುವೆ ಮಾಡಿದರು.. ನಾನೂ ನನ್ನ ಹಿಂದಿನ ವಿಚಾರಗಳನ್ನೊಂದನ್ನೂ ಯಾರಿಗೂ ಹೇಳಲಿಲ್ಲ...ಇಗೋ ಈ ಹುಡುಗಿ ನನ್ನ ಹೆಂಡತಿ...ನಮ್ಮಿಬ್ಬರಿಗೆ ಹುಟ್ಟಿದ ಈ ಮಗುವಿಗೆ ಈ ಪುಣ್ಯಮೂರ್ತಿಯ ಹೆಸರನ್ನೇ ಇಟ್ಟಿರುವೆ "ಪುನೀತವತಿ" ಎಂದು...ನಿತ್ಯವೂ ದೈವೀಸ್ವರೂಪ ಳಾದ ಈ ಪುನೀತವತಿಯ ನಾಮಸ್ಮರಣೆ ಮಾಡಬೇಕೆಂಬ ಅಪೇಕ್ಷೆ ಯಿಂದ ಆಕೆಯ ಹೆಸರಿಟ್ಟಿದ್ದು...ಈಗ ಹೇಳಿ...ದೈವವೆಂದು, ಗುರುವೆಂದು ನಂಬಿದ ಈ ಮಂಗಳೆಗೆ ನಾನು ನಮಸ್ಕರಿಸಿದ್ದರಲ್ಲಿ ತಪ್ಪೇನಿದೆ?

ಪುನೀತ: ಶಿವ ಶಿವಾ...ನನ್ನ ಗುಪ್ತಭಕ್ತಿಯನ್ನು ಈ ರೀತಿ ಪ್ರಕಟಗೊಳಿಸಿದೆ ಯಲ್ಲ ಇದು ಸರಿಯೇ...ನಿನ್ನ ಮೇಲಿನ ಮೀಸಲ ಮೋಹವನ್ನು ನಾಶಮಾಡಿದೆ. ಭಕ್ತಿ ಹೊರಬಿದ್ದು ವ್ಯರ್ಥವಾಯ್ತು...ಭಕ್ತಿ ಮಾಡುವೆನೆಂದು ಹೊರಗೆ ತೋರಿಸಿಕೊಂಡರೆ, ಆ ಭಕ್ತಿಯನ್ನು ಮಾರಿಕೊಂಡಂತಾಗಲಿಲ್ಲವೇ ತಂದೆ!...ಹರಭಕ್ತೆಯೆಂದು ಪ್ರಕಟ ಮಾಡಿ ನನ್ನನ್ನು ಪರಿಹಂಚಿದೆ...ಆಗಲಿ...ಇನ್ನು ಅಂಜುವುದೇಕೆ ಪರಮೇಶ್ವರಾ...ಪತಿಗಾಗಿ ಮೀಸಲಾಗಿದ್ದ ಈ ದೇಹ

ಸೌಂದರ್ಯ...ಈ ಯೌವನ...ಈ ಮಾಂಸದ ಮುದ್ದೆ ಇನ್ನಾರಿಗಾಗಿ...ಇದನ್ನೆಲ್ಲಾ ಈಗಲೇ ಹರಿದು, ಕಳಚಿಹಾಕುತ್ತೇನೆ... ಪರಮಾತ್ಮಾ ನನಗೆ ಪ್ರೇತ ಶರೀರವನ್ನು ದಯಪಾಲಿಸು ತಂದೆ ...(ವಾದ್ಯಗಳ ಶಬ್ದ)

ಜನ : ಓ...ಇದು ಹೆಣ್ಣಲ್ಲ...ಪಿಶಾಚಿ...ಪಿಶಾಚಿ...

ಪುನೀತ : ಬಾಹ್ಯ ಸೌಂದರ್ಯಕ್ಕೆ ಮರುಳಾಗುವ ಜನರ ರೀತಿಯಿದು (ನಕ್ಕು) ನಾನು ಯಾವ ರೀತಿ ಇದ್ದರೆ ಏನು...ಶಿವನೊಬ್ಬನು ಅರಿತರೆ ಸಾಕು...ಶಿವನ ಅನುಗ್ರಹದ ಕಾವಿನಲ್ಲಿ ನನ್ನ ಆತ್ಮ ಕರಗಿತು... ಜೀವನದ ಅಡೆತಡೆಗಳು ಕಳಚಿದವು...ಪಿಶಾಚಿಗಳೊಡೆಯನ ಬಳಿಗೆ ಈ ಪಿಶಾಚಿರೂಪದಿಂದಲೇ ಹೋಗುವೆನು...

ದೃಶ್ಯ ೫

ಪುನೀತ : ಶಂಕರಾ...ಕೃಪಾನಿಧಿ...ಈ ಪ್ರೇತಶರೀರವನ್ನು ಹೊತ್ತು, ನಿನ್ನ ನಾಮಸ್ಮರಣೆ ಮಾಡುತ್ತಾ ತಿರುವಾಲಂಗಾಡ ಕಾನನಕ್ಕೆ ಬಂದುದಾಯ್ತು...ಇಲ್ಲಿ ಈ ನಿನ್ನ ದಿವ್ಯ ಮಂಗಳ ಮೂರ್ತಿಯನ್ನು ನೋಡಿ ಧನ್ಯಳಾದೆ...ದೇವಾ ನಿನ್ನ ಮಹಾ ನಾಟ್ಯವನ್ನು ನೋಡಬೇಕೆಂಬುದು ನನ್ನ ಎದೆಯ ಹಂಬಲ...ಮೈಯೆಲ್ಲ ಕಣ್ಣಾಗಿ ನೋಡುವೆ...ತೋರಿಸಪ್ಪಾ...ನಿನ್ನ ಘನತಾಂಡವದ ಆಡಂಬರವನ್ನು...ಸ್ವಾಮಿ ಇದು ನನ್ನ ಬಿನ್ನಹ......(ತಾಂಡವದ ವಾದ್ಯ ಧ್ವನಿ)...ಶರಣು ತಂದೆ...ಶರಣು...ಸಾಕು ಮಾಡು, ಸಾಕು ಮಾಡು—ಹಲವು ಬಗೆಯ ಮನಮೋಹಕ ನೃತ್ಯಗಳನ್ನು ಕಣ್ಣಾರ ಕಂಡು ಬೆರಗಾದೆ...ಸ್ವಾಮೀ...ನಿನ್ನ ತಾಂಡವವನ್ನು ನೋಡಿ ಅಂಜಿದೆ...ನಿಲ್ಲಿಸು ಸ್ವಾಮಿ...ನಿಲ್ಲಿಸು...ಸಾಕು.

ಶಿವ : ಕಾರೈಕ್ಕಾಲಮ್ಮ...ಕಂಡಿರಾ ಅವ್ವ ನನ್ನ ನಾಟ್ಯವನ್ನು...ಚೆಲುವಿ ನಾಟವನ್ನು ನೋಡಿದಿರಾ...

ಪುನೀತ : ನೀನು ಧಯೆಯಿಂದ ತೋರಿದ ಈ ನಾಟ್ಯವನ್ನು ನೋಡಿ ಬದುಕಿದೆ...ಹರಿ, ಅಜರಿಗೆ ಇಲ್ಲ ಈ ಭಾಗ್ಯ...ನಿನ್ನ ಈ ಕಾಲಾಟವನ್ನು ಶ್ರೇಷ್ಠವಾದ ವೇದಗಳು ಅರಿಯವು...ನಿನ್ನ ನಾಟ್ಯಕ್ಕೆ ಸಮಉಂಟೇ ನಟರಾಜಾ...ಹಾಗೆಯೇ ನನ್ನ ಪುಣ್ಯಫಲಕ್ಕೂ ಸಮವಿಲ್ಲ.

ಶಿವ : ಕೈಲಾಸಪುರಕ್ಕೆ ನಡೆ ತಾಯಿ... (ಮಾಯ...ವಾದ್ಯಶಬ್ದ)

ಪುನೀತ : ಶಿವನಾಜ್ಞೆಯಂತೆ ಕೈಲಾಸಕ್ಕೆ ಹೊರಡುವೆನು...ಇನ್ನು ಶಿವ ಸಾನಿಧ್ಯವಿಲ್ಲದೇ ಇರಲು ಸಾಧ್ಯವಾಗುತ್ತಿಲ್ಲ...ಓ ಈ ಹೆಜ್ಜೆಯ ಗುರುತುಗಳು ಕೈಲಾಸಪುರಕ್ಕೆ ಮೊದಲುಹೋದ ಶಿವಶರಣರ ಹೆಜ್ಜೆಯಗುರುತುಗಳು... ಆ ಮಹಾಮಹಿಮರೆಲ್ಲ ನಡೆದ ಈ ಪುಣ್ಯಸ್ಥಳದ ಮೇಲೆ ನಾನು ಹೆಜ್ಜೆ ಊರಬಾರದು...ಆ ಪುಣ್ಯವಂತರ ಪಾದಗಳ ಗುರುತುಗಳು ನನ್ನ ಶಿರದ ಮೇಲಿರಲಿ... ಕೈಗಳನ್ನೇ ಕಾಲುಗಳನ್ನಾಗಿ ಮಾಡಿಕೊಂಡು ತಲೆಯಡಿಯಾಗಿ ನಡೆಯುತ್ತಾ ಕೈಲಾಸಕ್ಕೆ ಹೋಗುವೆನು...

ದೃಶ್ಯ ೬

ಪಾರ್ವತಿ : ಪರಮಾತ್ಮಾ...ಮರುಳು...ಯಾವುದೋ ಪಿಶಾಚಿ ಬರುತ್ತಿದೆ... ಓ ಅತ್ತನೋಡು ದೇವಾ...ನನಗೆ ತುಂಬಾ ಭಯವಾಗುತ್ತದೆ.

ಶಿವ ; ಅಲ್ಲ, ಅಲ್ಲ, ಗೌರಿ...ಈಕೆ ಕಾರೈಕ್ಕಾಲಮ್ಮ...ಗಿರಿಜೆ. ನಿಮ್ಮತ್ತೆ ಪುನೀತವತಿ...ನನ್ನ ತಾಯಿ, ನನಗೆ ಹಣ್ಣಿತ್ತಹಿತವೆ...ಹಣ್ಣಿತ್ತು, ಅನ್ನವನ್ನಿತ್ತು ಹಸಿವನ್ನು ಹಿಂಗಿಸಿದ ನನ್ನ ಜನನಿ...ಇಂತಹ

ತಾಯಿಯನ್ನು ಮರುಳು ಎನ್ನಬಹುದೇ...ಬೇಡ...ಹಾಗೆನ್ನ ಬಾರದು...ದೇವಿ...ನಿನ್ನತ್ತೆಗೆ ನಮಸ್ಕರಿಸು.

ಪುನೀತ : ಲೋಕಲೋಕಗಳ ಅರಸ...ನೀನು ಹೀಗೆನ್ನಬಹುದೇ...ನಿನ್ನ ದಾಸಿ ನಾನು...ನನಗೆ ನೀನೇ ತಂದೆ...ಪಾರ್ವತೀದೇವಿಯೇ... ತಾಯಿ...(ನಕ್ಕು) ಹುಂ...ನನಗೇ ಏಕೆ ಸಕಲಜೀವರಿಗೂ ನೀವೇ ಮಾತಾಪಿತೃಗಳು. ಈ ಅಭವಾಚಲದ ಪಯಣವನ್ನು ತರುವಂತೆ—ಅಂದು ನನಗೆ ಮಾವಿನ ಹಣ್ಣುಗಳನ್ನು ತಂದು ಇತ್ತು, ಅನುಗ್ರಹಿಸಿದೆ. ಈ ಪಾಮರ ಜೀವದ ಉನ್ನತಿಯನ್ನು ಸಾಧಿಸಿದೆ...ನನ್ನಂತಹ ಪಾಮರರ, ದೀನರ ದೇವನಲ್ಲವೇ....ನೀನು.

ಶಿವ : ತಾಯಿ...ನಿನ್ನ ಭಕ್ತಿಯಿಂದ ಸಂತುಷ್ಟನಾಗಿದ್ದೇನೆ...ನಿನ್ನ ಇಷ್ಟಾರ್ಥವನ್ನು ಸಲ್ಲಿಸುವೆನು...ಬೇಕಾದ ವರವನ್ನು ಬೇಡು.

ಪುನೀತ : ನಿನ್ನನ್ನು ಕಂಡ ಈ ಜೀವಕ್ಕೆ ಭವದ ಆಸೆ ಇಲ್ಲ ತಂದೆ... ಪುನರ್ಜನ್ಮವಿಲ್ಲದಂತೆ ಮಾಡು...ದಾಸಿಗೆ ಶಾಶ್ವತವಾದ ಶಿವ ಲೋಕಾನಂದವನ್ನು ಕರುಣಿಸು....ನನಗೆ ಬೇರೆಯ ಬಯಕೆಗಳಿಲ್ಲ...ನೀನು ನರ್ತನ ಮಾಡುವಾಗ ನಿನ್ನ ಪಾದಗಳಡಿಯಲ್ಲಿ ರಸಾನಂದ ಹೊಂದಿ, ನಿನ್ನ ಮಹಿಮೆಗಳನ್ನು ಸ್ತುತಿಸಿ ಹಾಡುವಂತೆ ಅನುಗ್ರಹಿಸು ತಂದೆ.

ಶಿವ : ತಥಾಸ್ತು...ನೀನು ನನ್ನ ನಾಟ್ಯ ನೋಡಿದ ಸ್ಥಳ ತಿರುವಾಲಂಗಾಡು ಗ್ರಾಮದಲ್ಲಿ ನನ್ನ ಸಾನ್ನಿಧ್ಯ ಸುಖವನ್ನು ಪಡೆದು ಸುಖಿಯಾಗಿರು...(ಮಾಯ...ವಾದ್ಯಧ್ವನಿ) ಉಮೆ...ನೋಡಿದೆಯಾ ಈಕೆಯ ಚಿತ್ತದ ವಿರಕ್ತಿಯನ್ನು...ಶರೀರದ ವ್ಯಾಮೋಹವನ್ನು ತೊರೆದು ಮೈಯ ಮಾಂಸವನ್ನೆಲ್ಲ ಕಿತ್ತು ಈಡಾಡಿ. ಎಲುಬಿನ ಗೂಡಾಗಿ,ಕೈಯನ್ನು ಕಾಲಾಗಿ ಮಾಡಿಕೊಂಡು ತಲೆಯೂರಿನಡೆದು ಕೈಲಾಸಕ್ಕೆ ಬಂದವರುಂಟೇ...ಬರುವ ದಾರಿಯಲ್ಲಿ ವೇಗದ ಗಜ, ತುರಗವನ್ನೇರಿ ಬರುತ್ತಿದ್ದ ನಂಬಿ, ಚೇರಮರು, ತಲೆಯೂರಿ ಬರುವ ಇವಳನ್ನು, "ಈ ವೇಗದಲ್ಲಿ ಬಂದರೆ ಎಂದಿಗೆ ಕೈಲಾಸಕ್ಕೆ

ಬರುವಿರಿ" ಎಂದು ಅಣಕವಾಡಲು ಈ ತಾಯಿ ಸುರಿಸಿದ ಕಣ್ಣೀರು ನಮ್ಮ ಆಸ್ಥಾನವನ್ನೆಲ್ಲಾ ತೋಯಿಸಿತು....ಆಗ ನನ್ನ ಮನದ ಕೈಯನ್ನು ನೀಡಿ ಅವಳನ್ನು ಕೈಲಾಸಗಿರಿಗೆ ಕರೆದು ತಂದೆ...ಭಲೆ ....ಕಾರೈಕ್ಕಾಲಮ್ಮ ಭಲೆ...ಜಗದ ತಾಯಿ ನೀನು.

ಪಾರ್ವತಿ : ಭಕ್ತಿ ಕಂಪಿತನಲ್ಲವೇ ಈ ನನ್ನ ಸ್ವಾಮಿ...ನಿನ್ನನ್ನೊಲಿದು ಬೇಡಿದವರಿಗೆ ಬೇಡಿದುದನ್ನು ನೀಡುವ ಪರಮ ಕರುಣಾಸಿಂಧುವಲ್ಲವೇ ಈ ನನ್ನ ವಲ್ಲಭ...ಕಾರೈಕ್ಕಾಲಮ್ಮ ಹೇಳುವಂತೆ ದೀನರ ದೇವ ನೀನೇ ಅಲ್ಲವೇ ಸ್ವಾಮಿ.



ಹಬ್ಬದ ಉಡುಗೊರೆ

ಪಾತ್ರವರ್ಗ

ಪುರುಷರು	ಸ್ತ್ರೀಯರು
ತಂದೆ	ತಾಯಿ
ಮಹೇಶ — ಮಗ	ಉಮಾ — ಸೊಸೆ
ಬಾಬು — ಮಗು	ವಿಶಾಲಾಕ್ಷಿ — ಮಗಳು
	ಕಾಮಾಕ್ಷಮ್ಮ — ನೆರೆಮನೆಯವರು

ದೃಶ್ಯ ೧

ತಾಯಿ : ಏನೊಂದ್ರೆ...

ತಂದೆ : ಆಂ...

ತಾಯಿ : ಏನ್ರೀ...

ತಂದೆ : ಹೂ... ಹೇಳು ಕೇಳ್ತಾ ಇದ್ದೀನಿ.

ತಾಯಿ : ಹಬ್ಬ ಇನ್ನು 8 ದಿನ ಉಳೀತು. ಸಾಮಾನೆಲ್ಲಾ ಹೊಂದಿಸಿ ಕೊಳ್ಳಬೇಕು.

ತಂದೆ : ಅದೇನೇನು ಬೇಕೋ ಎಲ್ಲಾ ಪಟ್ಟಿ ಬರೆದು ನಿನ್ನ ಮಗನ ಕೈಲಿ ಕೊಡು ತಂದು ಕೊಡುತ್ತಾನೆ... ನನಗಂತೂ ಹಬ್ಬ ಅನ್ನೋ ಸಡಗರವೇ ಇಲ್ಲ.

ತಾಯಿ : ಯಾಕ್ರೀ ಹೀಗೆ ಹೇಳ್ತೀರಾ ?

ತಂದೆ : ಈ ಹಬ್ಬ ಯಾಕೆ ಬಂತಪ್ಪಾ ಅನ್ನಿಸುತ್ತೆ. ಹಬ್ಬದ ದಿನ ನಿನ್ನ ಮಗಳ ಪೆಚ್ಚು ಮುಖ ನೋಡಿಕೊಂಡು ಯಾರು ಸಹಿಸಿಕೊಳ್ಳ ಬೇಕು ? ನಮ್ಮ ಜೀವನದ ಸುಖ, ಸಂತೋಷ, ನೆಮ್ಮದಿ ಯನ್ನೆಲ್ಲಾ ಹಾಳ್ಮಾಡಿಬಿಟ್ಟ ಆ ನಿನ್ನ ಅಳಿಯ ಅನ್ನಿಸಿಕೊಂಡ ವನು. ನಾನು ಎಷ್ಟು ಬೇಡಾಂತ ಹೇಳ್ದೆ. ನೀನು ಕೇಳಿದೆಯಾ ? “ನಮ್ಮ ಅಣ್ಣನ ಒಬ್ಬನೇ ಮಗ, ಡಾಕ್ಟರು, ತೌರ ಸಂಬಂಧ, ಹಾಗೆ, ಹೀಗೆ”, ಅಂತ ಹೇಳಿ ಮಗಳನ್ನು ಕೊಟ್ಬಿಟ್ಟೆ. ಈಗ ಅನುಭವಿಸು.

ತಾಯಿ : (ನಿಟ್ಟುಸಿರು) ಅವನು ಹೀಗಾಗ್ತಾನೆ ಅಂತ ಯಾರಿಗೆ ಗೊತ್ತಿತ್ತು ಹೇಳಿ. ಚಿಕ್ಕಂದಿನಿಂದ ನಮ್ಮ ಕಣ್ಣಮುಂದೆ ಬೆಳೆದ ಹುಡುಗ, ಸಭ್ಯ ಅಂದುಕೊಂಡಿರಲಿಲ್ವೆ, ನೀವು ಕೂಡ ಮದುವೇಲಿ ಎಷ್ಟು ಹೊಗಳಿದಿರಿ. “ವಿದ್ಯಾವಂತನಾದರೂ ಏನು ವಿನಯ, ಏನು ಗಾಂಭೀರ್ಯ”, ಅಂತ.

ತಂದೆ : ಏನೋ ಮುಖ್ಯ ವೃದ್ಧಾಪ್ಯದಲ್ಲಿ ಈ ರೀತಿ ಕೊರಗುವುದು ನಾವು ಪಡೆದು ಬಂದಿದ್ದೇವೆ.

ತಾಯಿ : ಅಂತಹ ಚಿನ್ನದಂತಹ ಹುಡುಗ ಅಮೇರಿಕಾ ದೇಶಕ್ಕೆ ಹೋದ ಕೂಡಲೆ ಹೀಗೆ ಆಗಬಹುದಾ - ನೀವೂ ದುಡುಕಿದಿರಿ. ಯಾರ್‍ಯಾರ ಮಾತೋ ಕೇಳಿ ವಿಚಾರವನ್ನು ಸರಿಯಾಗಿ ತಿಳಿದುಕೊಳ್ಳದೆ ಸಿಟ್ಟು ಬಟ್ಟೆ ಕಾಗದ ಬರೆದು ಬಿಟ್ರಿ...ಅಲ್ಲಿಂದೀಚೆಗೆ ಅವನ ಕಾಗದವೇ ಇಲ್ಲ.

ತಂದೆ : ಬರೆಯೋಕೆ ಮುಖ ಇದ್ರೆ ತಾನೇ ಬರೆಯೋದು. ಸರಿಯಾಗಿ ತಿಳಿದುಕೊಳ್ಳಲಿಲ್ಲಾಂತೀಯಲ್ಲಾ. ಇದಕ್ಕೇನು ಹೇಳಲಿ. ನನ್ನ ಮಗಳ ಸುಖ ನನಗೆ ಬೇಡವಾಗಿದೆಯೆ ? ನನ್ನ ಸ್ನೇಹಿತ ನೀಲ ಕಂಠನ ಮಗ ರವಿ ಅಲ್ಲೇ ತಾನೇ ಇರೋದು. ಅವನೇ ಸ್ವತಃ ಕಾಗದ ಬರೆದಿದ್ದಾನೆ. "ಯಾರೋ ಬೇರೆಯವರ ಜೊತೇಲಿ ಸಂಸಾರ ಮಾಡಿಕೊಂಡಿದ್ದಾನೆ ವಿಶ್ವನಾಥ. ಅವಳಿಗೆ ಮೊದಲಿನ ಎರಡು ಮಕ್ಕಳೂ ಇವೆ" ಅಂತಾ. ಅವನೇನು ಸುಮ್ಮನೆ ಬರೀ ತಾನಾ ? ಅವನಿಗೇನು ನಮ್ಮನ್ನ ಕಂಡರೆ ಹೊಟ್ಟೆಕಿಚ್ಚೆ ?

ತಾಯಿ : ವಿಶಾಲಿ ಅಂದರೆ ಅಷ್ಟು ಪ್ರೀತಿಯಿದ್ದೋನಿಗೆ ಅದಿನ್ನೆಂತಹ ಮಂಕು ಬೂದಿ ಎರಚಿದ್ದಾಳೋ ಏನೋ ಆ ಮಾಯಾಂಗನೆ.

ತಂದೆ : ಇದನ್ನೆಲ್ಲಾ ಕೇಳಿ ನನ್ನ ರಕ್ತ ಎಷ್ಟು ಕುದೀಬೇಡ?" "ಇನ್ನು ನನ್ನ ಮಗಳಿಗೂ ನಿನಗೂ ಯಾವ ಸಂಬಂಧವೂ ಇಲ್ಲ. ಇನ್ನು ಮುಂದೆ ಅವಳಿಗೇನಾದರೂ ಕಾಗದ ಬರೆದರೆ ನಿನಗೆ ತಕ್ಕದ್ದು ಮಾಡು ತ್ತೇನೆ" ಅಂತ ಬರೆದೆ ಅದರಲ್ಲೇನು ತಪ್ಪು ?

ತಾಯಿ : ಹೂಂ... ಯಾರದ್ದೇನೂ ತಪ್ಪಿಲ್ಲ... ಒಟ್ಟಿನಲ್ಲಿ ನಮ್ಮ ಗ್ರಹಚಾರ.

ದೃಶ್ಯ ೨

ಉಮಾ : ವಿಶೂ... ವಿಶಾಲಾ.;. ಏನ್ಮಾಡ್ತೀಯಾ.., ತಲೆ ಬಾಚ್ಕೊಂಡು ಬಟ್ಟೆ ಹಾಕ್ಕೊಳ್ಳಮ್ಮ. ಮಾರ್ಕೆಟ್‌ಗೆ ಹೋಗಿ ನಾಳೆ ಹಬ್ಬಕ್ಕೆ ಒಂದಿಷ್ಟು ತರಕಾರಿ ತರೋಣ.

ವಿಶಾಲಾಕ್ಷಿ : ನೀವು ಹೋಗಿ ಬನ್ನಿ ಅತ್ತಿಗೆ. ನಾ ಬರೊಲ್ಲ.... ನಂಗ್ಯಾಕೋ ತುಂಬಾ ಬೇಜಾರು.

ಉಮಾ : ಯಾಕಮ್ಮಾ ಇಷ್ಟೊಂದು ಬೇಜಾರು ಪಟ್ಕೊಂಡಿದೀಯ. ಮುಖವೆಲ್ಲ ಸಪ್ಪೆಯಾಗಿದೆ.

ವಿಶಾಲಾಕ್ಷಿ : ಅತ್ತಿಗೆ. ನನ್ನ ಮನಸ್ಸಿನ ತಳಮಳ ನಿಮಗೆ ಅರ್ಥವಾಗುತ್ತಾ ? ಇವರು... ಇವರು... ಪೋದವರ್ಷ ಇದೇ ಹಬ್ಬದ ದಿನವೇ ಅಲ್ಲವಾ ಅಮೇರಿಕಾಕ್ಕೆ ಹೊರಟಿದ್ದು ಓಹ್.... ಅವತ್ತು ಎಷ್ಟು ಸಂಭ್ರಮದಿಂದ ಆಯ್ತು ಹಬ್ಬ. ಅವತ್ತು ಪೇಟೆಗೆ ಕರೆದು ಕೊಂಡು ಹೋಗಿ ಬೇಡವೆಂದರೂ ಸಹ ಹಬ್ಬದ ಉಡುಗೊರೆ ಅಂತಾ ಎಷ್ಟು ಭಾರಿ ಸೀರೆ ತೆಗೆದುಕೊಟ್ರು. ನನ್ನಲ್ಲಿ ಅಷ್ಟೊಂದು ಪ್ರೀತಿ ಇಟ್ಕೊಂಡಿದ್ದೋರು...(ಗದ್ಗದ) ಇಷ್ಟು ಬೇಗ ಹೇಗೆ ನಮ್ಮನ್ನು ಮರೆತರು.... ಇಂತಹ ಶಿಕ್ಷೆ ವಿಧಿಸೋಕೆ ನಾನು ಏನು ತಪ್ಪು ಮಾಡಿದ್ದೆ. (ಅಳು)

ಉಮ : ಅಳಬೇಡ, ವಿಶೂ... ನನಗೇನೋ ಇದನ್ನು ನಂಬೋಕೇ ಆಗಲ್ಲ ...ವಿಶ್ವನಾಥ ಒಳ್ಳೆ ಹುಡುಗ... ಖಂಡಿತ ಅವನು ನಮಗೆಲ್ಲ ಇಂತಹ ಅನ್ಯಾಯ ಮಾಡಲಾರ ಅನ್ನಿಸುತ್ತೆ.

ವಿಶಾಲಾಕ್ಷಿ : ಕೈ ಹುಣ್ಣಿಗೆ ಕನ್ನಡಿ ಬೇಕೇ ಅತ್ತಿಗೆ-ನನಗಂತೂ ಬಾಳೇ ಬೇಸರವಾಗಿದೆ... ಕೈ ಹಿಡಿದವನಿಗೇ ಬೇಡವಾದ ಮೇಲೆ ನನ್ನ ಬಾಳಿಗೊಂದು ಅರ್ಥವಿದೆಯೇ.

ಉಮ : ನೀನು ಧೈರ್ಯವಾಗಿರಬೇಕಮ್ಮ...ಬಂದದ್ದನ್ನೆಲ್ಲಾ ಅನುಭವಿಸಲೇಬೇಕಲ್ಲವೇ—

ವಿಶಾಲಾಕ್ಷಿ : ನನಗೆ ಕಾಲ ಕಳೆಯುವುದೇ ಒಂದು ಸಮಸ್ಯೆಯಾಗಿಬಿಟ್ಟಿದೆ, ಅತ್ತಿಗೆ.

ಉಮ : ನೋಡು... ಈಗ ಜಾಣೆ ಹಾಗೆ ನಾನು ಹೇಳಿದಂತೆ ಕೇಳು. ನನಗೆ ಇನ್ನೂ ತುಂಬಾ ಕೆಲಸವಿದೆ. ನಿಮ್ಮಣ್ಣ ಬರೋ ಹೊತ್ತೂ ಆಯ್ತು. ಬಾಬುವನ್ನು ಕರೆದುಕೊಂಡು ಹೋಗಿ ತರಕಾರಿ ತೆಗೆದುಕೊಂಡು ಬಾ, ನೀನು ಬರೋ ಅಷ್ಟರಲ್ಲಿ ನಿನ್ನ ಸಮಸ್ಯೆಗೆ ನಾನು ಪರಿಹಾರ ಹುಡುಕಿರುತ್ತೇನೆ.

ವಿಶಾಲಾಕ್ಷಿ : ಆಗಲಿ ಅತ್ತಿಗೆ, ಹೋಗಿಬರ್‍ತ್ತಿನಿ... ಬಾಬೂ...ಬಾಬೂ

ದೃಶ್ಯ ೩

ಮಹೇಶ : ಏನು... ಉಮಾದೇವಿಯವರು ಬಹಳ ಯೋಚನೆ ಮಾಡುತ್ತಿರುವಂತಿದೆ. ನಾನು ಬಂದು ಐದು ನಿಮಿಷ ಆಯ್ತು. ಇನ್ನೂ ಕಣ್ಣು ಮುಚ್ಚಿಕೊಂಡು ತಪಸ್ಸಿಗೇ ಕುಳಿತಿರುವಂತಿದೆ.

ಉಮಾ : ಹೂಂ... ಮಹೇಶನನ್ನು ಮೆಚ್ಚಿಸೋಕೆ ಉಮೆ ತಪಸ್ಸು ಮಾಡಬೇಕಲ್ಲ ಮತ್ತೆ.

ಮಹೇಶ : ದೇವಿ... ಪ್ರತ್ಯಕ್ಷನಾಗಿದ್ದೇನೆ. ಮೊದಲು ತಿಂಡಿಯನ್ನು ತಾ, ನಂತರ ವರವನ್ನು ಕರುಣಿಸುತ್ತೇನೆ. (ಇಬ್ಬರೂ ನಗು)

ಉಮಾ : ಸಧ್ಯ ಸಾಕು ನಿಲ್ಲಿಸಿ ನಿಮ್ಮ ಹಾಸ್ಯವನ್ನು, ಅತ್ತೆ ಬರ್‍ತಾ ಇದ್ದಾರೆ.

ತಾಯಿ : ಈಗ ಬಂದ್ಯೇನೋ ಮಹೇಶಾ ? ತಿಂಡಿ, ಕಾಫಿ ಆಯ್ತಾ ?

ಮಹೇಶ : ಸಧ್ಯ... ಇಷ್ಟು ಬೇಗ ನಿನ್ನ ಸೊಸೆ ಉಮಾದೇವಿ... ಅನ್ನಪೂರ್ಣೇಶ್ವರಿ ಆಗ್ತಾಳೇನಮ್ಮಾ... ಅವಳನ್ನು ನಂಬಿಕೊಂಡರೆ ತಿಂಡಿ ತಿಂದ ಹಾಗೇ ಇದೆ.

ಉಮಾ : ಯಾರಾದರೂ ನೋಡಿದೋರು ನಿಜ ಅಂದುಕೊಂಡಾರು, ತಗೊಳ್ಳಿ.

ಮಹೇಶ : ಓಹೋ ಬಿಸಿ ಬಿಸಿ ದೋಸೆ ಜೊತೆಗೆ ಸ್ವಲ್ಪ ಬೆಣ್ಣೇನೂ ಹಾಕೇ ಮಹಾರಾಯ್ತೀ.

ಉಮಾ : ಅತ್ತೆ, ನಮ್ಮ ವಿಶೂ ತುಂಬಾ ಬೇಜಾರು ಪಟ್ಕೊಂಡಿದ್ದಾಳೆ. ಹೇಗೂ ಅವಳು ಮದುವೆಗೆ ಮುಂಚೆ ಡಾಕ್ಟರಾಗಬೇಕೂಂತ ಆಸೆ ಪಡ್ತಾ ಇದ್ದಳು. ಅವಳು ರ್‍ಯಾಂಕ್ ಸ್ಟೂಡೆಂಟು. ಸೀಟು ಸಿಕ್ಕೋದೂ ಸುಲಭ. ಈಗ್ಯಾಕೆ ನಾವು ಅವಳನ್ನು M.B.B.S. ಓದಿಸಬಾರದು ?

ತಾಯಿ : (ನಿಟ್ಟುಸಿರು) ನೀ ಹೇಳೋದೆಲ್ಲಾ ಸರಿಯೇ. ಆದರೆ ನಿಮ್ಮ ಮಾವನಿಗೂ ಪೆನ್‌ಷನ್ ಆಯ್ತು. ಮನೆಯ ಭಾರವೆಲ್ಲ ಮಹೇಶನ ಮೇಲಿದೆ. ಈ ಕಾಲದಲ್ಲಿ ಎಷ್ಟು ಸಂಪಾದನೆ ಇದ್ದರೂ ಸಾಲದು. ಅಂಥಾದ್ದರಲ್ಲಿ M.B.B.S. ಓದಿಸೋದೆಂದರೆ ಸುಮ್ಮನೆ ಆಯ್ತಾ ? ಅಷ್ಟೊಂದು ಹಣ ಎಲ್ಲಿಂದ ತರೋದು ?

ಉಮಾ : ಅತ್ತೆ... ನೀವೇನೂ ತಿಳಿದುಕೊಳ್ಳದಿದ್ದರೆ ನಾನೊಂದು ಮಾತು ಹೇಳ್ತೀನಿ.

ತಾಯಿ : ಹೇಳಮ್ಮ, ಅದಕ್ಕೇನು, ನನ್ನ ಹತ್ತಿರ ಯಾಕೆ ಸಂಕೋಚ ?

ಉಮಾ : ನಾನು ಗ್ರ್ಯಾಜುಯೇಟ್ ಅಲ್ವಾ ಕೆಲಸಕ್ಕೆ ಸೇರಿ ಸಂಪಾದಿಸ್ತೀನಿ ಅತ್ತೆ.

ತಾಯಿ : ಬೇಡಮ್ಮಾ.. ನೋಡಿದೋರು ಏನಂತಾರೆ.

ಮಹೇಶ : ಅನ್ನೋರೆಲ್ಲಾ ನಮಗೆ ಸಹಾಯ ಮಾಡ್ತಾರೇನಮ್ಮ. ಇಷ್ಟಕ್ಕೂ ಯಾತಕ್ಕೆ ಅಂತಾರೆ? ಏನು ಕೆಲಸಕ್ಕೆ ಸೇರೋದು ಅವಮಾನವೇ? ಭಿಕ್ಷೆ ಬೇಡೋಕೆ, ಕೆಟ್ಟಕೆಲಸ ಮಾಡೋಕೆ ನಾಚಿಕೆ ಪಡಬೇಕು ಅಷ್ಟೆ. ಉಮಾ ಖಂಡಿತ ಕೆಲಸಕ್ಕೆ ಸೇರಲಿ. ಹೇಗಾದರೂ ನಮ್ಮ ವಿಶಾಲಿ ತನ್ನ ದುಃಖ ಮರೆತು ಬಾಳಿಗೊಂದು ಧ್ಯೇಯ ಇಟ್ಟು ಕೊಳ್ಳಲಿ.

ಉಮಾ : ಮಾವ ಏನಂತಾರೋ,..

ಮಹೇಶ : ಅಪ್ಪನ್ನ ಒಪ್ಪಿಸೋ ಭಾರ ನಿಂದು ಅಮ್ಮ.

ತಾಯಿ : ಆಗಲಪ್ಪ, ಒಳ್ಳೆಯ ಕೆಲಸ ಮಾಡೋಕೆ ಅವರೂ ಒಪ್ಪೇ ಒಪ್ತಾರೆ.

ಮಹೇಶ : ಒಂದು ವೇಳೆ ಒಪ್ದೆ ಹೋದ್ರೆ ಗೊತ್ತೇ ಇದೆಯಲ್ಲಮ್ಮ. ನಿನ್ನ ಮಹಾ ಅಸ್ತ್ರ, ಅದನ್ನು ಉಪಯೋಗಿಸಿಬಿಡಮ್ಮ.

ತಾಯಿ : ಏನೋ ಅದು ?

ಮಹೇಶ : ಇನ್ನೇನು ಅಳು... (ಎಲ್ಲರೂ ನಗುವರು)

ತಾಯಿ : ಹೋಗೋ... ಹುಡುಗ... ತಂದೆ ಆಗಿದ್ರೂ ಇನ್ನೂ ಮಗು ಹಾಗೆ ಆಡ್ತೀಯಲ್ಲೋ.

ದೃಶ್ಯ ೪

ಉಮಾ : (ಬಾಗಿಲು ತಟ್ಟಿದ ಶಬ್ದ) ಯಾರೂ ?...ಬಂದೆ ತಾಳಿ... (ಬಾಗಿಲು ತೆಗೆದ ಶಬ್ದ) ಓ... ಕಾಮಾಕ್ಷಮ್ಮನೋರು...ಬನ್ನಿ ಬನ್ನಿ ಕಾಮಾಕ್ಷಮ್ಮ...ತುಂಬಾ ಅಪರೂಪಕ್ಕೆ ಬಂದ್ರಿ ಕೂತು ಕೊಳ್ಳಿ.

ಕಾಮಾಕ್ಷಮ್ಮ : ಏನಮ್ಮ ಉಮಾ ಚೆನ್ನಾಗಿದ್ದೀಯ. ನಾನು ನಿಮ್ಮತ್ತೆ ಜೊತೆ ಹರಟೋಕೆ ಬರ್ತಾನೇ ಇರ್ತೀನಿ. ಅಪರೂಪ ಏನ್ಬಂತು. ಮನೇಲಿ ನೀನೇ ಇರೋಲ್ಲ...ಎಲ್ಲಿ ನಿಮ್ಮತ್ತೆ ಕಾಣಲ್ಲ.

ಉಮಾ : ಇವತ್ತು ನಂಗೆ ಆಫೀಸಿಗೆ ರಜಾ ಇತ್ತು. ಅತ್ತೆ, ಮಾವ ಇಬ್ಬರೂ ಯಾವುದೋ ಮದುವೆ ಮನೆಗೆ ಹೋಗಿದ್ದಾರೆ. ನಂಗೆ ರಜಾ ಇದ್ದದ್ದರಿಂದ ಅವರಿಗೂ ಸ್ವಲ್ಪ ಬಿಡುವು. ಇಲ್ಲದಿದ್ದರೆ ಎಲ್ಲಿ ? ಅತ್ತೆಗೆ ಮನೆ ಬಿಟ್ಟು ಆಚೆ ಹೋಗೋಕೇ ಆಗಲ್ಲ.

ಕಾಮಾಕ್ಷಮ್ಮ : ಅಲ್ಲ...ನಿನ್ನ ನಾದಿನಿ ಓದಿಸೋಕೋಸ್ಕರ ನೀನ್ಯಾಕೆ ಕೆಲಸಕ್ಕೆ ಸೇರಿ ಕಷ್ಟ ಪಡ್ತಿದ್ದೀಯಮ್ಮ. ಅದರಿಂದ ನಿನಗೇನು ಲಾಭ?

ಉಮಾ : ಇದೇನಮ್ಮ ಹೀಗೆ ಹೇಳ್ತೀರಿ. ನಮ್ಮ ವಿಶು ನನಗೆ ಹೊರಗಿನವಳೇ.

ಕಾಮಾಕ್ಷಮ್ಮ : ಮಾಡಿಸಿಕೊಳ್ಳೋಕೆ ಮಾತ್ರ ಎಲ್ಲ ಒಳಗಿನವರೇ. ನಾಳೆ ನಿಮಗೇನಾದರೂ ಸಮಯಾಂದ್ರೆ ಯಾರೂ ಆಗಲ್ಲ ನೋಡು. ಅಲ್ಲ...ನಾನು ಹೀಗೆ ಹೇಳ್ತೀನಿಂತಾ ಏನೂ ತಿಳಿದುಕೊಳ್ಳಬೇಡ. ಈಗ ಗಂಡ, ಹೆಂಡತಿ ಇಬ್ಬರೂ ಗಳಿಸಿದ್ದನ್ನೆಲ್ಲಾ ಅತ್ತೆ, ಮಾವ,

ನಾದಿನಿ ಇವರುಗಳ ಬಾಯಿಗೆ ಹಾಕಿದರೆ ಮುಂದೆ ನೀವೇನ್ಮಾಡ್ತೀರಿ ?

ಉಮಾ : ಕಾಮಾಕ್ಷಮ್ಮ, ನೀವು ನಮ್ಮ ಅತ್ತೆಯ ಸ್ನೇಹಿತೆ... ಮೇಲಾಗಿ ಹಿರಿಯರು. ನೀವು ನಮ್ಮ ಹಿತವನ್ನು ಬಯಸುವವರಾದರೆ ಇಂತಹ ಮನೆ ಮುರಿಯುವ ಮಾತನ್ನು ಹೇಳಿಕೊಡಬೇಡಿ. ನಾನು ಈ ಮನೆ ಸೇರಿದ ಮೇಲೆ ಇಲ್ಲಿಯವರ ಕಷ್ಟ ಸುಖಗಳೆರಡರಲ್ಲೂ ನನಗೆ ಪಾಲಿದೆ. ಇಷ್ಟಕ್ಕೂ ನಾನೇನು ಮಹಾತ್ಯಾಗ ಮಾಡ್ತಿರೋದು. ಮನೇಲಿ ಅತ್ತೆ ಎರಡು ಹೊತ್ತೂ ನಮ್ಮಗಳಿಗೋಸ್ಕರ ದುಡೀತಿಲ್ವೆ...ನಮ್ಮ ವಿಶಾಲಿ ಡಾಕ್ಟರಾಗೋತನಕ ಮಾತ್ರ ನಾನು ಹೊರಗೆ ಕೆಲಸ ಮಾಡೋದು ಅಷ್ಟೆ.

ಕಾಮಾಕ್ಷಮ್ಮ : ಸರಿಯಮ್ಮ, ನಿಮ್ಮ ನಿಮ್ಮ ಇಷ್ಟ ನನಗೇನು. ಹೊತ್ತಾಯ್ತು ಬರ್ತೀನಮ್ಮಾ.

ಉಮಾ : ಇರಿ ಕುಂಕುಮ ಕೋಡ್ತೀನಿ (ಕಾಮಾಕ್ಷಮ್ಮ ಹೋಗುವಳು)

ವಿಶಾಲಾಕ್ಷಿ : ಅತ್ತಿಗೆ ನಾನು ಕೇಳಿಸ್ಕೋಬೇಕೂಂತ ಬಯಸದೇ ಇದ್ದರೂ ನಿಮ್ಮಿಬ್ಬರ ಮಾತು ಒಳಗೆ ರೂಮಿನಲ್ಲಿದ್ದ ನನಗೆ ಕೇಳಿಸ್ತು. ನಿಜವಾಗಿಯೂ ನನ್ನಿಂದ ನಿಮಗೆ ಎಷ್ಟು ತೊಂದರೆ... (ದುಃಖ)

ಉಮಾ : ಛೇ...ಛೆ. ಅಂತ ಮಾತು ಹೇಳಬೇಡಮ್ಮ. ನನಗೆಂತಾ ತೊಂದರೆ ...ಅಳಬೇಡ...ಮನುಷ್ಯರೂಂದ ಮೇಲೆ ಇದೆಲ್ಲಾ ಸಹಜತಾನೇ

ವಿಶಾಲಾಕ್ಷಿ : ನಿಮ್ಮಂತಹ ರತ್ನವನ್ನು ಕೈ ಹಿಡಿದ ನಮ್ಮಣ್ಣ ನಿಜಕ್ಕೂ ಭಾಗ್ಯಶಾಲಿ.

ಉಮಾ : ಅದೆಲ್ಲಾ ಇರಲಿ...ನೀನು ಈ ಯೋಚನೇನೆಲ್ಲ ತಲೆಗೆ ಹಚ್ಚಿಕೋಬೇಡ. ವಿಶ್ವನಾಥ ಬರುವಷ್ಟರಲ್ಲಿ ನೀನು ಡಾಕ್ಟರಾಗಿ ಅವನಿಗೆ ಆಶ್ಚರ್ಯ ಆಗೋ ಹಾಗೆ ಮಾಡು.

ವಿಶಾಲಾಕ್ಷಿ : ಅತ್ತಿಗೆ, ನೀವಿನ್ನೂ ಅವರು ಬರುವ ಕನಸು ಕಾಣ್ತಿದ್ದೀರಾ ?

ಉಮಾ : ನನ್ನ ಮನಸ್ಸು ಹೇಳ್ತಾ ಇದೆ. ಖಂಡಿತ ಅವನು ಬಂದೇ ಬರ್‍ತಾನೆ ಅಂತ...

ವಿಶಾಲಾಕ್ಷಿ : ನಿಮ್ಮ ಬಾಯಿ ಹರಕೆಯಿಂದ ಹಾಗೇ ಆಗಲಿ. ನನ್ನ ಬಾಳು ಬೆಳಕಾಗಲಿ.

ದೃಶ್ಯ ೫

ತಂದೆ : ಉಮಾ...ಉಮಾ.

ಉಮಾ · ಬಂದೆ ಮಾವ

ತಂದೆ : ನೋಡಮ್ಮ ನಾಳೆ ಹಬ್ಬ...ಎಲ್ಲರಿಗೂ ಉಡುಗೊರೆ ತರೋಣಾಂತ ಆಸೆ...ಆದರೆ ಕೈಯಲ್ಲಿರೋ ಹಣ ಸ್ವಲ್ಪ...ಏನು ಮಾಡೋಣಮ್ಮ?

ಮಹೇಶ : ಅಪ್ಪಾ...ಅಪ್ಪಾ ನಮ್ಮ ವಿಶಾಲಿಗೆ ಪಾಸಾಯ್ತಪ್ಪ. ಅದೂ Ist Classನಲ್ಲಿ ಇನ್ನು ಮೇಲೆ ಅವಳು Dr. ವಿಶಾಲಾಕ್ಷಿ ಅಪ್ಪ.

ಉಮಾ : ಹೌದೇ...ನಿಜವಾಗ್ಲೂ!

ಮಹೇಶ : ಹೌದು ಉಮಾ...ಸುಳ್ಳ್ಯಾಕೆ ಹೇಳಲಿ.

ತಂದೆ : ಎಲ್ಲಾ ದೇವರ ದಯೆ (post--post....ಶಬ್ದ) ಯಾರದೋ ಕಾಗದ ಬಾಬು.

ಬಾಬು : ಅತ್ತೆ ಹೆಸರಿಗೆ ಬಂದಿದೆ ತಾತ - ಫಾರಿನ್ನಿಂದ ಬಂದಿದೆ - ನೋಡು ಏರೋಪ್ಲೇನ್ ಚಿತ್ರ ಇದೆ ಕವರ್ ಮೇಲೆ . .

ಉಮ : ಅತ್ತೆ ರೂಮಿನಲ್ಲಿದ್ದಾಳೆ ಕೊಡೋ ಬಾಬು.

ಬಾಬು : ಅತ್ತೇ . . ಅತ್ತೇ . . ನಿನಗೆ ಕಾಗದ ಬಂದಿದೆ.

ವಿಶಾಲಾಕ್ಷಿ: ನನಗೆಲ್ಲಿಂದ ಬರಬೇಕೋ ಕಾಗದ ಸಧ್ಯ.

ಬಾಬು : ನೋಡತ್ತೆ, ಇಲ್ಲಿ, ನಿನಗೇ ಮಾಮ ಅಮೇರಿಕಾದಿಂದ ಬರ್‍ದಿದ್ದಾರೆ.

ವಿಶಾಲಾಕ್ಷಿ: ಕೊಡು.... ಮರೀ ಇಲ್ಲಿ.

ಬಾಬು: ಕೊಡ್ತೀನಿ, ಆದ್ರೆ ಅದರ ಮೇಲಿರೋ ಸ್ಟ್ಯಾಂಪು ನನಗೇ ಕೊಡಬೇಕು.

ವಿಶಾಲಾಕ್ಷಿ: ಆಗ್ಲಿ . . ಕೊಡಪ್ಪ . . ನೀ ಜಾಣಾ.

ಬಾಬು: ತಗೋ ಅತ್ತೆ . . . ಓ ಪಕ್ಕದ್ಮನೆ ಆನಂದ ಕೂಗ್ತಿದಾನೆ ಹೋಗ್ತೀನಿ.

(ಕಾಗದ ಹರಿದ ಸದ್ದು)

ವಿಶಾಲಾಕ್ಷಿ: (ಕಾಗದ ಓದುವಳು)

ನನ್ನ ಪ್ರೀತಿಯ ರಾಣಿ,

ನನ್ನ ಕಾಗದ ನಿನಗೆ ಅನಿರೀಕ್ಷಿತ ಅಲ್ಲವೇ? ನನ್ನ ವಿಚಾರ ಯಾರೋ ಏನೋ ಹೇಳಿದ್ದು ಕೇಳಿ ನಮ್ಮ ಮಾವನಿಗೆ ತುಂಬಾ ಕೋಪ ಬಂದಿತ್ತು ಅಲ್ವೇ. ಆ ಸಮಯದಲ್ಲಿ ಅವರಿಗೆ ಅಷ್ಟು ಕೋಪ ಬಂದಿದ್ದೂ ಸರಿ ಅನ್ನು. ಆದರೆ ಆ ಕೋಪ ನಿವಾರಿಸುವ ಶಕ್ತಿ ಆಗ ನನ್ನಲ್ಲಿರಲಿಲ್ಲ. ಬಹುಶಃ ನಿನಗೂ ನನ್ನ ಮೇಲೆ ವಿಪರೀತ ಕೋಪ ಬಂದಿತ್ತೇನೋ ಈಗ ಹೇಳ್ತೀನಿ ಕೇಳು. ನಾನು ಇಲ್ಲಿಗೆ F.R.C.S. ಓದೋಕೇಂತ ಬಂದೆನಲ್ಲ, ಬಂದ ಹೊಸದರಲ್ಲಿ ಇಲ್ಲಿ ಒಂದು ಆಸ್ಪತ್ರೆಯಲ್ಲಿ 6 ತಿಂಗಳು ಕೆಲಸ ಮಾಡಿದೆ – ಆಗ ಒಂದು ಆಪರೇಷನ್ ಮಾಡುವಾಗ ನನ್ನಿಂದಾದ ಒಂದು ಅಚಾತುರ್ಯದಿಂದ ಒಬ್ಬ ರೋಗಿ ಸಾಯಬೇಕಾಯ್ತು – ಆತನ ಹೆಂಡತಿ, ಪುಟ್ಟ ಪುಟ್ಟ ಇಬ್ಬರು ಮಕ್ಕಳು ಅನಾಥರಾದರು – ನನ್ನ ತಪ್ಪಿಗಾಗಿ ಬಹು ಪಶ್ಚಾತ್ತಾಪವಾಯ್ತು. ಅದಕ್ಕಾಗಿ ಅವರನ್ನು ನನ್ನ ಬಳಿಯೇ ಇಟ್ಟುಕೊಂಡು, ಆಕೆಯನ್ನು ಇಲ್ಲಿಯ ಒಂದು ಪಾಲಿಟೆಕ್ನಿಕ್ ಕಾಲೇಜಿಗೆ ಸೇರಿಸಿ ಓದಿಸಿದೆ. ಒಬ್ಬ ತಂಗಿಗೆ ಸಹಾಯ ಮಾಡಿದ ಹಾಗಾಯ್ತು. ವಿಶೂ . . ಆಗ ನಾನು ಎಷ್ಟು ಕಷ್ಟಪಟ್ಟೆ ಗೊತ್ತೇ ಹಗಲು ಕೆಲಸ ಮಾಡಿ ರಾತ್ರಿ ನಿದ್ದೆಗೆಟ್ಟು ಓದಿದೆ. ಅದರ ಫಲವಾಗಿ ಇಂದು ಆಕೆ ತನ್ನ ಕಾಲ

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. ....

ಮೇಲೆ ತಾನು ನಿಂತಿದ್ದಾಳೆ. ನನಗೂ ಪಾಸಾಯ್ತು. ವಿಶಾಲೀ, ಇಂದು ನಿನ್ನ ಗಂಡ ಕರ್ನಾಟಕ ದೇಶದ ದೊಡ್ಡ ಡಾಕ್ಟರುಗಳಲ್ಲಿ ಒಬ್ಬ. ನಿನಗೆ ಹೆಮ್ಮೆ ಅಲ್ಲವೇ ? ಈಗ ನಿನಗೆ ಗೊತ್ತಾಯ್ತಾ ನಿನ್ನ ಗಂಡ.. ಹೂವಿನಿಂದ ಹೂವಿಗೆ ಹಾರುವ ಭ್ರಮರವಲ್ಲ ಅಂತಾ, ನಾನು ಇಲ್ಲಿಂದ ಹೊರಟಿದ್ದೇನೆ. ಯಾವಾಗ ನಿನ್ನ ಬಳಿ ಬರುತ್ತೇನೋ ಅನ್ನಿಸುತ್ತಿದೆ. ರೆಕ್ಕೆ ಇಲ್ಲದಿದ್ದರೂ ವಿಮಾನದಲ್ಲಿ ಹಾರಿಕೊಂಡು ಬಂದುಬಿಡುತ್ತೇನೆ. ಹಬ್ಬದ ದಿನ ಅಲ್ಲಿಂದ ಹೊರಟಿದ್ದೆ ಅಲ್ವಾ.. ಪುನಃ ಅದೇ ಹಬ್ಬಕ್ಕೆ ಅಲ್ಲಿಗೆ ಬರುತ್ತಿದ್ದೇನೆ. ಉಡುಗೊರೆ ಏನು ಬೇಕು ? ನಾನೇ ಸಾಕಾ ?

ಇತಿ,

ವಿಶಾಲಾಕ್ಷಿಯ ಮನೋನಯನದೆದುರು
ಸದಾ ಸುಳಿದಾಡುತ್ತಿರುವ
ವಿಶ್ವನಾಥ.

ಅಮ್ಮಾ, ಅತ್ತಿಗೆ - ಇವರು ನಾಳೆ ಬರ್ತಾರಂತೆ. ಕಾಗದದಲ್ಲಿ ಬರ್ದಿದ್ದಾರೆ.

ತಂದೆ : ನಿಜಾನಾ.. ಮತ್ತೆ.. ಅವಳು..

ವಿಶಾಲ : ಅದೆಲ್ಲ ಸುಳ್ಳು ಅಪ್ಪ.. ಅದೊಂದು ದೊಡ್ಡ ಕಥೆ – ಆಮೇಲೆ ಹೇಳ್ತೀನಿ – ಇವರು ಖಂಡಿತ ನಾಳೆ ಬರ್ತಾರೆ.

ಉಮ : ಮಾವ.. ಎಲ್ಲರಿಗೂ ಉಡುಗೊರೆ ತರೋಕೆ ಹಣ ಇಲ್ಲಾಂತ ಯೋಚಿಸ್ತಿದ್ದಿರಿ. ವಿಶಾಲಾಕ್ಷಿ ಡಾಕ್ಟರಾದಳು. ಬರೋಲ್ಲ ಅಂದುಕೊಂಡಿದ್ದ ಅಳಿಯ 6 ವರ್ಷಗಳ ಮೇಲೆ ಬರ್ತಾರೆ. ಇನ್ನು ಇದಕ್ಕಿಂತ ಹಬ್ಬದ ಉಡುಗೊರೆ ಬೇಕಾ ?

ತಂದೆ : ನಿಜಾಮ್ಮ.. ಆ ಪರಮಾತ್ಮ ನಮಗೆಲ್ಲಾ ಎಂತಹ ಉಡುಗೊರೆ ಕಳ್ಸಿದ್ದಾನೆ. ಹಬ್ಬದ ಉಡುಗೊರೆ. ನಿಜವಾಗೂ ಹಬ್ಬದ ಉಡುಗೊರೆ.

'ಐದು ಪ್ರಸಾರ ನಾಟಕಗಳು' ಕುರಿತು....

ಈ ಕಿರುಹೊತ್ತಿಗೆಯಲ್ಲಿರುವ ಐದೂ ರೂಪಕಗಳಲ್ಲಿ ವಾಚಕರು ಸಂತೋಷಿಸಿ ತಲೆದೂಗುವಂತೆ ತಲ್ಲೀನರಾಗುವಂತೆ ತೃಪ್ತಿ ನೀಡಿದ್ದಾರೆ........ಎಲ್ಲ ರೂಪಕಗಳಲ್ಲಿಯೂ ಕಾವ್ಯಮಯ ತಿಳಿ ಭಾಷೆಯ ಭಾವ–ಪುಂಗಿಯನಾದ–ನಿನಾದ ಕೇಳಿಬರುತ್ತದೆ. ಪ್ರತಿರೂಪಕದಲ್ಲಿಯೂ ಚರಿತ ಚಿತ್ರಣಕ್ಕೆ ಲೋಪ ಬಾರದ ರೀತ್ಯ ಸಂಕಲನತ್ರಯ ಹಾಗೂ ಕಥೋಪಕಥನದಲ್ಲಿ ಹಾನಿಯುಂಟಾಗದಂತೆ ಚಿತ್ರಿಸುವುದರಲ್ಲಿ ಶ್ರೀಮತಿ ಜಯಮ್ಮನವರು ಸಾಕಷ್ಟು ಎಚ್ಚರಿಕೆ ವಹಿಸಿದ್ದಾರೆ.

ಕೃ. ನಾ. ರಾವ್

ಕನ್ನಡಪ್ರಭ — 30-10-83

ಕಿರುನಾಟಕಗಳ ಕೊರತೆ ಇರುವ ಇಂದಿನ ಸ್ಥಿತಿಯಲ್ಲಿ ಈ ನಾಟಕಗಳು ಅಮೂಲ್ಯ ಕೊಡುಗೆ. ಶ್ರೀಮತಿ ಜಯಾ ರಾಜಶೇಖರ್ ಆರಿಸಿಕೊಂಡ ಐದು ನಾಟಕ ವಸ್ತುಗಳಲ್ಲೂ ಎರಡು ಬಗೆಯ ವಿಶೇಷತೆಯನ್ನು ಗಮನಿಸಬಹುದು. ಮೊದಲನೆಯದಾಗಿ ಭಾರತ ನಾರಿಯ ನಿರ್ಧಾರಶಕ್ತಿ ಮತ್ತು ಅವಳ ಸ್ವತಂತ್ರ ಪ್ರವೃತ್ತಿ. ಎರಡನೆಯದಾಗಿ "ಪ್ರಾಚೀನ ಸಾಹಿತ್ಯದಲ್ಲಿ ಚಿರನೂತನವಾದ ರಮ್ಯತೆ ಇದೆ" ಎಂಬುದರ ನಿರೂಪಣೆ........ಕೇವಲ ಮಾತುಗಳಿಂದಲೇ ದೃಶ್ಯಗಳ ಕಲ್ಪನೆ ಮೂಡಿಸಬೇಕಾದ ಪರಿಸ್ಥಿತಿಯಲ್ಲೂ ಈ ಐದು ನಾಟಕಗಳೂ ಬಹು ರಂಜನೀಯವಾಗಿ ಸ್ವಾಭಾವಿಕ ಸುಂದರ ಮಾತುಗಳಿಂದ ಬಿಗಿಯಲ್ಪಟ್ಟಿದೆ.

ಪುಸ್ತಕ ವಿಮರ್ಶೆ

ವನಿತಾ–ಏಪ್ರಿಲ್ 1984

"ಐದು ಪ್ರಸಾರ ನಾಟಕಗಳು" ಓದಿ ನೋಡಿದ್ದೇನೆ.... ಅವುಗಳಲ್ಲಿರುವ ವಸ್ತುಗೌರವ ಮುಖ್ಯವಾದುದು. ಉತ್ತಮ ಸನ್ನಿವೇಶಗಳನ್ನು ಆರಿಸಿದ್ದೀರಿ. ಅಲ್ಲಮಪ್ರಭುವಿನೊಡನೆ ಶ್ರೀಕೃಷ್ಣನೂ ಇದ್ದಾನೆ. ಈ ರೇಡಿಯೋ ರೂಪಕಗಳಲ್ಲಿ ಮಧುರ ಸಂಭಾಷಣೆಗಳಿರುತ್ತವೆ. ಕೇಳಲು ಬರೆದುದು ಓದಿದರೂ ಬಾಳುತ್ತದೆ.

ವಿ. ಕೃ. ಗೋಕಾಕ

"ಐದು ಪ್ರಸಾರ ನಾಟಕಗಳು" ಓದಿ ಮುಗಿಸಿದೆ. ಇವುಗಳಲ್ಲಿ 'ಮಾಯಾ ಕೋಲಾಹಲ' ಅತ್ಯುತ್ತಮವೆಂದು ನನ್ನ ನಂಬಿಕೆ. ಪೌರಾಣಿಕ ಕತೆಗಳು ನಿಮ್ಮ ಕೈಯಲ್ಲಿ ರಮಣೀಯ ನಾಟಕಗಳಾಗಿ ಮೂಡಿ ಬಂದಿವೆ. ನಿಮ್ಮ ಭಾಷೆ ತುಂಬಾ ಸೊಗಸಾಗಿದೆ.

ಅನುಪಮಾ ನಿರಂಜನ

"ಐದು ಪ್ರಸಾರ ನಾಟಕಗಳು" ಓದಿದೆ. 'ಶಬರ ಶಂಕರ' ಅತ್ಯುತ್ತಮ ಎನ್ನಿಸಿತು. ಉತ್ತಮ ವಸ್ತು.... ಸುಸಂಸ್ಕೃತ ಭಾಷೆಯ ಬಳಕೆಯಿಂದ ಸೊಗಸಾದ ನಾಟಕಗಳಾಗಿವೆ. ನಿಮ್ಮಲ್ಲಿ ಪ್ರತಿಭೆ–ಆಸಕ್ತಿ ಸಮಸಮವಾಗಿವೆ. ಧಾರಾಳವಾಗಿ ಬಳಸಿ ಇನ್ನೂ ಒಳ್ಳೆಯ ಕೃತಿಗಳು ಬರಲೆಂದು ಹಾರೈಸುವೆ.

ಟಿ. ಸುನಂದಮ್ಮ



ಶ್ರೀಮತಿ ಜಯಾ ರಾಜಶೇಖರ್‌ರವರು ಕನ್ನಡ ಖ್ಯಾತ ಲೇಖಕಿಯರಲ್ಲಿ ಒಬ್ಬರು. ಕತೆಗಾರರಾಗಿ, ಪ್ರಬಂಧಕಾರರಾಗಿ, ಅಪೆರಾ ಹಾಗೂ ಪ್ರಸಾರ ನಾಟಕ ರಚಕ ರಾಗಿ ಇವರು ಈಗಾಗಲೇ ಹೆಸರು ಮಾಡಿ ದ್ದಾರೆ. ಸಂಗೀತ ಹಾಗೂ ಗಮಕ ಕಲೆ ಗಳನ್ನು ಬಲ್ಲವರಾಗಿದ್ದಾರೆ. ಇವರದು ವಿಶೇಷವಾಗಿ ಆಸ್ತೀಕ ಮನೋಧರ್ಮ. ಸಂಸ್ಕೃತಿ ಪರವಾದ ಚಿಂತನೆ, ಪ್ರಾಂಜಲ ಮನಸ್ಸಿನ ತಪಸ್ಸು. ಶುದ್ಧ ಸಾಹಿತ್ಯ ರಚನೆ ಶೂನ್ಯ ಸಂಪಾದನೆ ಮೊದಲಾದ ಪುಣ್ಯ ಕೃತಿಗಳ ಪಠನೆ—ಇವು ಇವರ ಹವ್ಯಾಸ ಗಳು. ಈ ಗುಣ ಅನುವಂಶೀಯ ಇವರ ತಂದೆ 'ಸಕಲ ಜೀವಾತ್ಮರಿಗೆ ಲೇಸನೇ' ಬಯಸುತ್ತಿದ್ದ .ಶಿವಮೊಗ್ಗೆಯ ಹೆಸರಾಂತ ಅಡಿಕೆ ವ್ಯಾಪಾರಿಗಳಾದ ಶ್ರೀವಾಣೀ ಮರುಳಯ್ಯನವರು. ಇವರ ಪತಿ ಅಂಥದೇ ಮಾನವೀಯ ಮೌಲ್ಯಗಳನ್ನುಳ್ಳ ಡಾಕ್ಟರ್ ಎಲೆ ರಾಜಶೇಖರ್‌ರವರು. ಕರ್ನಾಟಕದ ಹೆಸರಾಂತ ಮನೆತನ ಗಳಲ್ಲಿ 'ವಾಣಿ' ಮತ್ತು 'ಎಲೆ' ಮನೆತನಗಳು ಹೆಸರಿಸಬೇಕಾದಂಥವು. ಇಂತಹ ಮನೆಗಳಲ್ಲಿ ಹಣತೆಯಾಗಿ ಹುಟ್ಟಿ, ಜ್ಯೋತಿಯಾಗಿ ಬೆಳಗುತ್ತಿರುವವರು ನಮ್ಮ ಖ್ಯಾತ ಲೇಖಕಿ ಜಯಮ್ಮನವರು.

ಶ್ರೀಮತಿ ಜಯ ರಾಜಶೇಖರರವರು ಲಲಿತ ಕಲೆಯನ್ನು ಒಲಿದು, ಜೀವನ ಕಲೆ ಯನ್ನು ಮರೆತವರಲ್ಲ. ಡಾಕ್ಟರ್ ರಾಜಶೇಖರ್ ಮತ್ತು ಶ್ರೀಮತಿ ಜಯಮ್ಮನವರ ದಾಂಪತ್ಯ ಜೀವನ 'ಸಗ್ಗಕ್ಕೆ ಕಿಚ್ಚು ಹಚ್ಚು' ಎನ್ನುವಂಥದು. ಇವರೀರ್ವರೂ ಪರಸ್ಪರ ಧನ್ಯತೆಯನ್ನು ಧಾರಣಮಾಡಿಕೊಂಡಿದ್ದಾರೆ. ಬಸವಣ್ಣನ ಬಾಳಸಂಗಾತಿ ನೀಲಮ್ಮನ ವಚನ ನಮ್ಮ ಈ ಆದರ್ಶ ದಂಪತಿಗಳಿಗೆ ತುಂಬಾ ಚೆನ್ನಾಗಿ ಒಪ್ಪುತ್ತದೆ. ಕೇಳಿ :

ಮಡದಿ ಎನ್ನಲಾಗದು ಬಸವಂಗೆ ಎನ್ನನು
ಪುರುಷನೆನ್ನಲಾಗದು ಬಸವನ ಎನಗೆ
ಉಭಯ ಕುಳವ ಅರಿದು ಬಸವಂಗೆ ಶಿಶುವಾನಾದೆನು
ಬಸವನೆನ್ನ ಶಿಶುವಾದನು
ಪ್ರಮಥರು ಪುರಾತನರು ಸಾಕ್ಷಿಯಾಗಿ ಸಂಗಯ್ಯನಿಕ್ಕಿದ
ದಿಬ್ಯವಮೀರದೆ ಬಸವನೊಳಗಾನಡಗಿದೆ

—ಇಂತಹ ಭಕ್ತಿಯ ಭಾವುಕಿ, ನಿಷ್ಠೆಯ ನಿಧಿ, ಸದಾಚಾರ ಸಂಪನ್ನೆ, ಶುದ್ಧ ಸಲಿಲದ ತೀರ್ಥ ಸಾಹಿತ್ಯ ರಚಕಿ ಶ್ರೀಮತಿ ಜಯಾ ರಾಜಶೇಖರರವರು ಕನ್ನಡಿಗರಲ್ಲಿ ಭರವಸೆ ಮೂಡಿಸಿದ ಕವಯಿತ್ರಿಯೂ ಹೌದು.

—ಪ್ರಕಾಶಕರು